SAPTHAGIRI (KANNADA)
SPIRITUAL ILLUSTRATED MONTHLY
Volume:04, Issue: 2 Pages:56
September 2024, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2024
ಬೆಲೆ ರೂ. 20/-



## ತಿರುಚಾನೂರು

## ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು

## 16-09-2024 ರಿಂದ 18-09-2024 ರ ವರೆಗೆ



# ತಿರುಮಲೆ
# ಶ್ರೀವೇಂಕಟೇಶ್ವರ ಸ್ವಾಮಿಯವರ
# ವಾರ್ಷಿಕ ಬ್ರಹ್ಮೋತ್ಸವಗಳು
# 2024 ಅಕ್ಟೋಬರ್ 04 ರಿಂದ 12 ರವರೆಗೆ

**04-10-2024**
ಶುಕ್ರವಾರ
ಹಗಲು : ಬಂಗಾರು ತಿರುಚ್ಚಿ ಉತ್ಸವ,
ಧ್ವಜಾರೋಹಣ
ರಾತ್ರಿ : ದೊಡ್ಡಶೇಷವಾಹನ

**05-10-2024**
ಶನಿವಾರ
ಹಗಲು : ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**06-10-2024**
ಭಾನುವಾರ
ಹಗಲು : ಸಿಂಹವಾಹನ
ರಾತ್ರಿ : ಮುತ್ತಿನಚಪ್ಪರವಾಹನ

**07-10-2024**
ಸೋಮವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಸರ್ವಭೂಪಾಲವಾಹನ

**08-10-2024**
ಮಂಗಳವಾರ
ಹಗಲು : ಪಲ್ಲಕಿಯಲ್ಲಿ
ಮೋಹಿನಿ ಅವತಾರೋತ್ಸವ
ರಾತ್ರಿ : ಗರುಡವಾಹನ

**09-10-2024**
ಬುಧವಾರ
ಹಗಲು :ಹನುಮದ್ವಾಹನ
ರಾತ್ರಿ : ಗಜವಾಹನ

**10-10-2024**
ಗುರುವಾರ
ಹಗಲು ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**11-10-2024**
ಶುಕ್ರವಾರ
ಹಗಲು :ಸ್ವರ್ಣರಥೋತ್ಸವ
ರಾತ್ರಿ : ಅಶ್ವವಾಹನ

**12-10-2024**
ಶನಿವಾರ
ಹಗಲು :ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

# ಭಗವದ್ಗೀತೆ



ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ  ಹನ್ಯತೇ ॥

**ಜೀವನವನ್ನು ಯಾರಾದರೂ ಕೊಲ್ಲಬಹುದು ಎಂದಾಗಲಿ ಆಗ ಜೀವ ಸಾಯುತ್ತಾನೆ ಎಂದಾಗಲೀ ತಿಳಿದವರು ಏನನ್ನೂ ತಿಳಿದಿಲ್ಲ. ಏಕೆಂದರೆ ಜೀವ ಕೊಲ್ಲಲೂ ಆರ, ಸಾಯಲೂ ಆರ.**

(ಶ್ರೀಮದ್ಭಗವದ್ಗೀತೆ  ಅಧ್ಯಾಯ - 2, ಶ್ಲೋಕ -19)



ಬಂದೆ ಬಂದೆ ಸ್ವಾಮಿಯೆ ಬಂದೆ ಬಂದೆ
ಬಂದೆ ಬಂದೆ ಗೋವಿಂದ ಗೋವಳ ಬಾಂಧವ ಭಕ್ತವತ್ಸಲ
ಇಂದಿರೇಶ ಶ್ರೀವೇಂಕಟಾ ನಿನ್ನ ಸಂದರುಶನಕೆ ಸಾಗಿ ನಾನಿಲ್ಲಿ

ನಡೆದು ನಡೆಸುತ ನುಡಿದು ನುಡಿಸುತ  ಅಡಿಗಡಿಗೆ ಕಾಪಾಡುತ
ಒಡನೆ ಆಡುತ ಬಿಡದೆ ಕ್ಷಣವನು ಸಡಗರದಿ ಕರೆತರಲು ನಾನಿಲ್ಲಿ
ಒಂದು ರೂಪದಿ ನಿಂದು  ಎನ್ನಲಿ ಚೆಂದದಿಂ ಕರೆತಂದೆ  ಇಲ್ಲಿಗೆ
ಒಂದರಿಯ ನಿನ್ನ ವಂದಿಸುವ ಬಗೆ ಒಂದೊದಗೂ ಎನ್ನ ವದನಕೆ

ಆಪ್ತ ಅನಿಮಿತ್ತ ವ್ಯಾಪ್ತ ಸರ್ವತ್ರ ಗುಪ್ತ ಗುಣಗಣ ಪೂರ್ಣನೆ
ಪ್ರಾಪ್ತ ನೀನೆನಗಾಗಬೇಕೆಂದು ವ್ಯಾಪ್ತಿ ನಿನ್ನದು ಹುಡುಕುತಲಿ ನಾ ಬಂದೆ
ಬಂದೇ ಬಂದೇ ನೀ ಬಂದಂತೆ ಕರೆ ತಂದುದಕೆ ಫಲ ನೀನೆ ಬಲ್ಲೆ
ಸಂದರುಶನ ನಿನಗೆ ನೀ ಮಾಳ್ಪಂದವನು ನೋಳ್ಪಾತುರದಿ ನಾ ಬಂದೆ

ಏನು ಕೊಡಲಿಲ್ಲ ಏನು ಬೇಡಲಿಲ್ಲ ಏನು ಪಡೆಯಲೊ ಕರುಣಿಯೆ
ನೀನು ಕೊಟ್ಟ  ಸ್ವತಂತ್ರದಾಫಲ ನಿನಗೆ ಅರ್ಪಿಸಬೇಕೆನುತ ನಾನಿಲ್ಲಿ
ರಕ್ಷಶಿಕ್ಷಕ ಮೋಕ್ಷದಾಯಕ ಸೂಕ್ಷ್ಮಘನ ಮಹವ್ಯಾಪಕ
ಕುಕ್ಷಿಯೊಳು  ಜಗದ್ಭರಿತ ಪೂರಿತ ಅಕ್ಷಯ ಫಲದಾಯಕಾ
ನಮೋ ನಮೋ ನಾಗಾರಿವಾಹನ ನಮೋ ನಮೋ ಸುರಸುಪ್ರಸನ್ನನೆ
ನಮೋ ನಮೋ ಗೋಪಾಲವಿಠಲ ನಮಿಪ ಭಕ್ತರ ಸಲಹುವನನೆಂದು

- ಶ್ರೀ ಗೋಪಾಲ ದಾಸರು



(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಮಾಸಾಹಸೋಕ್ತಿಘನಕಂಚುಕವಂಚಿತಾನ್ಯಃ ಪಶ್ಯತ್ಸು ತೇಷು ವಿದಧಾಮ್ಯತಿಸಾಹಸಾನಿ।**

**ಪದ್ಮಾಸಹಾಯ ಕರುಣೇ ನ ರುಣತ್ಸಿ ಕಿಂ ತ್ವಂ ಘೋರಂ ಕುಲಿಂಗಶಕುನೇರಿವ ಜೇಷ್ಟಿ ತಂ ಮೇ ॥ 94॥**

ಹಿಂದಿನ ಪದ್ಯದಲ್ಲಿ ಅಪರಾಧಿ ಚೇತನರಿಗೆ ಭಗವಂತನು ವಿಧಿಸುವ ಶಿಕ್ಷೆಯನ್ನು ತಿಳಿದವನಾಗಿಯೂ ಅಪರಾಧವನ್ನೆಸಗುತ್ತಿರುವ ತನ್ನನ್ನು ಭಗವಂತನು ಶಿಕ್ಷೆಗೆ ಗುರಿ ಪಡಿಸದೆ ತನ್ನ ಮೇಲೆ ಕೃಪಾಕಟಾಕ್ಷವನ್ನು ಬೀರಿ ರಕ್ಷಿಸುವಂತೆ ಮಾಡಬೇಕೆಂದು ದಯಾದೇವಿಯನ್ನು ಪ್ರಾರ್ಥಿಸಿದ ಆಚಾರ್ಯರು, ಈ ಪದ್ಯದಲ್ಲಿ ತಾನು ಮಾಡುವ ಅಪಚಾರವನ್ನು ವಿವರಿಸಿ ತನ್ನಲ್ಲಿರುವ ಆಪ್ರವೃತ್ತಿಯನ್ನು ತಡೆಗಟ್ಟಬೇಕೆಂದು ಪ್ರಾರ್ಥಿಸುತ್ತಾರೆ.ಪ್ರಪಂಚದಲ್ಲಿ ಸಾಮಾನ್ಯವಾಗಿ ಉಪದೇಶಕರು, ಅಂದರೆ ಇತರರಿಗೆ ತಿಳುವಳಿಕೆ ಹೇಳುವವರು, ತಾವು ಬಹಳ ಮಟ್ಟಿಗೆ ತಿಳಿದವರೆಂದು ಭಾವಿಸಿಕೊಳ್ಳುತ್ತಾರಲ್ಲದೆ, ತಮ್ಮ ಜ್ಞಾನಪ್ರೌಢಿಮೆಯನ್ನು ತೋರ್ಪಡಿಸಿಕೊಳ್ಳುವುದಕ್ಕೆ ಯಾವಾಗಲೂ ಅವಕಾಶವನ್ನು ಹುಡುಕುತ್ತಿರುತ್ತಾರೆ. ಹೇಗಾದರೂ ಅವಕಾಶ ದೊರಕಿಸಿಕೊಂಡು ಸಾರ್ವಜನಿತ ವೇದಿಕೆಯ ಮೇಲೆ ನಿಂತು ಉಚ್ಚಸ್ವರದಲ್ಲಿ ತತ್ತ್ವಗಳನ್ನೂ ಆದರ್ಶಗಳನ್ನೂ ಉಪದೇಶಿಸುತ್ತಾರೆ. ಆದರೆ ವೈಯಕ್ತಿಕವಾಗಿ ತಮ್ಮ ಜೀವನದಲ್ಲಿ ತಾನೇ ಉಪದೇಶಿಸುವ ಯಾವ ತತ್ತ್ವವನ್ನಾಗಲಿ, ಆದರ್ಶವನ್ನಾಗಲಿ ಅನುಸರಿಸುವುದಿಲ್ಲ. ಅನೇಕ ವೇಳೆ ತದ್ವಿರುದ್ಧವಾಗಿ ಆಚರಿಸುತ್ತಿರುತ್ತಾರೆ. ತಮ್ಮ ಈ ವರ್ತನೆಯನ್ನು ತೋರಿಸಿಕೊಟ್ಟರೆ ಇಂತಹವರಿಗೆ ಅಸಾಧಾರಣವಾದ ಕೋಪವುಂಟಾಗುವುದೂ ಸ್ವಾಭಾವಿಕವೇ. ಹೀಗೆ ಲೋಕದಲ್ಲಿ ನುಡಿದಂತೆ ನಡೆಯುವವರು ವಿರಳವೇ, ಇದನ್ನು ಆಚಾರ್ಯರು ಕುಲಿಂಗ ಪಕ್ಷಿಯ ದೃಷ್ಟಾಂತದಿಂದ ವಿವರಿಸಿದ್ದಾರೆ. ''ಕುಲಿಂಗ'' ಪಕ್ಷಿಯು ಮಾ ಸಾಹಸಂ ಕುರು ಅಂದರೆ 'ಸಾಹಸವನ್ನು ಮಾಡಬೇಡ- ಎಂದು ಹೇಳುತ್ತಿರುತ್ತದಂತೆ. ಆದರೆ ತಾನು ಮಾತ್ರ ಬಾಯಿ ತೆರೆದುಕೊಂಡು ಕುಳಿತಿರುವ ಹುಲಿಯ ಬಾಯಿಯಲ್ಲಿ ಹೋಗಿ ಕುಳಿತುಕೊಂಡು ಅದರ ಹಲ್ಲಿನ ಸಂದಿನಲ್ಲಿ ಸಿಕ್ಕಿ ಕೊಂಡಿರುವ ಮಾಂಸದ ಚೂರನ್ನು ತನ್ನ ಕೊಕ್ಕಿನಿಂದ ಕುಕ್ಕಿ ತೆಗೆಯುತ್ತಿರುತ್ತದೆಂಬುದು ಪ್ರತೀತಿ. ಇತರರಿಗೆ ಮಾತ್ರ ಸಾಹಸದ ಕೆಲಸವನ್ನು ಮಾಡಬಾರದು ಅದು ಅಪಾಯಕರವೆಂದು ಹೇಳುತ್ತ ತಾನು ತೆರದ ಹುಲಿಯ ಬಾಯಲ್ಲಿ ಕುಳಿತುಕೊಳ್ಳುವಂತಹ ಸಾಹಸವನ್ನು ಮಾಡುತ್ತದೆ.

ಇದೇ ರೀತಿ ತಾನೂ ಕೂಡ ಇತರರಿಗೆ ಸಾಹಸವನ್ನು-ಭಗವಂತನ ವಿಚಾರದಲ್ಲಿ ಅಪರಾಧವನ್ನಾಚರಿಸುವಂತಹ ಸಾಹಸವನ್ನು ಮಾಡಬೇಡಿರೆಂದು ಉಪದೇಶಿಸುತ್ತ ಆ ಉಪದೇಶವಾಕ್ಯವನ್ನೇ ಕವಚವನ್ನಾಗಿ ಹೊಂದಿರುವವನೆಂದೂ, ಅದರ ಸಹಾಯದಿಂದ ಇತರರಿಂದ ತನಗೊದಗಬಹುದಾದ ದೂಷಣೆಯ ರೂಪವಾದ ಆಕ್ರಮಣವನ್ನು ತಡೆದುಕೊಳ್ಳುವನೆಂದೂ, ಈ ರೀತಿಯಾಗಿ ತಾನು ಇತರರನ್ನು ವಂಚಿಸುತ್ತಿರುವವನೆಂದೂ ಹೇಳಿಕೊಳ್ಳುತ್ತಾ ತಾನು ದೀನನೂ ನೀಚನೂ, ಆದ್ದರಿಂದಲೇ ದಯೆಯ ಕೃಪಾಕಟಾಕ್ಷಕ್ಕೆ ಪಾತ್ರನೆಂಬುದನ್ನೂ ವಿಶದಪಡಿಸಿದ್ದಾರೆ. ಈ ರೀತಿ ತಮ್ಮಲ್ಲಿರುವ ದೋಷವನ್ನು ಅರಿತುಕೊಂಡು ಅದನ್ನು ಇತರರೆದುರಿಗೆ ಒಪ್ಪಿಕೊಳ್ಳುವುದು ಸಾಮಾನ್ಯರ ಲಕ್ಷಣವಲ್ಲ. ಇದು ಆಚಾರ್ಯರ ಹಿರಿಮೆಯ ದ್ಯೋತಕವಾಗಿದೆ. ತನ್ನ ಸಮಸ್ತವನ್ನೂ ಭಗವಂತನಲ್ಲಿ ಅರ್ಪಿಸಿ ಸಂಪೂರ್ಣವಾಗಿ ಶರಣಾಗತನಾಗಿರುವ ಪ್ರಪನ್ನನಿಗೆ ತನ್ನ ದೋಷಗಳನ್ನು ಆ ಭಗವಂತನೆದುರಿಗೆ ಒಪ್ಪಿಕೊಳ್ಳುವುದೇನು ಕಷ್ಟದ ಕೆಲಸ ಹೀಗೆ ಪ್ರಪತ್ತಿ ಮಾಡಿದವರು ಭಗವಂತನ ದಯಾಭಿಕ್ಷೆಯವನ್ನು ಕೇಳುವುದರಲ್ಲಿ ತಾನೇ ಆಶ್ಚರ್ಯವೇನಿದೆ? ಅಂತೆಯೇ ಅಚಾರ್ಯರು ದಯಾದೇವಿಯನ್ನು ಪ್ರಶ್ನಿಸುತ್ತಾ, ನಾನು ನನ್ನ ದೋಷಗಳನ್ನೊಪ್ಪಿಕೊಂಡು ನಿನ್ನ ಮೊರೆಹೊಕ್ಕಿರುವಾಗ ನೀನು ನನ್ನಲ್ಲಿರುವ ಈ ಭಗವದ್ವಿರೋಧ ರೂಪವಾದ ಪ್ರವೃತ್ತಿಯನ್ನು ತಡೆಯುವುದಿಲ್ಲವೇ ಎಂದು ಕೇಳುತ್ತಾರೆ. ಅಂದರೆ ದಯಾದೇವಿಯು ಭಗವದ್ವಿರೋಧರೂಪವಾದ ಈ ಪ್ರವೃತ್ತಿಯನ್ನು ಖಂಡಿತವಾಗಿಯೂ ತಡೆಗಟ್ಟುವಳೆಂದು ಭಾವ. ಅಲ್ಲದೆ, ನುಡಿದಂತೆ ನಡೆಯದೇ ಇರುವಂತಹ ಪಾಪವು ತನ್ನಿಂದ ಘಟಿಸದೇ ಇರಲೆಂಬ ಅವರ ಆಶೆಯೂ ಕೂಡ ಇದರಿಂದ ವ್ಯಕ್ತವಾಗುತ್ತದೆ.

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಕ್ರೋಧಿ ನಾಮ ಸಂವತ್ಸರ ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ : 04 ಸೆಪ್ಟೆಂಬರ್ - 2024 ಸಂಚಿಕೆ : 02




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ|| ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.,

**ಸಂಪಾದಕರು**
ಡಾ|| ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ . ಪಿ. ರಾಮರಾಜು , ಎಮ್.ಎ.,
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ಕೂಡುಮಲೆ (ಕುರುಡುಮಲೆ ಗಣಪತಿ ಕ್ಷೇತ್ರ) | - ಶ್ರೀಮತಿ. ಪಾರಿಜಾತ ಬಿ.ಎಸ್. | 07 |
| ಅನಂತ ವರಗಳ ಕರುಣಿಸುವ ಪದ್ಮನಾಭ | - ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 09 |
| ಪ್ರೋಷ್ಠಪದಿ ಭಾಗವತ | - ಶ್ರೀಮತಿ. ಮಾಧುರಿ ದೇಶಪಾಂಡೆ | 13 |
| ವರಾಹ ವೈಭವ | - ಶ್ರೀಮತಿ. ಕೆ.ವಿ. ಪದ್ಮಾವತಿ | 14 |
| ಎಳೆಯಷ್ಟಮಿ | - ಶ್ರೀಮತಿ. ವೀಣಾ ರವಿಕುಮಾರ್ | 17 |
| ಹರಿಕಥಾಮೃತ ಸಾರ ಮಹಿಮೆ<br>ಬಲು ಅಪಾರ ಸರ್ವಪ್ರತೀಕ ಸಂಧಿ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 18 |
| ಆಂಜನೇಯನ ಮಾತೆ ಅಂಜನಾದೇವಿ | - ಹನುಮಂತ ಮ. ದೇಶಕುಲಕರ್ಣಿ | 20 |
| ವಿಶ್ವಕರ್ಮ ಜಯಂತಿ | - ಕೆ. ನಾಗಾರ್ಜುನ್ | 22 |
| ಶ್ರೀ ವೇಂಕಟೇಶ್ವರಸ್ವಾಮಿಯವರ ಆಲಯ | - ದಿ||ಬಿ.ಎನ್.ಶ್ರೀನಿವಾಸನ್ | 24 |
| ಶ್ರೀ ಅನಂತಪದ್ಮನಾಭ ಸ್ವಾಮಿ<br>ದೇವಸ್ಥಾನ ಕಾಸರಗೋಡು | - ಡಾ|| ಆರ್.ಶೈಲಜ ಶರ್ಮ | 31 |
| ಮೇಲುಕುಂಟೆಯ ನವನೀತ<br>ಬಾಲಕೃಷ್ಣ ದೇವಾಲಯ | - ಕೆಂಗೇರಿ ಚಕ್ರಪಾಣಿ | 32 |
| ಅಸ್ಕಿಹಾಳ ಗೋವಿಂದದಾಸರು | - ಶ್ರೀಧರ ರಾಯಸಂ | 34 |
| ತಿರುಇಂದಳೂರ್ | - ಸೂರ್ಯವಂಶಿ | 36 |
| ಸಂಸ್ಕೃತ ಕಲಿಯೋಣ | - ವಿ. ಪ್ರದೀಪ್ ಕುಮಾರ್ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್.ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | - ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ|| ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ -ಪಾಪ ಕರ್ಮಗಳ ಲೆಕ್ಕ | - ಪ್ರಣವ | 48 |
| ಚಿತ್ರಕಥೆ- ಸ್ವಾಮಿಯವರೇ ಸಾಕ್ಷಿ | - ಎಂ. ಗಂಗಾಧರ್ ಪ್ರಸಾದ್ | 52 |


ಮುಖಚಿತ್ರ - ಶ್ರೀಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು , ತಿರುಚಾನೂರು
ಹಿಂಬದಿಚಿತ್ರ - ಉಭಯದೇವಿಯರೊಂದಿಗೆ ಶ್ರೀ ಗೋವಿಂದರಾಜ ಸ್ವಾಮಿಯವರ ಪವಿತ್ರೋತ್ಸವಗಳು , ತಿರುಪತಿ


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |



# ಪಿತೃ ಪ್ರೀತಿಕರವಾದ ಭಾದ್ರಪದ ಮಾಸ

**ಸಂಪಾದಕೀಯ**

**"ಮಾತೃದೇವೋ ಭವ! ಪಿತೃದೇವೋ ಭವ"**

ಜನ್ಮವನ್ನು ನೀಡಿದ ತಂದೆತಾಯಿಗಳು ದೇವರಿಗಿಂತಲೂ ಶ್ರೇಷ್ಠವಾದವರೆಂದು, ಅವರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಅವರನ್ನು ತ್ರಿಮೂರ್ತಿ ಸ್ವರೂಪರೆಂದು ಅರ್ಚಿಸುವ ಉತ್ಕೃಷ್ಟವಾದ ಸಂಸ್ಕೃತಿಗೆ ನಮ್ಮ ಹಿಂದೂಧರ್ಮವು ಪ್ರಪಂಚದಲ್ಲೇ ಹೆಸರುವಾಸಿಯಾಗಿದೆ. ಹೆತ್ತವರನ್ನು ಕಡೆಗಣಿಸಿದವನೂ ಪರಮೇಶ್ವರನೂ ಒಪ್ಪಿಕೊಳ್ಳುವುದಿಲ್ಲವಂತೆ!

ತಂದೆತಾಯಿಗಳಾದ ಪಾರ್ವತೀಪರಮೇಶ್ವರರಿಗೆ ವಿನಾಯಕನು ಮಾಡಿದ ಪ್ರದಕ್ಷಿಣೆಯ ಪುಣ್ಯದ ಫಲವು ಆತನಿಗೆ ಗಣಾಧ್ಯಕ್ಷನ ಪದವಿಯನ್ನು, ಹಾಗೇ ಸಕಲವಿಘ್ನವಿನಾಶಕನೆಂಬ ಹೆಸರನ್ನು ನೀಡಿ ಲೋಕಪೂಜಿತನನ್ನಾಗಿ ಮಾಡಿತು. ಆದ್ದರಿಂದಲೇ ಮನುಷ್ಯನು ಪಿತೃ ದೇವತೆಗಳನ್ನು ಪೂಜಿಸಿ ಅವರಿಗೆ ಉತ್ತಮಗತಿಯನ್ನು ಉಂಟುಮಾಡಿ, ಮಾನವನನ್ನು ಧರ್ಮ ದೀಕ್ಷಾಪರನನ್ನಾಗಿ ಮಾಡುವುದಕ್ಕೆ ನಮ್ಮ ಶಾಸ್ತ್ರವು ಕೆಲವು ನಿಯಮಗಳನ್ನು ತಿಳಿಸಿವೆ.

ಚಾಂದ್ರಮಾನದ ಪ್ರಕಾರ ಹುಣ್ಣಿಮೆಯ ದಿನದಂದು ಚಂದ್ರನು ಪೂರ್ವಾಭಾದ್ರ ಅಥವಾ ಉತ್ತರಾಭಾದ್ರ ನಕ್ಷತ್ರದ ಸಮೀಪದಲ್ಲಿ ಸಂಚರಿಸುವ ಮಾಸವನ್ನು ಭಾದ್ರಪದ ಮಾಸ ಎಂದು ಕರೆಯುತ್ತಾರೆ. ಈ ಮಾಸದಲ್ಲೇ ಶ್ರೀ ಮಹಾವಿಷ್ಣುವಿನ ದಶಾವತಾರಗಳಲ್ಲಿ ಮುಖ್ಯವಾದ ವರಾಹ-ವಾಮನಾವತಾರಗಳೂ ಸಂಭವಿಸಿದುವು. ಸ್ವರ್ಣಗೌರೀವ್ರತ, ಋಷಿಪಂಚಮೀವ್ರತ, ಅನಂತಪದ್ಮನಾಭವ್ರತದಂತಹಾ ವ್ರತಗಳನ್ನೂ ನಾವು ಈ ತಿಂಗಳಿನಲ್ಲೇ ಆಚರಿಸುತ್ತೇವೆ. ಈ ರೀತಿ ಆಯಾ ವ್ರತಗಳು, ಹಬ್ಬಗಳನ್ನು ಆಚರಿಸುವುದು ಅತ್ಯಂತ ವಿಹಿತವಾದುದು.

ಆದರೆ ಭಾದ್ರಪದ ಬಹುಳ ಪಕ್ಷದ ದಿನಗಳೆಲ್ಲವೂ ಪಿತೃದೇವತೆಗಳಿಗೆ ಪ್ರೀತಿಕರವಾದುದಾದರೆ. ಶುಕ್ಲಪಕ್ಷ ಪಾಡ್ಯಮಿಯಿಂದ ಹುಣ್ಣಿಮೆಯವರೆಗೂ ಅನೇಕ ವ್ರತಗಳನ್ನು ಆಚರಿಸುವುದಕ್ಕೆ ಅತ್ಯಂತ ಸೂಕ್ತವಾದ ಕಾಲವಾಗಿದೆ. ಪ್ರತಿಯೊಂದು ಪೂಜೆಯಲ್ಲೂ ಪ್ರಥಮ ಪೂಜೆಯನ್ನು ಸ್ವೀಕರಿಸುವ ವಿನಾಯಕನ ಹಬ್ಬವಾದ ವಿನಾಯಕ ಚೌತಿ ಈ ಪಕ್ಷದಲ್ಲೇ ಬರುತ್ತದೆ.

ಪ್ರಥಮದೇವ, ಪ್ರಧಾನದೇವ ಗಣಪತಿ. ಭೌತಿಕವಾದ ಕಾರ್ಯವಾಗಲೀ, ಆಧ್ಯಾತ್ಮಿಕ ಸಾಧನೆಯಾಗಬಹುದು-ಅವುಗಳಲ್ಲಿ ಉಂಟಾಗುವ ವಿಘ್ನಗಳನ್ನು ಪರಿಹರಿಸಿ ಸಿದ್ಧಿಯನ್ನು, ಬುದ್ಧಿಯನ್ನು ಪ್ರಸಾದಿಸುವ ದಿವ್ಯ ಶಕ್ತಿಯನ್ನೇ ಗಣಪತಿಯಾಗಿ ಪೂಜಿಸುವುದು ವೇದ ಸಂಪ್ರದಾಯವಾಗಿದೆ. ಎಲ್ಲರದಲ್ಲೂ ವಿಘ್ನನಾಶವನ್ನೇ ಎಲ್ಲರೂ ಬಯಸುತ್ತಾರೆ. ಆ ವಿಘ್ನಗಳನ್ನು ನಿವಾರಿಸುವ ಈ ದೇವನನ್ನು ವಿಘ್ನ ಸಂಹಾರಕನಾಗಿ ಆರಾಧಿಸುತ್ತೇವೆ. ಗಜವದನನು ಓಂಕಾರಕ್ಕೆ ಪ್ರತೀಕವಾದವನು, ಎಲ್ಲಾ ಶಬ್ದಗಳಿಗೂ ಆದಿ ಓಂಕಾರ ಅದಕ್ಕೆ ಪ್ರಥಮ ದೇವತೆ ಗಜವದನ! ವೇದಗಳ ಪ್ರಕಾರ ಮಂತ್ರಗಣಗಳಿಗೆ, ಜೀವಗಣಗಳಿಗೆ ಅಧಿಪತಿಯಾದ ಪರಮಾತ್ಮನೇ ಗಣಪತಿ. ಅವನನ್ನು ಆರಾಧಿಸಿ,ಪೂಜಿಸಿ ಆತನ ಆಶೀರ್ವಾದಗಳನ್ನು ಪಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಒಂದೊಂದು ಮಾಸದಲ್ಲಿ ಒಂದೊಂದು ದೇವತೆಗಳಿಗೆ ಪ್ರಾಮುಖ್ಯತೆಯನ್ನು ನೀಡುವ ನಮ್ಮ ಆಚಾರ ಸಂಪ್ರದಾಯಗಳು ಭಾದ್ರಪದ ಮಾಸದಲ್ಲಿ ಪಿತೃದೇವತೆಗಳಿಗೆ ಅಧಿಕವಾದ ಪ್ರಾಶಸ್ತ್ಯವನ್ನು ನೀಡಿವೆ. ಪಿತೃದೇವತೆಗಳಿಗೆ ಮಂತ್ರಪೂರ್ವಕವಾಗಿ ಶ್ರಾದ್ಧಕರ್ಮಗಳನ್ನು ನಿರ್ವಹಿಸಿ, ಅವರಿಗೆ ಉತ್ತಮ ಲೋಕವು ಪ್ರಾಪ್ತಿಯಾಗುವಂತೆ ಕಾರ್ಯಗಳನ್ನು ನಿರ್ವಹಿಸಬೇಕೆಂದು ಈ ನಿಯಮಗಳು ಆದೇಶಿಸುತ್ತಿವೆ.

ಭಾದ್ರಪದಮಾಸದಲ್ಲಿ ಬಹುಳಪಕ್ಷವನ್ನು ಅಂದರೆ ಹುಣ್ಣಿಮೆಯ ನಂತರ ಬರುವ ಪಾಡ್ಯಮಿಯಿಂದ ಅಮಾವಾಸ್ಯೆಯವರೆಗೂ ಇರುವ ಹದಿನೈದು ದಿನಗಳ ಕಾಲವನ್ನು "ಪಿತೃಪಕ್ಷ"ವೆಂದೂ ಅಥವಾ "ಮಹಾಲಯಪಕ್ಷ" ಎಂದೂ ಕರೆಯುತ್ತಾರೆ. ಈ ಕಾಲವು ಪಿತೃದೇವತೆಗಳಿಗೆ ಅತ್ಯಂತ ಪ್ರೀತಿಕರವಾದುದಾಗಿದೆ. ಈ ದಿನಗಳಲ್ಲಿ ಚತುರ್ವರ್ಣದವರೂ ಗತಿಸಿರುವ ತಮ್ಮ ಹಿರಿಯರನ್ನು ನೆನಪಿಸಿಕೊಳ್ಳುತ್ತಾ ಶ್ರಾದ್ಧವಿಧಿಗಳನ್ನು ನಿರ್ವಹಿಸಬೇಕು. ಈ ಕಾಲದಲ್ಲಿ ಶುಭಕಾರ್ಯಗಳನ್ನು ಮಾಡುವುದಿಲ್ಲ ಆ ಹದಿನೈದೂ ದಿನಗಳೂ ಪಿತೃದೇವತೆಗಳಿಗೆ ಮೀಸಲಾಗಿರುತ್ತದೆ. ಆದ್ದರಿಂದ ನಮ್ಮ ಸಂಪ್ರದಾಯಗಳನ್ನು, ಸನಾತನ ಧರ್ಮವನ್ನು ಕಾಪಾಡಿಕೊಳ್ಳುತ್ತಾ ಮುಂದೆ ಸಾಗೋಣ. ಲೋಕವನ್ನು ಕಾಪಾಡಿಕೊಳ್ಳೋಣ.

**ಲೋಕಾಃ ಸಮಸ್ತಾಃ ಸುಖಿನೋ ಭವಂತು**

# ಕೂಡುಮಲೆ (ಕುರುಡುಮಲೆ) ಗಣಪತಿ ಕ್ಷೇತ್ರ


- ಶ್ರೀಮತಿ ಪಾರಿಜಾತ ಬಿ.ಎಸ್.

90083 35689




ಸುಮುಖಶ್ಚೈಕದಂತಶ್ಚ ಕಪಿಲೋ ಗಜಕರ್ಣಕಃ
ಲಂಬೋದರಶ್ಚ ವಿಕಟೋ ವಿಘ್ನರಾಜೋ ವಿನಾಯಕಃ
ಧೂಮಕೇತುರ್ಗಣಾಧ್ಯಕ್ಷಃ ಫಾಲಚಂದ್ರೋ ಗಜಾನನಃ
ವಕ್ರತುಂಡ ಶ್ಪೂರ್ಪಕರ್ಣೋಹೇರಂಭಃ ಸ್ಕಂದಪೂರ್ವಜಃ
ಷೋಡಶೈತಾನಿ ನಾಮಾನಿ ಯಃ ಪಠೇಚ್ಛೃಯಾದಪಿ
ವಿದ್ಯಾರಂಭೇ ವಿವಾಹೇಚ ಪ್ರವೇಶೇ ನಿರ್ಗಮೇ ತಥಾ
ಸಂಗ್ರಾಮೇ ಸರ್ವಕಾರ್ಯೇಷು ವಿಘ್ನಸ್ತಸ್ಯ ನಜಾಯತೇ॥

ಕೈಲಾಸನಾಥ ಪರಮಶಿವನ ಪುತ್ರ ವಿನಾಯಕನು ಸಕಲ ಗಣಗಳಿಗೂ ಅಧಿ ಪತಿಯಾಗಿ ತನ್ನ ತಂದೆಯಿಂದಲೇ ನೇಮಿಸಲ್ಪಟ್ಟವನು. ಅಂತೆಯೇ ಯಾರೇ ಆದರೂ ಯಾವುದೇ ಕಾರ್ಯವನ್ನು ಮಾಡುವ ಮೊದಲು ತಾವು ನಿಶ್ಚಯಿಸಿದ ಕಾರ್ಯವು ನಿರ್ವಿಘ್ನವಾಗಿ ನೆರವೇರಲೆಂದು ತಮ್ಮ ಪ್ರಥಮ ಪೂಜೆಯನ್ನು ಗಣ ಪತಿಗೆ ಸಲ್ಲಿಸುತ್ತಾರೆ. ಅಂತೆಯೇ ಪ್ರಥಮ ಪೂಜೆಗೆ ಅರ್ಹನಾದ ವಿನಾಯಕ, ವಿಘ್ನ ರಾಜ, ವಿಕಟ, ಲಂಬೋದರ, ಗಜಾನನ, ವಕ್ರತುಂಡ, ಹೇರಂಭ, ಫಾಲ ಚಂದ್ರ, ಗಜಮುಖ ಎಂದೆಲ್ಲಾ ನಾಮಾಂಕಿತನಾದ ಗಣಪತಿಯು ಭೂಲೋಕದಲ್ಲಿ ನೆಲೆಸಿ ಭಕ್ತ ಜನರ ಇಷ್ಟಾರ್ಥಗಳನ್ನು ನೆರವೇರಿಸುತ್ತಿದ್ದಾನೆ.

ಈ ಸ್ವಾಮಿಯು ನೆಲೆಸಿರುವ ಪವಿತ್ರ ಕ್ಷೇತ್ರಗಳಲ್ಲಿ ಕರ್ನಾಟಕದ ಸ್ಥಾನವು ಮಹತ್ವದಾಗಿದ್ದು, ಇಂತಹ ಕ್ಷೇತ್ರಗಳಲ್ಲಿ ಕುರುಡುಮಲೆಯು ಒಂದಾಗಿದೆ. ‘‘ಮಲೆ’’ ಎಂದರೆ ‘‘ಬೆಟ್ಟ’’ ಎಂದರ್ಥವಿದೆ. ಎರಡು ಬೆಟ್ಟಗಳ ತಪ್ಪಲಿನಲ್ಲಿರುವ ಈ ಗ್ರಾಮವು ‘‘ಕೂಡುಮಲೆ,ಕೂಟಾದ್ರಿಮಲೆ’’ ಎಂದು ಕರೆಯಲ್ಪಟ್ಟಿದೆ. ಕಾಲಾಂತರದಲ್ಲಿ ಕುರುಡುಮಲೆ ಎಂದೆನಿಸಿದೆ. ಈ ಕ್ಷೇತ್ರವು ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಮುಳುಬಾಗಿಲಿನಿಂದ ಸುಮಾರು 10 ಕಿ.ಲೋ ಮೀಟರ್ ದೂರದಲ್ಲಿದೆ.

**ಸ್ಥಳಪುರಾಣ:**

ಈ ಕ್ಷೇತ್ರವು ನಾಲ್ಕು ವೇದಗಳ ಕಾಲದಲ್ಲಿ ವಿವಿಧ ಹೆಸರುಗಳಿಂದ ತನ್ನದೇ ಆದ ವೈಶಿಷ್ಟತೆಯನ್ನು ಪಡೆದುಕೊಂಡಿದೆ. ಬಹಳ ಹಿಂದೆ ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರು ಒಟ್ಟಾಗಿ ಈ ಕ್ಷೇತ್ರದಲ್ಲಿ ಗಣಪತಿಯನ್ನು ಸ್ಥಾಪಿಸಿದ ರೆಂಬ ನಂಬಿಕೆಯಿದೆ. ನಂತರದ ಕಾಲದ ಕೃತಯುಗದಲ್ಲಿ ಕೌಂಡಿಣ್ಯ ಋಷಿಗಳು ಇಲ್ಲಿ ಬಂದು ತಪಸ್ಸನ್ನು ಆಚರಿಸಿದರೆಂದು ಮಾಹಿತಿ ಇದೆ.

ಈ ಬೆಟ್ಟದಲ್ಲಿ ಕೌಂಡಿಣ್ಯ ನದಿಯ ಉಗಮವಾಗುವುದರಿಂದ ಈ ಕ್ಷೇತ್ರವು ಕೌಂಡಿಣ್ಯ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ಮುಂದಿನ ತ್ರೇತಾಯುಗದಲ್ಲಿ ಶ್ರೀರಾಮನು ರಾವಣನನ್ನು ಸಂಹಾರ ಮಾಡಿದ ನಂತರ ಈ ಕ್ಷೇತ್ರಕ್ಕೆ ಆಗಮಿಸಿ ಗಣಪವನ್ನು ಪೂಜಿಸಿದನಂತೆ ದ್ವಾಪರದಲ್ಲಿ ಶ್ರೀಕೃಷ್ಣನು ಶಮಂತಕಮಣಿಯಿಂದ ತನಗೆ ಬಂದ ಅಪವಾದದ ವಿಮೋಚನೆಗಾಗಿ ಇಲ್ಲಿ ಗಣಪನನ್ನು ಆರಾಧಿಸಿದನೆಂಬ ನಂಬಿಕೆ ಇದೆ.

ಪಾಂಡವರು ಇಲ್ಲಿಗೆ ಭೇಟಿ ನೀಡಿದರೆಂದು ತಿಳಿದು ಬಂದಿದೆ. ಹೀಗೆ ಅನೇಕ ಮಹಾಪುರುಷರ ಆಗಮನದಿಂದ ಹಾಗೂ ಸ್ವಾಮಿಯ ಆರಾಧನೆಯಿಂದ ಈ ಕ್ಷೇತ್ರವು ತನ್ನದೇ ಆದ ಮಹತ್ವವನ್ನು ಪಡೆದಿದೆ.

ಕೃತಯುಗದಿಂದ ಕಲಿಯುಗದವರೆಗೆ ಬಯಲಿನಲ್ಲಿ ಪೂಜಿ ಸಲ್ಪಡುತ್ತಿದ್ದ ಈ ಗಣಪನಿಗೆ ವಿಜಯನಗರದ ಅರಸರ ಕಾಲದಲ್ಲಿ ಶ್ರೀಕೃಷ್ಣದೇವರಾಯನು ತನ್ನ ಪ್ರಜೆಗಳ ಇಚ್ಛೆಯಂತೆ ದೇವಾಲಯ ವನ್ನು ನಿರ್ಮಿಸಿದನು.

**ಪ್ರಮುಖ ದೇವಾಲಯಗಳು :**

**ಶ್ರೀ ಮಹಾಗಣಪತಿ ದೇವಾಲಯ :**

ಈ ದೇವಾಲಯವು ಕುರುಡುಮಲೆ ಕ್ಷೇತ್ರದ ಪ್ರಮುಖ ಕೇಂದ್ರ ಬಿಂದು. ಈ ದೇವಾಲಯವು ಕಲ್ಲಿನ ಕಟ್ಟಡವಾಗಿದ್ದು ವಿಶಾಲ





ವಾಗಿದೆ. ಗಂಡಕೀ ನದಿಯ ಸಾಲಿಗ್ರಾಮ ಶಿಲೆಯಿಂದ ನಿರ್ಮಿತವಾದ ಗಣಪನ ವಿಗ್ರಹವು ಬೃಹದಾಕಾರವಾಗಿದೆ. ಎತ್ತರ ವಾದ ಏಕಶಿಲಾ ವಿಗ್ರಹವಾಗಿ ಆಕರ್ಷಕವಾಗಿದೆ. ದೇವಾಲಯ ಪ್ರಾಕಾರದಲ್ಲಿ 5 ಅಡಿ ಎತ್ತರದ ಸುಬ್ರಮಣ್ಯ ವಿಗ್ರಹವಿದೆ. ಅಲ್ಲೇ ಪಕ್ಕದಲ್ಲಿ ನವಗ್ರಹ ವಿಗ್ರಹಗಳಿವೆ. ಮುಖ್ಯದ್ವಾರದ ಬಳಿ ಬೃಹದಾಕಾರದ ಮೂಷಿಕನ ವಿಗ್ರಹವಿದೆ. ಸಾಧಾರಣ ಕೆತ್ತನೆಯನ್ನು ಒಳಗೊಂಡ ಕಲ್ಲಿನ ಕಂಬಗಳು ಸುತ್ತಲೂ ಇವೆ. ದೇಗುಲದ ಮುಂದಿನ ವಿಶಾಲವಾದ ಆವರಣದಲ್ಲಿ ಕಲ್ಲಿನ ಸ್ತಂಭವಿದ್ದು, ನೆಲವು ಕಲ್ಲಿನ ಹಾಸಿನಿಂದ ಕೂಡಿದೆ.

**ಶ್ರೀ ಸೋಮೇಶ್ವರ ದೇವಾಲಯ :**

ಈ ದೇವಾಲಯವು ಗಣಪತಿಯ ದೇವಾಲಯದಿಂದ ಸುಮಾರು 100 ಅಡಿಗಳ ಅಂತರದಲ್ಲಿದೆ. ಚೋಳರ ಕಾಲಕ್ಕೆ ಸೇರಿದ ಈ ದೇವಾಲಯವು ರಾಜ ರಾಜ ಚೋಳನಿಂದ ನಿರ್ಮಿತವಾಗಿದೆ. ಈ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಅಮರಶಿಲ್ಪಿ ಜಕ್ಕಣ್ಣಾಚಾರಿಯು ತನ್ನ ಕೈಗಳ ಕಲಾನೈಪುಣ್ಯತೆ ಮರೆದಿದ್ದಾರೆ ಎನ್ನುವ ಐಹಿತ್ಯವಿದೆ.

ಈ ದೇವಾಲಯವು ಮುಖ ಮಂಟಪ,ಸುಕನಾಸಿ,ಮಂಟಪ, ನವರಂಗ ಗರ್ಭಗುಡಿಯನ್ನು ಹೊಂದಿದೆ. ದೇವಾಲಯದ ಕಂಬಗಳ ಮೇಲೆ ಚೋಳ ಶೈಲಿಯ ಉಬ್ಬು ಚಿತ್ರಗಳು, ಚೋಳರಾಜನ ಪತ್ನಿ, ಜಕ್ಕಾಣ್ಣಾಚಾರಿ, ಆನೆ, ಸಿಂಹ, ಕುದುರೆ ಇತ್ಯಾದಿ ಚಿತ್ರಗಳ ಕೆತ್ತನೆಗಳಿವೆ. ದೇವಾಲಯದ ಒಳಾಂಗಣದಲ್ಲಿ ಶೈವ-ವೈಷ್ಣವ ದೇವಾನುದೇವತೆಗಳ ವಿಗ್ರಹಗಳಿವೆ. ಗರ್ಭಗೃಹದಲ್ಲಿ ಸುಂದರ ಸೋಮೇಶ್ವರನ ಶಿವಲಿಂಗವಿದೆ. ಪ್ರಾಕಾರದಲ್ಲಿ ತಾಯಿ ಕ್ಷಮಾಂಬೆಯ ದೇವಾಲಯವಿದೆ.

ಈ ದೇವಾಲಯದ ಅಕ್ಕಪಕ್ಕಗಳಲ್ಲಿ ಹಿಂದೆ ಇನ್ನು ಅನೇಕ ವಿವಿಧ ದೇವಾಲಯಗಳು ಇದ್ದು ಅನೇಕರ ಧಾಳಿಗಳಿಗೆ ಒಳಪಟ್ಟು ಶಿಥಿಲಗೊಂಡ ಅವಶೇಷಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ. ಈ ದೇವಾಲಯದ ಮುಂಬಾಗಿಲಲ್ಲಿ ಬೃಹದಾಕಾರದ ಗಣಪನ ವಿಗ್ರಹವಿದೆ.

**ಯಾತ್ರಿಕರಿಗೆ ವಿಶೇಷ ಮಾಹಿತಿ :**

1. ಈ ಕ್ಷೇತ್ರವು ಬೆಂಗಳೂರಿನಿಂದ ಸುಮಾರು 109 ಕಿ.ಮೀ. ದೂರದಲ್ಲಿದೆ.

2. ಮುಳುಬಾಗಿಲಿನಿಂದ ಒಂದು ಗಂಟೆಗೆ ಒಂದು ಕೆ.ಎಸ್.ಆರ್. ಟಿ.ಸಿ ಬಸ್ ವ್ಯವಸ್ಥೆ ಇದೆ.

3. ಸಂಕಷ್ಟ ಚತುರ್ಥಿ, ಗಣೇಶ ಚತುರ್ಥಿ ದಿನಗಳಂದು ವಿಶೇಷ ಪೂಜೆ ಹೋಮ ಹವನ ನಡೆಯುತ್ತದೆ. ವಿಶೇಷ ಪೂಜೆ ಅಭಿಷೇಕ ಮಾಡಿಸುವವರು ಮುಂಗಡವಾಗಿ ಕಾಯ್ದಿರಿಸಬಹುದು.

4. ಪ್ರತಿನಿತ್ಯ ಬೆಳಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮತ್ತು ಮಧ್ಯಾಹ್ನ 3 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಸ್ವಾಮಿಯ ದರ್ಶನಕ್ಕೆ ತೆರೆದಿರುತ್ತದೆ.

5. ಈ ಕ್ಷೇತ್ರಕ್ಕೆ ಮುಳುಬಾಗಿಲ ಆಂಜನೇಯ, ಆವನಿಮಠ, ಅಂತರ ಗಂಗೆ, ಚಿಕ್ಕ ತಿರುಪತಿ ಸೀತಾಬೆಟ್ಟ, ಕೈಲಾಸ ಗಿರಿ ಇತ್ಯಾದಿ ಕ್ಷೇತ್ರಗಳು ಹತ್ತಿರದಲ್ಲಿದೆ.



# ಅನಂತ ವರಗಳ ಕರುಣಿಸುವ ಪದ್ಮನಾಭ

–ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621

ಅನಂತ ವ್ರತ, ಅನಂತ ವ್ರತಂ, ಅನಂತ ನೋಮುಲು, ನೋಂಪು ಅಥವಾ ಅನಂತಪದ್ಮನಾಭ ಸ್ವಾಮಿ ವ್ರತ ಎಂದು ಹೆಸರಿಸಿಕೊಳ್ಳುವ ಈ ವ್ರತವನ್ನು ದಂಪತಿಗಳು ತಮ್ಮ ವೈವಾಹಿಕ ಜೀವನದಲ್ಲಿ ಸುಖ-ಸಂತೋಷ ಅನಂತವಾಗಿರಲಿ ಎಂದು ಬಯಸಿ, ವಿಷ್ಣುವಿನ ವ್ರತದಲ್ಲಿ ತೊಡಗುತ್ತಾರೆ.

ಈ ವ್ರತದ ಅಧಿದೇವತೆ ಶ್ರೀಮಹಾವಿಷ್ಣುವು ತನ್ನ ಸಕಲ ಪರಿವಾರದೊಡನೆ ಈ ದಿನ ಪೂಜಿಸಲ್ಪಡುತ್ತಾನೆ. ಅನಂತನೆಂಬ ದೇವನು ಈ ದಿನ ಭಕ್ತಿಯಿಂದ ಪೂಜಿಸುವವರಿಗೆ ಅನಂತ ಕೀರ್ತಿ, ಸಂಪತ್ತು, ಸುಖ, ಶಾಂತಿ, ಸೌಭಾಗ್ಯವನ್ನು ಅನಂತ ಕಾಲದವರೆಗೂ ಕೊಡುತ್ತಾನೆಂದೇ ನಂಬಿಕೆ.

ಭಾದ್ರಪದ ಮಾಸದ ಆಶ್ವಯುಜ ಶುಕ್ಲಪಕ್ಷದ ಚತುರ್ದಶಿಯಂದು ವ್ರತಾಚರಣೆ ನಡೆಯುತ್ತದೆ. ಈ ದಿನವನ್ನು ಗಣೇಶನ ವಿಸರ್ಜನೆಯ ದಿನವನ್ನಾಗಿಯೂ ಆಚರಿಸಲಾಗುತ್ತದೆ. ಕೇರಳದಲ್ಲಿ ಓಣಂ ಆಚರಣೆಯ ಎರಡನೇ ದಿನದಂದು ಪದ್ಮನಾಭ ಸ್ವಾಮಿ ವ್ರತವನ್ನು ಆಚರಿಸುವ ಪದ್ಧತಿ ಇದೆ.

ಪೂಜೆಯ ನಂತರ ಮಹಿಳೆಯರು ಎಡಗೈಗೆ ಮತ್ತು ಪುರುಷರು ಬಲಗೈಗೆ ಅನಂತ ದಾರವನ್ನು ಕಟ್ಟಿಕೊಳ್ಳುತ್ತಾರೆ. ಸಾಮಾನ್ಯವಾಗಿ, ದಂಪತಿಗಳು ಮದುವೆಯಾದ ಹೊಸದರಲ್ಲಿ ಈ ವ್ರತವನ್ನು ಆಚರಿಸಲು ಆರಂಭಿಸುತ್ತಾರೆ. ನಿರಂತರವಾಗಿ 14 ವರ್ಷಗಳ ಕಾಲ ಆಚರಿಸುತ್ತಾ, ಪದ್ಮನಾಭಸ್ವಾಮಿ ಆಶೀರ್ವಾದ ಪಡೆಯುತ್ತಾರೆ.

ಈ ಪೂಜೆಗೆ ಎಲ್ಲವೂ ಹದಿನಾಲ್ಕರ ಸಂಖ್ಯೆಯಲ್ಲಿರಬೇಕು! ವ್ರತವನ್ನು ಹದಿನಾಲ್ಕು ವರ್ಷಗಳ ಕಾಲ ಮಾಡಿ ಉದ್ಯಾಪನೆ ಮಾಡಬೇಕು. ವ್ರತದ ದಾರವೂ ಹದಿನಾಲ್ಕು ಗಂಟಿನಿಂದ ಕಟ್ಟಿರುತ್ತಾರೆ. ಪದ್ಧತಿ ಇಲ್ಲದವರು ಅನಂತನ ದರ್ಶನ ಮಾಡಬಹುದು.

ಆರೋಗ್ಯ, ಅಭಿವೃದ್ಧಿ ಮತ್ತು ಸಕಲ ಐಶ್ವರ್ಯಗಳನ್ನು ಅನಿಯಮಿತವಾಗಿ ನೀಡುವ ಅನಂತ ಪದ್ಮನಾಭನನ್ನು ಪೂಜಿಸುವ ಹಬ್ಬ ಅನಂತನ ಚತುರ್ದಶಿ. ಯಮುನೆಯ ಪೂಜಿಸಿ ಆಚರಿಸುವ ಈ ವ್ರತದಲ್ಲಿ, ಸಂತಾನ ದೇವತೆಯಾದ ನಾಗ ದೇವತೆಯನ್ನು ಪೂಜಿಸುವ ಆಶಯವೂ ಇದೆ. ಇದೇ ಸೆಪ್ಟೆಂಬರ್ 16 ರಂದು ಎಲ್ಲೆಡೆ ಅನಂತನ ಹಬ್ಬವನ್ನು ಆಚರಿಸಲಾಗುತ್ತದೆ. ಅನಂತನ ಹಬ್ಬ, ಅನಂತಪದ್ಮನಾಭ ವ್ರತ ಅಥವಾ ಅನಂತನ ಚತುರ್ದಶಿ ಎಂದು ಕರೆಯುವ ಈ ಹಬ್ಬ ರಾಜ್ಯದ ಕರಾವಳಿ ಭಾಗ ಹಾಗೂ ಹಳೇ ಮೈಸೂರು ಪ್ರಾಂತ್ಯಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಈ ವ್ರತವನ್ನು ಭಾದ್ರಪದ ಮಾಸದ ಶುಕ್ಲ ಪಕ್ಷದ ಹದಿನಾಲ್ಕನೇ ದಿನ (ಚತುರ್ದಶಿ) ಆಚರಿಸಲಾಗುತ್ತದೆ. ಕ್ಷೀರಸಾಗರದಲ್ಲಿ ಏಳು ಹೆಡೆಗಳ ಆದಿಶೇಷನ ಮೇಲೆ ವಿಷ್ಣುವನ್ನು ಆರಾಧಿಸುವ ಹಬ್ಬ. ಅನಂತ ಎಂದರೆ ಅನಿಯಮಿತ, ಪದ್ಮನಾಭ ಎಂದರೆ ನಾಭಿಯಲ್ಲಿ ಕಮಲವನ್ನು ಹೊಂದಿದವನು ನಾರಾಯಣ ಅಥವಾ ವಿಷ್ಣು ಎಂಬ ಅರ್ಥ ಬರುತ್ತದೆ. ಇದು ವಿಷ್ಣುವನ್ನು ಪೂಜಿಸುವ ವ್ರತ.





**ಅನಂತ ವ್ರತವನ್ನು 14 ವರ್ಷಗಳ ಕಾಲ ಆಚರಿಸುತ್ತಾರೆ. ಕೆಲವರು ಪರಂಪರಾಗತವಾಗಿ ಅನಂತವ್ರತವನ್ನು ಆಚರಿಸುತ್ತಾರೆ. ಇನ್ನು ಕೆಲವರು ಶಕ್ತಿಗನುಸಾರ ಆಚರಿಸುತ್ತಾರೆ. ನಿಷ್ಕಲ್ಮಷ ಮನಸ್ಸಿನಿಂದ ಭಕ್ತಿಯಿಂದ, ಭಾವದಿಂದ ಅನಂತಚತುರ್ದಶಿ ವ್ರತವನ್ನು ಆಚರಿಸಿದವರಿಗೆ ಅನಂತ ದೇವರು ಒಲಿದು ಆರೋಗ್ಯ ಆಯುಸ್ಸು, ಸುಖ. ಸಂಪತ್ತು ಪ್ರದಾನಿಸುತ್ತಾರೆ.**

ಭಾದ್ರಪದ ಶುಕ್ಲ ಪಕ್ಷ ಚತುರ್ದಶಿಯನ್ನು 'ಅನಂತ ಚತುರ್ದಶಿ' ಎಂದು ಕರೆಯುತ್ತಾರೆ. ಈ ದಿನವು ಶ್ರೀಗಣೇಶ ಚತುರ್ಥಿ ಆಚರಣೆಯ ಕೊನೆಯ ದಿನವೂ ಹೌದು. ಈ ದಿನದಂದು ಅನೇಕರು ಅನಂತ ವ್ರತವನ್ನು ಆಚರಿಸುತ್ತಾರೆ. ಈ ವ್ರತದ ಬಗ್ಗೆ ಪ್ರಚಲಿತವಿರುವ ಮಾಹಿತಿಯನ್ನು ತಿಳಿದು ಕೊಳ್ಳೋಣ.

ಈ ದಿನದಂದು ಶ್ರೀವಿಷ್ಣು ಅನಂತಪದ್ಮ ನಾಭ ದೇವರಾಗಿ ಭೂಮಿಯಲ್ಲಿ ಅವತಾರ ತಾಳಿದರು ಎಂದು ನಂಬಿಕೆಯಿದೆ. ಶ್ರೀಅನಂತ ಪದ್ಮನಾಭ ದೇವರು ಭಕ್ತರ ಎಲ್ಲಾ ಪ್ರಾರ್ಥನೆ, ಬೇಡಿಕೆಗಳನ್ನು ಈಡೇರಿಸುತ್ತಾರೆ ಮತ್ತು ಸುಖ, ಆರೋಗ್ಯ, ಸಂಪತ್ತನ್ನು ಪ್ರದಾನಿಸುತ್ತಾರೆ ಎಂದು ನಂಬಿಕೆಯಿದೆ.

### ಅನಂತ ವ್ರತದ ಬಗ್ಗೆ ಒಂದು ಕಥೆಯನ್ನು ನೋಡೋಣ

ಕೌಂಡಿಲ್ಯ ಮುನಿಯು ವಿವಾಹದ ನಂತರ ಸಪತ್ನೀಕನಾಗಿ ಮನೆಯಿಂದ ಹೊರಟನು. ದಾರಿಯಲ್ಲಿ ನದಿಯ ತೀರದಲ್ಲಿ ಅವರು ನಿತ್ಯ ಕರ್ಮಗಳಿಗೆ ನಿಂತಾಗ, ಅವರ ಪತ್ನಿಯು ಕೆಲವು ಮಹಿಳೆಯರನ್ನು ಒಂದು ವ್ರತವನ್ನು ಆಚರಿಸುತ್ತಿರುವುದನ್ನು ನೋಡಿದರು. ಆ ಮಹಿಳೆಯರನ್ನು ಕೇಳಿದಾಗ "ನಾವು ಅನಂತ ವ್ರತವನ್ನು ಆಚರಿಸುತ್ತಿದ್ದೇವೆ" ಎಂದೂ ಆ ವ್ರತದಿಂದ ಆಗುವ ಲಾಭಗಳೇನು ಎಂದೂ ತಿಳಿಸಿದರು.

ಇದರಿಂದ ಪ್ರಭಾವಿತರಾದ ಕೌಂಡಿಲ್ಯ ಮುನಿಯ ಪತ್ನಿಯೂ ಕೂಡ ಶೇಷಶಯನನಾದ ಶ್ರೀ ವಿಷ್ಣುವನ್ನು ಪ್ರಸನ್ನಗೊಳಿಸಲು ಅನಂತ ವ್ರತವನ್ನು ಆಚರಿಸತೊಡಗಿದಳು. ಇದರಿಂದಾಗಿ ಕೌಂಡಿಲ್ಯ ಮುನಿಯ ಧನ ಸಂಪತ್ತು ವೃದ್ಧಿಯಾಯಿತು. ಅನೇಕ ವರ್ಷಗಳ ನಂತರ ಒಂದು ದಿನ ಕೌಂಡಿಲ್ಯ ಮುನಿಯು ತನ್ನ ಪತ್ನಿಯ ಕೈಯಲ್ಲಿರುವ ಅನಂತ ವ್ರತದ ದಾರವನ್ನು ನೋಡಿ ಅದೇನೆಂದು ವಿಚಾರಿಸಿದನು. ಪತ್ನಿಯು ಇದು ಅನಂತವ್ರತದ ದಾರ, ಈ ವ್ರತದಿಂದ ನಮಗೆ ದೇವರು ಸುಖ ಸಂಪತ್ತನ್ನು ಕರುಣಿಸಿದ್ದಾನೆ ಎಂದು ಹೇಳಿದಳು. ಇದನ್ನು ಕೇಳಿ ಕೌಂಡಿಲ್ಯ ಮುನಿಯು ಕೋಪಗೊಂಡು ಈ ಸುಖ ಸಂಪತ್ತು ನನ್ನ ಪಾಂಡಿತ್ಯದಿಂದ ನಾನು ಸಂಪಾದಿಸಿದ್ದೇನೆ ಎಂದು ಹೇಳಿ, ಪತ್ನಿಯ ಕೈಯಲ್ಲಿರುವ ದಾರವನ್ನು ಕಿತ್ತೆಸೆದನು. ಕ್ರಮೇಣ ಅವರಲ್ಲಿರುವ ಸಂಪತ್ತು ಕ್ಷೀಣಿಸತೊಡಗಿತು. ಮುಂದೊಂದು ದಿನ ಎಲ್ಲವನ್ನೂ ಕಳೆದುಕೊಂಡ ಕೌಂಡಿಲ್ಯ ಮುನಿಗೆ ತನ್ನ ತಪ್ಪಿನ ಅರಿವಾಯಿತು. ಅಖಂಡ ತಪಸ್ಸನ್ನು ಆಚರಿಸಿ ಶ್ರೀವಿಷ್ಣುವನ್ನು ಪ್ರಸನ್ನಗೊಳಿಸಿದನು. ಶ್ರೀ ವಿಷ್ಣು ಕೌಂಡಿಲ್ಯ ಮುನಿಗೆ ದರ್ಶನವನ್ನಿತ್ತು, 14 ವರ್ಷಗಳ ಕಾಲ ಅನಂತವ್ರತವನ್ನು ಆಚರಿಸಿದರೆ, ಹೋದ ಸುಖ ಸಂಪತ್ತು ಪುನಃಗಳಿಸುವುದಾಗಿ ವರವನ್ನು ನೀಡಿದರು.

### ಅನಂತನಿಗೆ ಗೋಧಿ ಇಷ್ಟ

ಈ ವ್ರತದಲ್ಲಿ ಗೋಧಿಯ ಖಾದ್ಯಗಳನ್ನು ಅನಂತನಿಗೆ ನೈವೇದ್ಯ ಮಾಡುವುದು ವಿಶೇಷ. ಗೋಧಿಯ ಹುಗ್ಗಿ, ಪಾಯಸ ಮತ್ತು ಇನ್ನಿತರ ಅಡುಗೆಗಳನ್ನು ಮಾಡಿ ಪೂಜಿಸುತ್ತಾರೆ. ವ್ರತ ಪೂರ್ಣವಾದ ನಂತರ ಉಪಾಯನ ದಾನವನ್ನು ಗೋಧಿಯ ಮೂಲಕವೇ ದಾನ ಕೊಡಲಾಗುವುದು. 14 ವರ್ಷಗಳ ಕಾಲ ವ್ರತ ಮಾಡಿದ ನಂತರ ಉದ್ಯಾಪನೆಯನ್ನು ಮಾಡಲಾಗುತ್ತದೆ. ಈ ವೇಳೆ ಹೋಮ, ಹವನಗಳನ್ನು ನಡೆಸಿ, ಋತ್ವಿಕರಿಂದ ನಾಲ್ಕು ಜಾವನ ಪೂಜೆ ನಡೆಸಿ, ದಂಪತಿ ಪೂಜೆ, ಕನ್ನಿಕಾ ಪೂಜೆಗಳನ್ನು ನೆರವೇರಿಸಲಾಗುವುದು. ಮುತ್ತೈದೆಯರಿಗೆ ಮೊರದ ಬಾಗಿನವನ್ನು ನೀಡುವ ಪದ್ಧತಿ ಇದೆ. ವ್ರತ ಕೈಗೊಂಡವರು ಬೆಳಿಗ್ಗೆ ಹಾಗೂ ಮಧ್ಯಾಹ್ನ ಉಪವಾಸವಿದ್ದು, ರಾತ್ರಿ ದೇವರ ಪ್ರಸಾದವೆಂದು ಭೋಜನ ಸೇವಿಸುತ್ತಾರೆ.

ಅನಂತ ಪದ್ಮನಾಭ ವ್ರತಕ್ಕೆ 14 ಬಗೆಯ ಭಕ್ಷ್ಯಗಳನ್ನು ತಯಾರಿಸುವ ಪದ್ಧತಿಯಿದೆ. ಅನ್ನ, ಕಡುಬು, ಮೋದಕ, ಚಕ್ಕುಲಿ, ಹಾಲು, ಬೆಲ್ಲ ಇತ್ಯಾದಿಗಳನ್ನು ದೇವರ ಮುಂದಿಟ್ಟು ನೈವೇದ್ಯ ಮಾಡುತ್ತಾರೆ. ಪೂಜೆ,ಅನಂತ ಪದ್ಮ ನಾಭನ ಕಥೆ ಮುಗಿದು ಮಂಗಳಾರತಿ ನಡೆಯುತ್ತದೆ. ಆಗ ಮನೆಯವರು, ಬಂಧುಗಳೆಲ್ಲ ಒಟ್ಟು ಸೇರಿ ಪ್ರಾರ್ಥನೆ ಮಾಡುತ್ತಾರೆ. ತಮ್ಮ ಇಷ್ಟಾರ್ಥ ಸಿದ್ಧಿ ನೆರವೇರಿಕೆಗೆ ಸಂಕಲ್ಪ ಮಾಡಿಕೊಳ್ಳುತ್ತಾರೆ. ಮನೆಯವರು ಆ ದಿನ ರಾತ್ರಿಯಿಡೀ ಜಾಗರಣೆ ಕುಳಿತು ದೇವರ ಸ್ಮರಣೆ, ಸ್ತುತಿಯಲ್ಲಿ ನಿರತರಾಗಿರಬೇಕೆಂಬ ನಿಯಮವಿದೆ. ಮಾರನೇ ದಿನ ಪೂಜೆಯ ನೀರನ್ನು ಮತ್ತೆ ಬಾವಿ ಅಥವಾ ಕೆರೆಗೆ ತೆಗೆದು ಕೊಂಡು ಹೋಗಿ ವಿಸರ್ಜಿಸುತ್ತಾರೆ. ಈ ವ್ರತವನ್ನು ಆಚರಿಸುವ ಮನೆಯ ದೇವಸ್ಥಾನ ನಮ್ಮ ಇಷ್ಟಾರ್ಥಗಳು ಫಲಿಸುವುದರೊಂದಿಗೆ, ಕೆಲವರಿಗಂತೂ ಸಂತಾನಪ್ರಾಪ್ತಿ, ಧನ ಪ್ರಾಪ್ತಿಯಾದ ಇತಿಹಾಸವು ನೋಡಲು ಸಿಗುತ್ತದೆ. ನಮ್ಮ ಪೂರ್ವಜರು ಅಂದಿನ ಕಷ್ಟದ ಅನಿವಾರ್ಯ ಸನ್ನಿವೇಶದಲ್ಲಿ ಈ ವ್ರತವನ್ನು ಪ್ರತಿವರ್ಷ ಆಚರಿಸುತ್ತಾ ಸಂತಾನ ಪ್ರಾಪ್ತಿ, ಸರ್ವಾಭೀಷ್ಟ ಸಿದ್ಧಿಯೊಂದಿಗೆ ಧನ ಪ್ರಾಪ್ತಿಯನ್ನು ಪಡೆದುಕೊಂಡ ಬಗ್ಗೆ ಹಲವಾರು ಕುಟುಂಬಗಳನ್ನು ನಾವು ನೋಡಬಹುದಾಗಿದೆ.

ಇದೇ ಸೆಪ್ಟೆಂಬರ್ 16 ರಂದು "ಶ್ರೀ ಅನಂತ ಪದ್ಮನಾಭವ್ರತ" ಈ ವ್ರತದ ಅಧಿದೇವತೆ ಶ್ರೀಮಹಾವಿಷ್ಣು! ಇಂದು ಸ್ವಾಮಿಯು ತನ್ನ ಸಕಲ ದೇವತಾ ಪರಿವಾರದೊಡಗೂಡಿ ಪೂಜಿಸಲ್ಪಡುವುದೇ ವಿಶೇಷವಾಗಿದೆ. ಅನಂತ ದೇವನು ತನ್ನನ್ನು ಭಕ್ತಿಯಿಂದ ಪೂಜಿಸುವವರಿಗೆ ಅನಂತಕೀರ್ತಿ, ಸಂಪತ್ತು, ಸುಖಶಾಂತಿ, ಸೌಭಾಗ್ಯವನ್ನು ಅನಂತ ಕಾಲದವರೆಗೂ ಕೊಡುತ್ತಾನೆಂದೇ ಪ್ರತೀತಿಯಿದೆ!!






**ಶ್ರೀ ಅನಂತ ಪದ್ಮನಾಭ ದೇವಸ್ಥಾನ ! ತಿರುವನಂತಪುರ**

ಕೇರಳದ ರಾಜಧಾನಿ ತಿರುವನಂತಪುರ ನಗರದ ಕೇಂದ್ರ ಭಾಗದಲ್ಲಿರುವ ಶ್ರೀಅನಂತಪದ್ಮನಾಭ ಸ್ವಾಮಿ ದೇವಾಲಯ ದೇಶದ ಅತ್ಯಂತ ಶ್ರೀಮಂತ ದೇವಸ್ಥಾನಗಳ ಪೈಕಿ ಮುಂಚೂಣಿಯಲ್ಲಿದೆ. ಭಾರತದಲ್ಲಿ ನೋಡಲೇಬೇಕಾದ ಶ್ರೀಮಂತ, ಪ್ರಸಿದ್ಧ ದೇವಸ್ಥಾನಗಳ ಪೈಕಿ ವಿಷ್ಣುದೇವರಿಗೆ ಮುಡಿಪಾದ ಈ ದೇವಾಲಯ ಒಂದು. ಪದ್ಮನಾಭಸ್ವಾಮಿ ದೇವಾಲಯವು 12 ಸಾವಿರ ಸಾಲಿಗ್ರಾಮಗಳಿಂದ ಮಾಡಲ್ಪಟ್ಟಿದೆ. ಈ ದೇವಾಲಯದಲ್ಲಿ 90 ಸಾವಿರ ಕೋಟಿ ಬೆಲೆಬಾಳುವ ಚಿನ್ನದ ವಿಗ್ರಹಗಳು, ಬಂಗಾರ, ಪ್ರಾಚೀನ ಬೆಳ್ಳಿ, ವಜ್ರ ವೈಢೂರ್ಯಗಳು, ಮುತ್ತು ರತ್ನದ ಹರಳುಗಳು ಇವೆ. ಇಲ್ಲಿ ಎರಡು ಚಿನ್ನದ ತೆಂಗಿನ ಕಾಯಿಗಳಿದ್ದು ಅದರಲ್ಲಿ ಬೆಲೆ ಬಾಳುವ ಹರಳುಗಳೂ ಇವೆ.

**ಸರೋವರ ಕ್ಷೇತ್ರ ಅನಂತಪುರ! ಕುಂಬಳೆ**

ಕಾಸರಗೋಡು ಜಿಲ್ಲೆಯ ಕುಂಬಳೆಯ ಅನಂತಪುರ ಎಂಬಲ್ಲಿ ವಿಶಾಲ ಪ್ರದೇಶದಲ್ಲಿ ಕೆರೆಯ ನಡುವೆ ಇರುವ ದೇವಸ್ಥಾನ ಅನಂತಪುರ ಕ್ಷೇತ್ರ. ಇದನ್ನು ಸರೋವರ ಕ್ಷೇತ್ರ ಅನಂತಪುರ ಎಂದೂ ಹೇಳುತ್ತಾರೆ. ಪುರಾಣದ ಪ್ರಕಾರ ಈ ಕ್ಷೇತ್ರ ಕೇರಳದ ತಿರುವನಂತಪುರ ಅನಂತಪದ್ಮನಾಭ ಸ್ವಾಮಿಯ ಮೂಲಸ್ಥಾನ.

ಶ್ರೀ ಅನಂತಪದ್ಮನಾಭ ಸ್ವಾಮಿ ಇಲ್ಲಿಯ ಪ್ರಧಾನ ದೇವರು. ಕಾಸರಗೋಡು ಪೇಟೆಯಿಂದ 12 ಕಿ.ಮೀ. ದೂರದ ಕುಂಬಳೆ ಬಂದಾಗ ನಾಯ್ಕಾಪು ಎಂಬಲ್ಲಿಂದ 1 ಫರ್ಲಾಂಗ್ ದೂರದಲ್ಲಿ ಕೆರೆಯ ನಡುವೆ ರಾರಾಜಿಸುವ ಪುರಾತನ ದಿವ್ಯ ಸನ್ನಿಧಿ ಅನಂತಪುರ ಮಂಗಳೂರಿನಿಂದ ಸುಮಾರು 44 ಕಿ.ಮೀ. ದೂರ ಕುಂಬಳೆ ಪೇಟೆ ಮೂಲಕ ಸಾಗಿ ಬದಿಯಡ್ಕ ಮಾರ್ಗವಾಗಿ ಬರಬಹುದು. ಪುತ್ತೂ-ಬದಿಯಡ್ಕ ಮಾರ್ಗವಾಗಿಯೂ ಈ ಕ್ಷೇತ್ರಕ್ಕೆ ಬರಬಹುದು.

ತುಳುನಾಡಿನ ಪುರಾತನ ಪ್ರಸಿದ್ಧ ಪುಣ್ಯ ಕ್ಷೇತ್ರ ವಿಶಾಲ ಕೆರೆಯ ನಡುವೆ 5 ಹೆಡೆಯ ಸರ್ಪದ ಮೇಲೆ ಕುಳಿತ ಅನಂತಪದ್ಮನಾಭ ಸ್ವಾಮಿಯ ಮೂರ್ತಿ ಇದೆ. ಈ ದೇವಳ ಕೆಂಪು ಕಲ್ಲಿನಿಂದ ಕಟ್ಟಿದ ಪುರಾತನ ಸರ್ಪಕಟ್ಸ್ ಶೈಲಿಯ ಮೂರು ಮೀಟರ್ ಎತ್ತರದ ಆವರಣದ ಗೋಡೆ ಕಟ್ಟಲಾಗಿದೆ. ಆವರಣ ಗೋಡೆ ಮುಂದೆ ಹೋದಾಗ ಬಲಿ ಕಲ್ಲು, ನಂತರ ಮೆಟ್ಟಿಲು ಇಳಿದು ಮುಂದೆ ಹೋದಾಗ ಗೋಪುರ ಸಿಗುತ್ತದೆ. ಗೋಪುರಕ್ಕೂ ನಮಸ್ಕಾರ ಮಂಟಪಕ್ಕೂ ನಡುವಿರುವ ನೀರ ಮೇಲಿನ

ಚಿಕ್ಕ ಸೇತುವೆಯಲ್ಲಿ ಹೋದಾಗ ಗರ್ಭಗುಡಿ ಕಾಣುತ್ತೇವೆ. ಗರ್ಭಗುಡಿಯ ಒಳಗೆ ನೋಡುವಾಗ ಅನಂತಪದ್ಮನಾಭ ಸ್ವಾಮಿಯ ದರ್ಶನವಾಗುತ್ತದೆ.

ಕ್ಷೇತ್ರದ ವಿಶಾಲ ಕೆರೆಯಲ್ಲಿ ಒಂದು ಬಬಿಯ ಹೆಸರಿನ ಮೊಸಳೆ ಇದ್ದು. ಅರ್ಚಕರು ಪ್ರತಿದಿನ ಮೊಸಳೆಗೆ ಮಧ್ಯಾಹ್ನ ಮಹಾಪೂಜೆ ಆದ ಮೇಲೆ ನೈವೇದ್ಯ ಕೊಡುವ ಸಂಪ್ರದಾಯ ಇಂದಿಗೂ ನಡೆದುಕೊಂಡು ಬಂದಿದೆ. ಮೊಸಳೆಯ ಹೆಸರು ಕರೆದಾಕ್ಷಣ ಅದು ಸುರಂಗದಿಂದ ಬಂದು ನೈವೇದ್ಯ ಸ್ವೀಕರಿಸುತ್ತದೆ. ಅನಂತಪುರ ಕ್ಷೇತ್ರದ ಕೆರೆಯಲ್ಲಿ ಇರುವ ವಿಶೇಷ ಸುರಂಗ ಮಾರ್ಗದಲ್ಲಿ ಹೋದರೆ ತಿರುವನಂತಪುರದ ಪದ್ಮನಾಭ ಸ್ವಾಮಿಯ ಕ್ಷೇತ್ರಕ್ಕೆ ಸೇರುತ್ತದೆ ಎನ್ನುವುದು ಜನರು ನಂಬಿಕೆ.

### ಶ್ರೀ ಅನಂತ ಪದ್ಮನಾಭ ದೇವಸ್ಥಾನ! ಕುಡುಪು

ದಕ್ಷಿಣ ಭಾರತದ ಪ್ರಸಿದ್ಧ ನಾಗಾರಾಧನೆ ಕ್ಷೇತ್ರ ಕುಡುಪು ಶ್ರೀ ಅನಂತಪದ್ಮನಾಭ ದೇವಸ್ಥಾನ. ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಈ ಕ್ಷೇತ್ರವು ಮಂಗಳೂರಿನಿಂದ ಸುಮಾರು 10 ಕಿ.ಮೀ. ದೂರದಲ್ಲಿ ಮಂಗಳೂರು ಕಾರ್ಕಳ ಹೆದ್ದಾರಿಯಲ್ಲಿದೆ. ಈ ದೇವಸ್ಥಾನವು ಅನಂತಪದ್ಮನಾಭನಿಗೆ (ವಿಷ್ಣು) ಸಮರ್ಪಿತವಾಗಿದೆ ಮತ್ತು ನಾಗಾರಾಧನೆಗೆ ಪ್ರಸಿದ್ಧವಾಗಿದೆ. ವಾರ್ಷಿಕ ಉತ್ಸವ ಷಷ್ಠಿ ಇಲ್ಲಿನ ಪ್ರಸಿದ್ಧ ಧಾರ್ಮಿಕ ಸಮಾರಂಭವಾಗಿದೆ ಮತ್ತು ನಾಗರಪಂಚಮಿಯನ್ನು ಇಲ್ಲಿ ಭಕ್ತಿಯಿಂದ ಆಚರಿಸಲಾಗುತ್ತದೆ.

### ಶ್ರೀ ಅನಂತ ಪದ್ಮನಾಭ ದೇವಸ್ಥಾನ! ಪೆರ್ಡೂರು

ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಸ್ಥಾನ ಪುರಾತನ ದೇವಾಲಯ. ಇಲ್ಲಿನ ವಿಶೇಷತೆ ಎಂದರೆ ನೀವು ಯಾವುದಾದರೂ ಇಚ್ಛೆಯನ್ನು ದೇವರಲ್ಲಿ ಭಕ್ತಿಯಿಂದ ಬೇಡಿಕೊಂಡು ಅದು ನೆರವೇರಿದರೆ ಬಾಳೆಹಣ್ಣನ್ನು ಅರ್ಪಿಸುವುದಾಗಿ ಹರಕೆ ಹೇಳಬೇಕು. ಆಗ ನಿಮ್ಮ ಕೋರಿಕೆ ಈಡೇರುತ್ತದಂತೆ. ಹಾಗಾಗಿ ಭಕ್ತರು ತಮ್ಮ ಹರಕೆ ಈಡೇರಿದ ಮೇಲೆ ಬುಟ್ಟಿ ತುಂಬಾ ಬಾಳೆ ಹಣ್ಣನ್ನು ಈ ದೇವಸ್ಥಾನಕ್ಕೆ ಅರ್ಪಿಸುತ್ತಾರೆ. ನವ ವಿವಾಹಿತರಾದ ದಂಪತಿ 'ಮದುಮಕ್ಕಳ ಜಾತ್ರೆ' ಎಂದೇ ಪ್ರಸಿದ್ಧಿ ಪಡೆದ ಈ ದೇವಸ್ಥಾನದ ಜಾತ್ರೆಗೆ ಬಂದು, ತಮ್ಮ ಹರಕೆ ಸಲ್ಲಿಸುತ್ತಾರೆ. ಇಲ್ಲಿನ ಈ ಅನಂತಪದ್ಮನಾಭಸ್ವಾಮಿ ದೇವಾಲಯವು ಸುಮಾರು 800 ವರ್ಷಗಳ ಇತಿಹಾಸ ಹೊಂದಿದೆ. ಸಂಕ್ರಮಣಕ್ಕೆ ಸಾವಿರಾರು ಭಕ್ತರು ಈ ದೇವಾಲಯಕ್ಕೆ ಬರುತ್ತಾರೆ.

ಈ ಕ್ಷೇತ್ರವು ಉಡುಪಿಯಿಂದ 20 ಕಿ.ಮೀ.ದೂರದ ಪೆರ್ಡೂರು ಎಂಬ ಹಳ್ಳಿಯಲ್ಲಿದೆ. ಹೆಬ್ರಿಯಿಂದ 32 ಕಿ.ಮೀ. ದೂರದಲ್ಲಿದೆ. ಬೆಂಗಳೂರಿನಿಂದ ಖಾಸಗಿ ಬಸ್/ಕೆ.ಎಸ್. ಆರ್.ಟಿ.ಸಿ. ಬಸ್ ಮೂಲಕ ಉಡುಪಿ ತುಲುಪಿ ಅಲ್ಲಿಂದ ರಿಕ್ಷಾ ಅಥವಾ ಬಸ್ ಮೂಲಕ ಪೆರ್ಡೂರು ತಲುಪಬಹುದು. ರೈಲಿನಲ್ಲಿ ಬರುವುದಾದರೆ ಉಡುಪಿ ರೈಲು ನಿಲ್ದಾಣದಲ್ಲಿಳಿದು ಬಳಿಕ ರಿಕ್ಷಾ ಅಥವಾ ಬಸ್ ಮೂಲಕ ಪೆರ್ಡೂರು ತಲುಪಬಹುದು. ವಿಮಾನದಲ್ಲಿ ಬರುವುದಾದರೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದು ನಂತರ ಉಡುಪಿ ಹೆಬ್ರಿಗೆ ಬಸ್ ಅಥವಾ ಟ್ಯಾಕ್ಸಿ ಮೂಲಕ ತಲುಪಬಹುದು.

### ಜುಲೈ 2024 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಪ್ರಥಮ ಏಕಾದಶಿ
2. ಪುಣ್ಯಕಾಲವೆಂದು
3. ಆಷಾಢಶುಕ್ಲ ಏಕಾದಶಿಯಿಂದ ಕಾರ್ತಿಕ ಏಕಾದಶಿ
4. ಕಳಶವಿದೆ
5. ಶ್ರೀಮದ್ ಹರಿಕಥಾಮೃತಸಾರ
6. ಶ್ರೀನಿವಾಸ
7. ಬಲಿಪೀಠ ಹಾಗೂ ಧ್ವಜಸ್ತಂಭಗಳಿವೆ
8. ನಾಲ್ಕು ದೇಹಗಳಿವೆ. ಸೂಕ್ಷ್ಮದೇಹ, ಲಿಂಗದೇಹ, ಅನಿರುದ್ಧದೇಹ, ಸ್ಥೂಲದೇಹ
9. ಸೂರ್ಯನಿಗೆ
10. ಕೆಲವರು ಮೂರು ಮತ್ತು ನಾಲ್ಕು
11. ಶಯನೈಕಾದಶಿ
12. 9 ದಿನಗಳು
13. ವೃಷಭಮಾಸ ಅನುರಾಧ ನಕ್ಷತ್ರದಿನದಂದು
14. 19 ಪಾಶುರಗಳಲ್ಲಿ
15. ವಾನರರಸಹಾಯದಿಂದ



# ಪ್ರೋಷ್ಟಪದಿ ಭಾಗವತ

– ಶ್ರೀಮತಿ. ಮಾಧುರಿದೇಶಪಾಂಡೆ

ಭಾದ್ರಪದ ಮಾಸದ ಪ್ರತಿಪದೆಯಿಂದು ಆರಂಭವಾಗಿ ಪೌರ್ಣಮಿಯವರೆಗೆ ಪ್ರೋಷ್ಟಪದಿ ಇರುತ್ತದೆ. ಭಾಗವತ ಶ್ರವಣ/ಪಠಣವು ಪರಮ ಪುಣ್ಯದ ಕಾರ್ಯ ಹಾಗೂ ಪವಿತ್ರ ಕಾರ್ಯವೆನಿಕೊಳ್ಳುತ್ತದೆ. ನಮ್ಮ ಜೀವನದ ಸಾಧನೆಯ ಮಾರ್ಗವನ್ನು ಭಾಗವತ ಪುರಾಣವು ತಿಳಿಸುತ್ತದೆ. ವೇದವ್ಯಾಸರು ಭಾಗವತ ಪುರಾಣವನ್ನು ರಚಿಸಿದವರಾಗಿದ್ದಾರೆ. ಭಾಗವತ ಪುರಾಣದಲ್ಲಿ ಜೀವನದ ಎಲ್ಲ ಸಾರವು ಬರುತ್ತದೆ. 12 ಸ್ಕಂದಗಳ 18,000 ಶ್ಲೋಕಗಳುಳ್ಳ ಭಾಗವತ ಪುರಾಣವನ್ನು ಈ ವಿಶೇಷ ಸಮಯದಲ್ಲಿ ಪಠಣ ಶ್ರವಣ ಮಾಡುವುದರ ಹಿಂದೆ ಕಥೆಯಿದೆ. ಪರೀಕ್ಷಿತ ಮಹಾರಾಜನು ತನ್ನ ಮರಣದ ಸಮಯ ನಿಶ್ಚಿತವಾದ ಮೇಲೆ ಧರ್ಮ ಸಾಧನೆಯ ಕಾರ್ಯ ಹೇಗೆ ಎಂದು ಕೇಳಿದಾಗ ಶುಕ ಮುನಿಗಳು ವೇದವ್ಯಾಸ ದೇವರು ಬರೆದ "ಭಾಗವತ ಪುರಾಣ"ವನ್ನು ಕೇಳಿಸಿದರು. ಆ ವಿಶೇಷ ಸಂದರ್ಭದಲ್ಲಿ ಒಂದೇ ವಾರ ಸಮಯದಲ್ಲಿ ಹೇಳಿದ ಕಾರಣ ಇಂದಿಗೂ ಅದರಂತೆ ಪ್ರೋಷ್ಟಪದಿ ಭಾಗವತ ಕೇಳಿ ಕೃತಾರ್ಥರಾಗುತ್ತೇವೆ.

ಮಹಾಭಾರತ ಯುದ್ಧದ ನಂತರ ಪಾಂಡವರು ಪರೀಕ್ಷಿತನ ರಾಜ್ಯಾಭಿಷೇಕ ಮಾಡಿ ವಾನಪ್ರಸ್ಥಾಶ್ರಮಕ್ಕೆ ತೆರಳಿದರು. ಪರೀಕ್ಷಿತ ಮಹಾರಾಜನು ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಲಿದ್ದನು. ಕಾಲಕ್ರಮೇಣದಲ್ಲಿ ಕಲಿಯುಗವು ಸಮೀಪಿಸುತ್ತಿತ್ತು. ಕಲಿಯು ಬಂದು ತನಗೆ ನಾಲ್ಕು ಸ್ಥಾನಗಳನ್ನು ನೀಡಿದನು. ಕಲಿಯು ಕೇಳಿದ ಸ್ಥಾನದಲ್ಲಿ ಬಂಗಾರವು ಕೂಡ ಒಂದಾಗಿತ್ತು. ಬಂಗಾರದ ಮೂಲಕ ಕಲಿಯು ಪರೀಕ್ಷಿತ್ ರಾಜನ ಕೀರೀಟವನ್ನು ಪ್ರವೇಶಿಸಿದನು. ಪರೀಕ್ಷಿತ ಮಹಾರಾಜನು ಒಮ್ಮೆ ಬೇಟೆಗಾಗಿ ವನಕ್ಕೆ ಹೋದನು, ತಿರುಗುತ್ತ ತಿರುಗುತ್ತ ತನ್ನ ಮಾರ್ಗಭ್ರಷ್ಟನಾದನು. ಹುಡುಕುತ್ತ ಮುಂದೆ ಹೋಗುತ್ತಿರಲು ಅಲ್ಲಿ ಶಮೀಕ ಋಷಿಗಳ ಆಶ್ರಮವು ದೊರೆಯಿತು. ಅಲ್ಲಿಯೇ ಕುಳಿತು ಋಷಿಗಳು ತಪಸ್ಸನ್ನು ಮಾಡುತ್ತಿದ್ದರು. ರಾಜನು ಅವರನ್ನು ಕೂಗಿ ಕರೆದನು ಧ್ಯಾನ ಮಗ್ನರಾಗಿದ್ದ ಅವರಿಗೆ ರಾಜನ ಮಾತು ಕೇಳಿಸಲಿಲ್ಲ. ರಾಜನಾದ ತಾನು ಎಷ್ಟು ಮಾತನಾಡಿಸಿದರೂ ಮೌನವಾಗಿರುವ ಋಷಿಯನ್ನು ನೋಡಿ ಕ್ರೋಧಿತನಾದ ರಾಜನು ಅವರ ಬಳಿಯಲ್ಲಿ ಬಿದ್ದಿದ್ದ ಮೃತವಾದ ಹಾವನ್ನು ಅವರ ಕೊರಳಿಗೆ ಹಾಕಿ ಹೊರಟು ಹೋದನು.

ಸದಾ ಧರ್ಮಾತ್ಮನಾಗಿದ್ದ ರಾಜನ ಕೈಯಲ್ಲಿ ಈ ಅಪರಾಧವನ್ನು ಕಲಿಯು ಮಾಡಿಸಿದ್ದ, ಕಲಿಯ ಪ್ರಭಾವವು ಕೆಲಸ ಮಾಡಿತ್ತು. ಶಮೀಕರ ಪುತ್ರನಾದ ಶೃಂಗಿಯು ಆಶ್ರಮಕ್ಕೆ ಬಂದು ನೋಡಿದಾಗ ತಂದೆಯು ಕೊರಳಲ್ಲಿ ಸತ್ತ ಹಾವು ಇದೆ. ತಂದೆಗಾದ ಅವಮಾನವನ್ನು ತಿಳಿದು ತನ್ನ ತಂದೆಯ ಕುತ್ತಿಗೆಯಲ್ಲಿ ಸತ್ತ ಹಾವನ್ನು ಹಾಕಿದವನಿಗೆ ತಕ್ಷಣ ನಾಗನು ಕಚ್ಚಿ 7 ದಿನದಲ್ಲಿ ಸಾಯಲಿ ಎಂದು ಶಾಪವನ್ನು ಕೊಟ್ಟನು. ಶಮೀಕರ ತಪಸ್ಸು ಮುಗಿದು ಅವರು ಧ್ಯಾನದಿಂದ ಹೊರ ಬಂದಾಗ ನೋಡಿದರೆ ಅವರ ಕೊರಳಲ್ಲಿ ಹಾವು ಕಂಡಿತು. ಶಿಷ್ಯರನ್ನು ಕರೆದು ಕೇಳಿದಾಗ ನಡೆದ ಸಂಪೂರ್ಣ ಘಟನೆಯನ್ನು ಪರೀಕ್ಷಿತ ರಾಜನ ಬಗೆಗೆ ಮತ್ತು ಶೃಂಗಿಯ ಶಾಪದ ಕುರಿತಾಗಿಯೂ ಹೇಳಿದರು. ಆಗ ಶಮೀಕರಿಗೆ ಪಶ್ಚಾತ್ತಾಪವಾಯಿತು ಏಕೆಂದರೆ ಪರೀಕ್ಷಿತ ಮಹಾರಾಜನು ಪರಮ ವಿಷ್ಣು ಭಕ್ತನು ಧರ್ಮಾತ್ಮನು ಆಗಿದ್ದನು. ಶಮೀಕರು ತಮ್ಮ ಶಿಷ್ಯರೊಬ್ಬರೊಡನೆ ಶೃಂಗಿಯ ಶಾಪದ ವಿಷಯವನ್ನು ಪರೀಕ್ಷಿತ ಮಹಾರಾಜನಿಗೆ ತಲುಪಿಸಿದರು ಹಾಗೂ ಇರುವ ಸಮಯದಲ್ಲಿ ಧರ್ಮ ಸಾಧನೆಯನ್ನು ಮಾಡಿಕೊಳ್ಳಲು ಹೇಳಿ ಕಳುಹಿಸಿದರು.

ತನ್ನ ನಡೆಗೆ ಪಶ್ಚಾತ್ತಾಪವಾಗಿದ್ದ ರಾಜನು ತನಗೆ ಉಳಿದಿರುವ ಅಲ್ಪ ಸಮಯದಲ್ಲಿ ಧರ್ಮದ ಸಾರವನ್ನು ಸಾಧನೆಯನ್ನು ಮಾಡುವ ಬಯಕೆಯಿಂದ ಶುಕ ಮುನಿಗಳಲ್ಲಿ ಪ್ರಾರ್ಥಿಸಿದಾಗ ಅವರು ರಾಜನಿಗೆ ಅತ್ಯಂತ ಕಡಿಮೆ ಸಮಯದಲ್ಲಿ ಭಾಗವತವನ್ನು ಕೇಳಿಸಿದರು. ಅದೇ ಸಮಯವನ್ನು 'ಪ್ರೋಷ್ಟಪದಿ'' ಎನ್ನುತ್ತಾರೆ. ಪ್ರತಿಪದಾ ತಿಥಿಯಿಂದ ಆರಂಭಿಸಿ ಪೌರ್ಣಮೆಯವರೆಗೂ ಭಾಗವತ ಪುರಾಣ ಶ್ರವಣ ಮಾಡಿ ಪರೀಕ್ಷೀತ ರಾಜನು ಸದ್ಗತಿಗೆ ಪ್ರಾಪ್ತನಾದನು. ಯಾವ ಸಮಯದಲ್ಲಿ ಪರೀಕ್ಷಿತ ಮಹಾರಾಜನು ಭಾಗವತ ಪುರಾಣ ಶ್ರವಣವನ್ನು ಶುಕ ಮುನಿಗಳಿಂದ ಮಾಡಿದ್ದನೋ ಅದೇ ಸಮಯದಲ್ಲಿ ಭಾಗವತ ಪುರಾಣ ಕೇಳು/ಹೇಳುವುದಕ್ಕೆ ಪ್ರೋಷ್ಟಪದಿ ಭಾಗವತ ಎನ್ನಲಾಗುತ್ತದೆ.

ಇಂತಹ ಶ್ರೇಷ್ಠ ಗ್ರಂಥದ ಪಠಣ ಮತ್ತು ಶ್ರವಣ ಮಾಡಿದಲ್ಲಿ ನಾವು ಮಾಡಿದ ಪಾಪ ಕರ್ಮಗಳು ನಾಶವಾಗಿ ನಮಗೆ ಸದ್ಗತಿಯು ಪ್ರಾಪ್ತ ವಾಗುತ್ತದೆ ಎಂದು ಪ್ರತಿ ವರ್ಷವೂ ನಾವೂ ಭಾದ್ರಪದ ಮಾಸದಲ್ಲಿ ಪ್ರೋಷ್ಟಪದಿ ಭಾಗವತವನ್ನು ಕೇಳುತ್ತಾರೆ. ಭಾಗವತ ಸಪ್ತಾಹವೂ ಕೂಡ ಅಷ್ಟೇ ಪ್ರಸಿದ್ಧವಾಗಿದೆ. ಕಡಿಮೆ ಸಮಯದಲ್ಲಿ ಅಧಿಕ ಪುಣ್ಯ ಸಂಚಯವನ್ನು ಮಾಡಿಸುವುದೇ ಭಾಗವತಪುರಾಣ. ಭಾಗವತ ಪುರಾಣದ ಪಠಣ ಶ್ರವಣ ಮಾಡಲು ಆಗದೇ ಇರುವವರು ಏಕ ಶ್ಲೋಕಿ ಭಾಗವತ, ವಾದಿರಾಜರು ಮಾಡಿದ ಭಾಗವತದ ಹಾಡನ್ನು ಕೇಳಿದರೆ ಕೂಡ ಪುಣ್ಯ ಪ್ರಾಪ್ತಿ ಆಗುತ್ತದೆ. ದಿನ ನಿತ್ಯವೂ ಸಣ್ಣ ಶ್ಲೋಕವನ್ನು ಪಠಿಸಬೇಕು ಸಾಧ್ಯವಾದಲ್ಲಿ ಭಾಗವತ ಪ್ರವಚನವನ್ನು ಹೇಳಬೇಕು. ಅದರಲ್ಲಿ ಕೂಡ ಪ್ರೋಷ್ಟಪದಿ ಸಮಯದಲ್ಲಿ ಭಾಗವತ ಶ್ರವಣ ಪುಣ್ಯಪ್ರದವಾಗಿದೆ.

# ವರಾಹ ವೈಭವ

– ಶ್ರೀಮತಿ. ಕೆ.ವಿ. ಪದ್ಮಾವತಿ
97437 22327



**ಭಗವದವತಾರಗಳಿಗೆ ದುಷ್ಟರ ಶಿಕ್ಷಣ - ಸಜ್ಜನ ಸಂರಕ್ಷಣೆಯೇ ಮುಖ್ಯ ಗುರಿ. ವರಾಹವೆಂದರೆ ಹಂದಿ. ಕೆಸರಿನಲ್ಲಿ ಹೊರಳಾಡುವುದು ಮತ್ತು ಮಲಭಕ್ಷಣೆ ಇದರ ಸಹಜವಾದ ಕಾರ್ಯ . ಮಾನವ ಈ ಪ್ರಾಣಿ ಹತ್ತಿರ ಬಂದರೆ ದೂರ ಸರಿಯುತ್ತಾರೆ. ಇಂತಹ ನಿಕೃಷ್ಟವಾದ ವರಾಹದ ರೂಪವನ್ನು ಭಗವಂತ ಹೊಂದಲು ಕಾರಣವೇನು? ಎಂಬುದಾಗಿ ಪ್ರಶ್ನೆಯು ಸಹಜವಾಗಿಯೇ ಬರುತ್ತದೆ. ಪರಮಪುರುಷನು ಯಾವ ರೂಪ ಧರಿಸಿದರೂ ಅದು ಅಪ್ರಾಕೃತವಾಗಿ ಮಂಗಳಕರವಾಗಿಯೇ ಇರುತ್ತದೆ.**

ಭಗವಾನ್ ಮಹಾವಿಷ್ಣುವಿನ ದಶಾವತಾರಗಳಲ್ಲಿ ವರಾಹಾವತಾರ ಮೂರನೇ ಅವತಾರ, ಹಿರಣಾಕ್ಷನೆಂಬ ರಾಕ್ಷಸನಿಂದ ರಸಾತಳಕ್ಕೆ ತಳ್ಳಲ್ಪಟ್ಟ ಪೃಥ್ವಿಯನ್ನು ಉದ್ಧರಿಸಲು ಶ್ರೀಹರಿಯು ಶ್ವೇತ ವರಾಹದ ರೂಪ ತಾಳಿ ಬಂದ ದಿನವು 'ವರಾಹ ಜಯಂತಿ' ಎಂದು ಪ್ರಸಿದ್ಧವಾಗಿದೆ. ಕಾಲಗಣನೆಯಲ್ಲಿ ಪಂಚಾಂಗಗಳಲ್ಲಿ ಪ್ರಸ್ತುತ ನಡೆಯುತ್ತಿರುವ ಕಲ್ಪಕ್ಕೆ ಶ್ವೇತವರಾಹಕಲ್ಪೆಂಬ ವರ್ಣನೆಯಿದೆ. ಸಸ್ಯ ಶ್ಯಾಮಲೆಯಾದ ಭೂದೇವಿಯು ವಿಷ್ಣುವಿನ ಪತ್ನಿಯಾಗಿದ್ದು ಜಗತ್ತಿನ ಸರ್ವ ಚರಾಚರ ಜೀವಿಗಳಿಗೂ ಮಾತೃಸ್ಥಾನಿ. ಅಂತಹ ಜಗಜ್ಜನನಿಯನ್ನು ಪೀಡಿಸತೊಡಗಿದ ರಾಕ್ಷಸನ ದುಷ್ಕೃತ್ಯದಿಂದ ಧರೆಯ ಸಮಸ್ತರಿಗೂ ಸಂಕಷ್ಟ ಉಂಟಾಯಿತು. ಗೋವುಗಳ ಮುನಿಪತ್ನಿಯರ, ಗರ್ಭಿಣಿಯರ ಜತೆ ಸೇರಿಕೊಂಡ ಭೂದೇವಿ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಅಸಾಧ್ಯ ನೋವನ್ನು ಅನುಭವಿಸಿದಳು. ಪ್ರಪಂಚವೇ ಈ ನೋವಿನಿಂದ ಕಂಗೆಟ್ಟಿತ್ತು. ಆಗ ರಾಕ್ಷಸನಿಂದ ಪಾರಾಗಲು ಎಲ್ಲಿಯೂ ಆಶ್ರಯ ಸಿಗದ ಭೂಮಾತೆ ರಸಾತಳಕ್ಕೆ ಧುಮುಕಿ ಶ್ರೀಹರಿಯನ್ನು ಪ್ರಾರ್ಥಿಸಿದಳು. ಚರಿತ್ರಾರ್ಹ ಮಹಾವ್ಯಕ್ತಿಗಳೆಲ್ಲರೂ ಅದೇ ಕಾಲದಲ್ಲಿ ಪ್ರಾರ್ಥಿಸಿದರು.

ವರಾಹ ಎಂದರೆ ಹಂದಿ. ಹಿರಣ್ಯಾಕ್ಷನೆಂಬ ರಾಕ್ಷಸನಿಂದ ಭೂದೇವಿಯನ್ನು ರಕ್ಷಿಸುವುದಕ್ಕಾಗಿ ತಾಳಿದ ಅವತಾರ. ತಾತ್ವಿಕವಾಗಿ ಹಿರಣಾಕ್ಷನೆಂದರೆ, ಬಂಗಾರದ ಮೇಲೆ ದೃಷ್ಟಿಯಿರುವವರು ಎಂದರ್ಥ. ಕೆಲವರಿಗೆ ದೇವರೇ ಬಂಗಾರ. ಇನ್ನು ಕೆಲವರಿಗೆ ಬಂಗಾರವೇ ದೇವರು! ದೇವರೇ ಬಂಗಾರವೆನ್ನುವವರು ಊರ್ಧ್ವಮುಖಿಗಳಾಗಿ ಶ್ರೇಷ್ಠತೆಯನ್ನು ಪಡೆಯುವರು. ಆದರೆ ಬಂಗಾರವೇ ದೇವರೆಂದು ಈ ಸಂಸಾರ ಸಾಗರದಡಿಯಲ್ಲಿ ಸಿಕ್ಕಿಹಾಕಿಕೊಂಡವರನ್ನು ಮೇಲಕ್ಕೆ ತರುವವನೇ ವಿಷ್ಣುವರಾಹ! ವರಾಹ ಎಂದರೆ ಮೋಡ ಎಂದೂ ಅರ್ಥವಿದೆ. ಸಮುದ್ರದಿಂದ ಆವಿಯಾದ ಜಲವು ಆಕಾಶಕ್ಕೆ ಹೋಗಿ ಗಾಳಿಯಿಂದ ತಣ್ಣಗಾಗಿ ಘನೀಕೃತವಾದ ಮೋಡವಾಗುವಂತೆ, ಲೌಕಿಕ ಮೋಹದಿಂದ ಈ ಶರೀರವೆಂಬ ಭೂಮಿಯು ಅಜ್ಞಾನದಿಂದ ಘನೀಕೃತವಾದಾಗ, ಮೋಡವನ್ನು ಕರಗಿಸುವಂತೆ, ಜ್ಞಾನಾಗ್ನಿ ಸ್ವರೂಪನಾದ ಭಗವಂತನು, ಜಡತ್ವವನ್ನು ಕರಗಿಸಿ ನೀರಿನ ಸ್ವರೂಪವನ್ನಿನತ್ತು. ನದಿಯಂತೆ ಪ್ರವಹಿಸಿ, ನಾಲ್ಕು ಜನರಿಗೆ ಉಪಕಾರಿಯಾಗಿ ಮತ್ತೆ ತನ್ನನ್ನು ಸೇರುವಂತೆ ಮಾಡುವವನು ನಾರಾಯಣ. ನಮ್ಮನ್ನು ಸಂಸಾರ ಸಾಗರದಿಂದ ಮೇಲೆತ್ತುವವನು ವಿಷ್ಣು ವರಾಹಿ,ಕಕ್ಷೆಯ ತಪ್ಪಿದ ಮಾನವರನ್ನು ಮೇಲಕ್ಕೆತ್ತಿ ಮತ್ತೆ ಸುಸ್ಥಿತಿಯಲ್ಲಿರಿಸುವವನು ವಿಷ್ಣು ವರಾಹಿ. ವರಾಹ ಎಂಬ ಶಬ್ದದ ಅಕ್ಷರಾರ್ಥ ಅತ್ಯುತ್ತಮವಾದದ್ದು ಎಂಬುದು. ಭೂಮಿಯ ಮೇಲೆ ವಾಸಿಸಲು ಆರಂಭಿಸಿದ ಆರಂಭಿಕ ಸಸ್ತನಿಗಳಲ್ಲಿ ಹಂದಿಯು ಬಲಿಷ್ಟವಾದದ್ದರಿಂದ ಇದು ಸೃಷ್ಟಿಯ ಮೂರನೇ ಹಂತವನ್ನು ಪ್ರತಿನಿಧಿಸುತ್ತದೆ.

### ವರಾಹಸ್ವಾಮಿಯ ಜನನ :

ರಾಮನವಮೀ, ಕೃಷ್ಣಾಷ್ಟಮೀ, ನರಸಿಂಹ ಜಯಂತಿಗಳು ಪ್ರಸಿದ್ಧವಾಗಿವೆ. ಇದರಂತೆ ವರಾಹವತಾರ ಯಾವ ತಿಥಿಯಲ್ಲಿ? ಎಂಬುದು ಪ್ರಶ್ನೆ.

ಶ್ರೀಮದ್ಭಾಗವತ (ತೃತೀಯ ಸ್ಕಂದ ಹದಿಮೂರನೇ ಅಧ್ಯಾಯ)ದಲ್ಲಿ ಈ ಅವತಾರದ ವೃತ್ತಾಂತವು ಹೀಗಿದೆ-ಇದು ಮೊದಲನೆಯ ಸ್ವಾಯಂಭುವ ಮನ್ವಂತರದಲ್ಲಿ ನಡೆದ ಅವತಾರ. ಬ್ರಹ್ಮನು ಪ್ರಪಂಚದ ಸೃಷ್ಟಿಗೆ ಪ್ರಾರಂಭಿಸಿ ಮನುಶತರೂಪೆಯೆಂಬ ದಂಪತಿಗಳನ್ನು ಸೃಷ್ಟಿಸಿದನು. ಇವನೇ ಸ್ವಾಯಂಭುವ ಮನು. ತಂದೆಯಾದ ಬ್ರಹ್ಮನು ಭೂಮಂಡಲದಲ್ಲಿ ಭಗವದಾರಾಧನಾ ರೂಪವಾದ ಕರ್ಮಗಳನ್ನು ಮಾಡುತ್ತಾ ಸ್ವಾಯಂಭುವ ಮನುವು ಭೂಮಿಯನ್ನು ಅರಸುತ್ತ ಭೂಮಿಯನ್ನು ಕಾಣದೆ, ತಂದೆಯೇ!

ಭೂಮಿಯು ನೀರಿನಲ್ಲಿ ಮುಳುಗಿ ಹೋಗಿದೆ. ನಾನು ಏನು ಮಾಡಲಿ? ಆಶ್ರಯವಿಲ್ಲದೆ ಏನು ಮಾಡಲು ಸಾಧ್ಯ? ಎಂದನು. ಬ್ರಹ್ಮನಿಗೂ ಆಶ್ಚರ್ಯ ವಾಯಿತು. ಇದೇನಿದು? ಈಗ ತಾನೆ ಸೃಷ್ಟಿಸಿದ ಭೂಮಿ ಏನಾಯಿತು? ಪರಮ ಪುರುಷನ ನಾಭಿಕಮಲದಲ್ಲಿ ನಾನು ಜನ್ಮಪಡೆದು ಅವನ ಅನುಗ್ರಹ ದಿಂದಲೇ ಭೂಮಿಯನ್ನು ಸೃಷ್ಟಿಸಿದೆ. ಈಗ ಅವನೇ ನನಗೆ ದಾರಿ ತೋರ ಬೇಕು ಎಂದು ಚಿಂತಿಸುತ್ತಿರಲು ಚತುರ್ಮುಖನ ನಾಸರಂಧ್ರದಿಂದ ಒಂದು ಹಂದಿಯ ಮರಿಯು ಹೊರಕ್ಕೆ ಬಂದಿತು.

ಆದರೆ ಈ ವರಾಹವು ವಿಚಿತ್ರವಾಗಿತ್ತು. ನೀಲಮೇಘದಂತೆ ಬಣ್ಣ, ನಾಲ್ಕು ವೇದಗಳೇ ನಾಲ್ಕು ಪಾದಗಳು. ಅಗ್ನಿಯೇ ಅದರ ನಾಲಿಗೆ. ರೋಮವು ದರ್ಭಮಯ. ಅದರ ಉಸಿರು ತುಪ್ಪದಂತೆ ಗಂಧವನ್ನು ಬೀರು ತ್ತಿತ್ತು. ಸಾಮಘೋಷದಂತೆ ಅದರ ಸ್ವರ. ಈ ರೀತಿ ಅದು ಇದ್ದ ಕಾರಣ ಇದು ಯಜ್ಞವರಾಹವೇ ಸರಿ ಎಂದು ಹರಿವಂಶ ಭವಿಷ್ಯ ಪರ್ವದಲ್ಲಿ ಹೇಳಿದೆ.

ಗಜೇಂದ್ರಲೋಲನಾದ ವರಾಹಮೂರ್ತಿಯು ಕ್ರೀಡಿಸುತ್ತಾ ಜಲ ರಾಶಿಯಲ್ಲಿ ಪ್ರವೇಶಿಸಿದನು. ಶ್ವೇತದ್ವೀಪದಲ್ಲಿ ಪರಮಪುರುಷರನು ವಿಹರಿ ಸುತ್ತಿರಲು ಅವನ ಭವನದ ಪಶ್ಚಿಮ ದ್ವಾರಗಳಲ್ಲಿ ಜಯ-ವಿಜಯರು ನಿಯಮಿತರಾಗಿದ್ದರು. ಒಮ್ಮೆ ಸನಕಾದಿಗಳು ಭಗವದ್ದರ್ಶನಕ್ಕಾಗಿ ಬರಲು ಜಯ-ವಿಜಯರು ಅವರನ್ನು ಒಳಕ್ಕೆ ಬಿಡಲಿಲ್ಲ. ಇದರಿಂದ ಕುಪಿತರಾದ ಮುನಿಗಳು ಭೂಮಿಯಲ್ಲಿ ನರಜನ್ಮವೆತ್ತುವಂತೆ ಶಪಿಸಿದರು.

ಪರಮ ಪುರುಷನಿಗೆ ಈ ವಿಷಯ ತಿಳಿದು ಮೂರು ಬಾರಿ ರಾಕ್ಷಸ ಜನ್ಮವನ್ನು ಪಡೆದು ನನ್ನಿಂದಲೇ ಹತರಾಗಿ ಪುನಃ ನಿಮ್ಮ ಸ್ಥಾನವನ್ನಲಂಕರಿಸಿ ಎಂದು ಆಜ್ಞಾಪಿಸಿದನು. ಇವರ ಮೊದಲನೇ ಜನ್ಮ ಹಿರಣ್ಯಾಕ್ಷ-ಹಿರಣ್ಯ ಕಶಿಪು, ಈ ಹಿರಣ್ಯಾಕ್ಷನೇ ಭೂಮಿಯನ್ನಪಹರಿಸಿ ಸಮುದ್ರದಲ್ಲಿ ಬಚ್ಚಿಟ್ಟಿ ದ್ದನು. ಭಯಂಕರವಾದ ಕೋರೆದಾಡೆಗಳಿಂದ ಅವನು ಕಠೋರನಾಗಿದ್ದನು. ಅವನು ಸಮುದ್ರದಲ್ಲಿ ಮುಳುಗಿದಾಗಲೇ ಸಮುದ್ರವು ರಭಸದಿಂದ ಸಿಡಿದು ಹೋಗಿ ಭಯಂಕರವಾದ ಶಬ್ದವನ್ನುಂಟು ಮಾಡಿತು.

ಆ ದಿವ್ಯ ಯಜ್ಞವರಾಹನು ತನ್ನ ಕೋರೆದಾಡಿಗಳಿಂದ ಭೂಮಿ ಯನ್ನು ಚುಚ್ಚಿ ತನ್ನ ಕೋರೆಹಲ್ಲಿನ ಮೇಲೆ ಇಟ್ಟುಕೊಂಡು ಮೇಲೆ ಬಂದನು. ಹೀಗೆ ಎದ್ದು ಬರುವಾಗ ತನ್ನನ್ನು ಆಶ್ರಯಿಸಿದ ಹಿರಣ್ಯಾಕ್ಷನನ್ನು ಯಜ್ಞ ವರಾಹನು ಲೀಲೆಯಿಂದ ಜಲದಲ್ಲಿ ಸಂಹರಿಸಿಬಿಟ್ಟನು. ನೀರಿನಲ್ಲಿ ಸಮಾ ಶ್ರಿತಳಾಗಿದ್ದ ವಸುಂಧರೆಯನ್ನು ಮೇಲಕ್ಕೆತ್ತಿ ದುಷ್ಟ ಹಿರಣ್ಯಾಕ್ಷನನ್ನು ನಿಗ್ರಹಿಸಿದ ಸೂಕರ ರೂಪಿ ಭಗವಂತನ ಕುರಿತಾಗಿ ದೇವತೆಗಳು, ಋಷಿಗಳು ಕೊಂಡಾಡ ತೊಡಗಿದರು.

ಯಜ್ಞವರಾಹ, ಭೂವರಾಹನೆಂದು ಸೂಚಿಸಲ್ಪಟ್ಟ ಭಗವಂತನ ರೋಮದಲ್ಲಿ ಸರ್ವಯಜ್ಞಗಳೂ ಇವೆ. ತೊಗಲಿನಲ್ಲಿ ಗಾಯತ್ರಿ, ರೋಮ ಗಳಲ್ಲಿ ದರ್ಭೆ,ನೇತ್ರಗಳಲ್ಲಿ ಘೃತ (ತುಪ್ಪ), ನಾಲ್ಕು ಕಾಲುಗಳಲ್ಲಿ ಅಧ್ವರ್ಯು, ಉದ್ಗಾತೃ, ಹೋತೃ, ಬ್ರಹ್ಮಾ ಎಂಬ ಚತುರ್ವೇದ ಪರಿಣಿತ ಋತ್ವಿಜರು ಇರು ತ್ತಾರೆ. ಬಿಳಿಯ ಹಂದಿಯ ಮುಖಾಗಾತ್ರದಲ್ಲಿ 'ಸ್ರುಕ್' ಮೂಗಿನ ಹೊಳ್ಳೆ ಗಳಲ್ಲಿ 'ಸ್ರುವಾ' ಹೊಟ್ಟೆಯಲ್ಲಿ 'ಇಡಾ' ಎಂಬ ಯಜ್ಞಾಕ್ಷುದಾಪಾತ್ರೆ, ಕಿವಿ ಗಳಲ್ಲಿ 'ಚಮಸ', ಮುಖದಲ್ಲಿ ಪಾಶಿತ್ರ ಕಂಠದಲ್ಲಿ ಗ್ರಹ (ಸೋಮರಸ ಪಾತ್ರೆ) ವರಾಹದ ಅಗಿಯುವಿಕೆ ಅಗ್ನಿಹೋತ್ರ ಅವತಾರ ತಾಳುವಿಕೆಯೇ 'ದೀಕ್ಷ ಣೀಯ' ಎಂಬ ಇಷ್ಟಿ ಕೋರೆದಾಡೆಗಳೇ 'ಪ್ರಾಯಣೀಯ' (ದೀಕ್ಷಾ ನಂತ ರದ ಇಷ್ಟಿ) ಮತ್ತು 'ಉದಯನೀಯ' (ಯಜ್ಞಸಮಾಪ್ತಿ.)

ಸಪ್ತಧಾತುಗಳೇ ಅಗ್ನಿಷ್ಟೋಮ, ಅತ್ಯಗ್ನಿಸ್ಟೋಮ, ಉಕ್ಥ, ಷೋಡಶೀ ವಾಜಪೇಯಿ ಅತಿರಾತ್ರ, ಅಪ್ತೋರ್ಯಾಮ ಎಂಬ ಏಳು ಸಂಸ್ಥೆಗಳು. ವರಾಹ ರೂಪದ ಶರೀರದ ಸಂಧಿ ಭಾಗಗಳೇ ದ್ವಾದಶಾಹ ಸತ್ರಗಳು. ಮಂತ್ರ, ದ್ರವ್ಯ, ಕರ್ಮ,ಜ್ಞಾನ, ಕ್ರಿಯಾಶಕ್ತಿ ಸ್ವರೂಪನಾದ ವರಾಹ ಸ್ವಾಮಿಯ ಲೀಲೆ ಅನಂತ. ನರಸಿಂಹ ಪುರಾಣದ 39 ನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಂತೆ ವರಾಹನ ನಯನದ್ವಯಗಳೇ ಸೂರ್ಯಚಂದ್ರರು. ಯಜ್ಞಧರ್ಮಗಳೇ ಆತನ ಕರ್ಣ ಗಳು. ಹಂದಿಯ ಕೂಗು ಸಾಮಗಾನ, ಮೂಗು ಹವಿಸ್ಸು, ನಕ್ಷತ್ರ ತಾರೇಗಳೇ ಹಾರ. ಭೂಮಿಯನ್ನು ಉದ್ಧರಿಸಿದ ವರಾಹರೂಪಿ ಮಹಾ ವಿಷ್ಣುವು ಕಾಕ ವೆಂಬ ತೀರ್ಥದಲ್ಲಿ ಅದೃಶ್ಯನಾಗಿ ಮೂಲದಲ್ಲಿ ಸೇರಿ ಸರ್ವರನ್ನು ಪೊರೆ ಯುತ್ತಾನೆಂದು ಪುರಾಣೋಕ್ತಿ. ಭಾದ್ರಪದ ಶುಕ್ಲ ತದಿಗೆಯ ವರಾಹ ಜಯಂತಿಯ ನಿಮಿತ್ತದಲ್ಲಿ ಪೃಥ್ವಿಯು ಸದಾ ಸಸ್ಯ ಶ್ಯಾಮಲೆಯಾಗಲೆಂದು ವರಾಹ ಸ್ವಾಮಿಯ ಭಕ್ತರ ಕೋರಿಕೆ.

### ವರಾಹ ವೈಭವ

ಆದಿವರಾಹಮೂರ್ತಿ ಪ್ರಕೃತಿ ಪರಿಸರದ ಸಂರಕ್ಷಕನಾಗಿ ನೆಮ್ಮೆಲ್ಲರ ಆರಾಧ್ಯಮೂರ್ತಿ ಆಗಿ ಕಂಗೋಳಿಸುತ್ತಿದ್ದಾನೆ. ಆದ್ದರಿಂದಲೇ ಇಂದಿಗೂ ಸಂಕಲ್ಪದ ಸಮಯದಲ್ಲಿ 'ಶ್ವೇತವರಾಹಕಲ್ಪೇ ವೈವಸ್ವತಮನ್ವಂತರೇ' ಎಂದೇ ಇಡೀ ಮನುಕುಲ ನೆನೆಪಿಸಿಕೊಂಡು ನಮಿಸುತ್ತದೆ. ಭಗವಾನ ವೇದವ್ಯಾಸ ರಿಂದ ರಚಿತವಾದ ವರಾಹಪುರಾಣವು ಒಂದು ವಿಶಿಷ್ಟವಾದ, ಶ್ರೇಷ್ಠವಾದ ಸಾತ್ವಿಕ ಪುರಾಣಗಳಲ್ಲಿ ಒಂದಾಗಿದೆ. ಇದು 218 ಅಧ್ಯಾಯಗಳನ್ನು ಒಳ ಗೊಂಡು ಆದಿಯಲ್ಲಿ ಸೃಷ್ಟಿವಿಚಾರ, ಮಹಾಪುರುಷ, ದೇವದಾನವರ, ದಾನಿ ಗಳ ವಿಚಾರಗಳನ್ನು ನಿರೂಪಿಸಿದೆ.

ಏಳನೆಯ ಅಧ್ಯಾಯದಲ್ಲಿ ಗಯಾದಲ್ಲಿ ಪಿಂಡ ಪ್ರಧಾನದಿಂದ ಪಿತೃ ಗಳ ಉದ್ಧಾರ ವಿಚಾರ, ಗಯಾದಲ್ಲಿ ಇರುವ ಗದಾಧರನ ಮಹಿಮೆ ತಿಳಿಸು ವಾಗ ಶ್ರಾದ್ಧವನ್ನು ಆಚರಿಸುವವನು ಶ್ರಾದ್ಧಕಾಲದಲ್ಲಿ ಸಿಟ್ಟು, ಅವಸರ ಮತ್ತು ಊಟಕ್ಕೆ ಕುಳಿತ ಬ್ರಾಹ್ಮಣನನ್ನು ದಾಟಿ ಹೋಗುವುದು, ಇವುಗಳನ್ನು ಮಾಡ

ಕೂಡದು ಎಂದು ಹೇಳಲಾಗಿದೆ. ಶ್ರೀವರಾಹ ಪುರಾಣಾಂತರ್ಗತ ಶ್ರೀವೆಂಕಟಾಚಲ ಮಹಾತ್ಮೆ ಬಹಳ ಪ್ರಸಿದ್ಧವಾದದು.

### ವರಾಹ ಕ್ಷೇತ್ರಗಳು

ರಾಮ, ಕೃಷ್ಣ ಮತ್ತು ನೃಸಿಂಹಕ್ಷೇತ್ರಗಳಿಗೆ ಹೋಲಿಸಿದರೆ ವರಾಹಕ್ಷೇತ್ರಗಳು ತುಂಬಾ ವಿರಳ. ತಿರುಪತಿಯು ಮೂಲವಾಗಿ ವರಾಹಕ್ಷೇತ್ರವಾಗಿದೆ. ಜಪ-ತಪ- ಹೋಮಗಳಲ್ಲಿ 'ಆದಿವರಾಹ ಕ್ಷೇತ್ರೇ ಆನಂದನಿಲಯ ವಿಮಾನಚ್ಛಾಯಾಯಾಂ ಅಲಮೇಲು ಮಂಗಾ ಸಮೇತ ಶ್ರೀ ಶ್ರೀನಿವಾಸಸ್ವಾಮಿ ಎಂದು ಸಂಕಲ್ಪ ಹೇಳುವುದು ರೂಢಿಯಲ್ಲಿದೆ. ಸ್ವಾಮಿಪುಷ್ಕರಿಣಿಗೆ ಸೇರಿದಂತಿರುವ ವರಾಹ ಸನ್ನಿಧಿಯ ಮುಂದೆ ಅವಭೃತಸ್ನಾನ ಇತ್ಯಾದಿ ಉತ್ಸವಗಳು ಜರುಗುವುವು.

ತಿರುಮಲೆಯಲ್ಲಿ ಮೊದಲು ವರಾಹದೇವರನ್ನು ದರ್ಶನ ಮಾಡಿ ಅನಂತರವೇ ಶ್ರೀನಿವಾಸ ದರ್ಶನ ಮಾಡುವ ಆತುರ ಆಕಾಂಕ್ಷೆಗಳಿಂದ ಬಹಳಷ್ಟು ಭಕ್ತರು ಈ ನಿಯಮವನ್ನು ಅಷ್ಟಾಗಿ ಲಕ್ಷಿಸುವುದಿಲ್ಲ. ಅಷ್ಟಸ್ವಯಂಕ್ಷೇತ್ರಗಳಲ್ಲಿ ಒಂದಾದ ಶ್ರೀಮುಷ್ಣಂನಲ್ಲಿ ಶ್ವೇತವರಾಹಸ್ವಾಮಿಯು ನೆಲೆಸಿರುವಲ್ಲಿ ಒಂದು ವಿಶೇಷವಿದೆ. ಮಾಘಮಾಸದಲ್ಲಿ ಉತ್ಸವ ಮೂರ್ತಿಯನ್ನು ಸಮುದ್ರ ಸ್ನಾನೋತ್ಸವಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ. ಇದರಲ್ಲಿ ಮುಸ್ಲಿಮರೂ ಭಾಗವಹಿಸುವರು. ಇದಲ್ಲದೆ ಅವರ ಅನೇಕ ಕುಟುಂಬಗಳಲ್ಲಿ ಇಂದಿಗೂ "ವರಾಹ ಸಾಹೇಬ್" ಎಂದು ಹೆಸರಿಡುವ ವಾಡಿಕೆ ಇದೆ.

ಉತ್ತರ ಭಾರತದಲ್ಲಿ ಪ್ರಧಾನ ವರಹಾಕ್ಷೇತ್ರಗಳು ಕಾಣಸಿಗವುವು. ಮಧ್ಯಪ್ರದೇಶದ ಝಾನ್ಸಿಯಲ್ಲಿ ವರಾಹಮಂದಿರ, ಸಿಕಿಂದ್ರಾಬಾದ್‌ನಲ್ಲಿ ವರಹಾಲಯ ಉಜ್ಜಯಿನಿಯಲ್ಲಿ ಕಿರಿದಾದ ಸನ್ನಿಧಿ ಬಾದಾಮಿ ಅಜಂತ ಮುಂತಾದ ಗುಹಾಂತರ ದೇವಾಲಯಗಳಲ್ಲಿ ಸುಂದರ ವರಾಹ ಶಿಲ್ಪಕೃತಿಗಳನ್ನು ನೋಡಬಹುದು.

ಕರ್ನಾಟಕದಲ್ಲಿ ಮೈಸೂರು,ಬೆಂಗಳೂರು,ಮೇಲುಕೋಟೆಯಲ್ಲಿ ಪುಷ್ಕರಿಣಿ ಬಳಿ ವರಾಹಸನ್ನಿಧಿ ಇದೆ. ಕೃಷ್ಣರಾಜಪೇಟೆ ಬಳಿ ವರಾಹ ಕಲ್ಲಹಳ್ಳಿ ಇದೆ ಇವನನ್ನು ಲಕ್ಷ್ಮೀವರಾಹ, ಭೂವರಾಹ, ಯಜ್ಞವರಾಹ, ಆದಿವರಾಹ, ಎಲ್ಲ ವೇದಗಳ ಆಗರ, ಸರ್ವ ವಿದ್ಯೆಗಳನ್ನು ದಯಪಾಲಿಸುವ, ಆಶ್ರಿತ ಸಂರಕ್ಷಕ ಎಂದೆಲ್ಲ ದಾಸರು ಕೊಂಡಾಡಿದ್ದಾರೆ.





**ಪ್ರಪಂಚದ ಒಡೆಯ ಶ್ರೀನಿವಾಸನಿಗೆ ನಾವು ವಿವಿಧ ಉತ್ಸವಗಳನ್ನು ನವರಾತ್ರಿಯಲ್ಲಿ ಮಾಡಿ ಸಂಭ್ರಮಿಸುತ್ತೇವೆ. ದೇವರ ಮದುವೆಯನ್ನು ಮಾಡಿ ನಮಗೆ ಕಲ್ಯಾಣ ಮಾಡೆಂದು ಪ್ರಾರ್ಥನೆಯನ್ನು ಮಾಡಿ ಬೇಡಿಕೊಳ್ಳುತ್ತೇವೆ. ಇಂತಹ ಸುಂದರವಾದ ಉತ್ಸವದಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆಯ ಹೊತ್ತಿನಲ್ಲಿ 7 ದಿನ ವಿವಿಧ ವಾಹನಗಳ ಉತ್ಸವವನ್ನು ನಡೆಸುತ್ತಾರೆ. ಎಂಟನೇ ದಿನ ಬ್ರಹ್ಮ ರಥೋತ್ಸವ ಮತ್ತು ದಶಮಿಯ ದಿನ ಪಲ್ಲಕ್ಕಿ ಉತ್ಸವ ಮತ್ತು ಚಕ್ರ ಸ್ನಾನವನ್ನು ಮಾಡಿ ನವರಾತ್ರೋತ್ಸವ ಮಾಡುತ್ತಾರೆ.**

**ಪ್ರತಿಯೊಂದು ವಾಹನಕ್ಕೂ ಅದರದೇ ಆದ ಮಹತ್ವ ಇದೆ. ಶೇಷವಾಹನ, ಗರುಡವಾಹನ, ಸಿಂಹವಾಹನ, ಗಜವಾಹನ, ಅಶ್ವವಾಹನ, ಹಂಸವಾಹನ, ಮುತ್ತಿನ ಅಲಂಕಾರದ ವಾಹನ, ಕಲ್ಪವೃಕ್ಷವಾಹನ, ಸರ್ವಭೂಪಾಲವಾಹನ, ಮೋಹಿನ ಅವತಾರ, ಬಂಗಾರದ ರಥೋತ್ಸವ, ಹನುಮಂತವಾಹನ, ಪುಷ್ಪಕವಾಹನ, ಸೂರ್ಯಪ್ರಭವಾಹನ, ಚಂದ್ರಪ್ರಭವಾಹನ ಮಾಡುತ್ತಾರೆ.**

**ಎಲ್ಲ ವಾಹನಗಳದ್ದೂ ಅದರದೇ ಆದ ವಿಶೇಷತೆ ಇರುತ್ತದೆ. ಇಲ್ಲಿ ದೇವರಿಗೆ ಎಲ್ಲ ಜೀವವಿರುವ ಪ್ರಾಣಿ, ಪಕ್ಷಿ, ಮನುಷ್ಯರು ಮತ್ತು ದೇವತೆಗಳು ಎಲ್ಲರೂ ತಮ್ಮ ಸೇವೆ ಮಾಡುವುದನ್ನು ಗಮನಿಸಬಹುದು.**

# ತಿರುಮಲೆಯಲ್ಲಿ ಬ್ರಹ್ಮೋತ್ಸವದ ವಿವಿಧ ವಾಹನೋತ್ಸವಗಳು

# ಎಳೆಯಷ್ಟಮಿ

– ಶ್ರೀಮತಿ. ವೀಣಾ ರವಿಕುಮಾರ್
89510 96241

## ಜೇಷ್ಠಾದೇವಿ ಅಥವಾ ಎಳೆಯಷ್ಟಮಿ ಪೂಜೆ

ಭಾದ್ರಪದ ಶುದ್ಧ ಅಷ್ಟಮಿ-ನವಮಿಯಂದು ಎರಡು ದಿನ ಪೂಜೆ ಮಾಡುವರು ಮೂರನೆ ದಿನ ತಿಥಿ ಎಣಿಸದೆ ನಕ್ಷತ್ರಕ್ಕೆ ಮಹತ್ವ ಕೊಟ್ಟು, ಅಂದರೆ ಅನುರಾಧ ನಕ್ಷತ್ರದಲ್ಲಿ ಗೌರಿ ಕೂಡಿಸಿ ಜೇಷ್ಠ ನಕ್ಷತ್ರದಲ್ಲಿ ಪೂಜೆ ಮಾಡಿ ಮೂಲ ನಕ್ಷತ್ರದಲ್ಲಿ ಪೂಜೆ ಮಾಡಿ ದಾರಕಟ್ಟಿಕೊಳ್ಳುವರು, ಶ್ರಾವಣಮಾಸದಲ್ಲಿ ಕೂಡಿಸಿದ ಗೌರಿ (ಭೂದೇವಿ)ಯಂತೆ ಈ ಗೌರಿಯ ಕಳಶವನ್ನು ಅಲಂಕರಿಸಿ ಕಳಶದ ತೊಂಬಿಗೆಯಲ್ಲಿ ಐದು ಪುಟ್ಟ ಬಟ್ಟಲು ಗೋಧಿ, ಐದು ಬಾದಾಮಿ, ಐದು ಗೋಡಂಬಿ, ಐದು ಒಣದ್ರಾಕ್ಷಿ ಐದು ಉತ್ತತ್ತಿ (ಖರ್ಜೂರ)ಐದು ಕಲ್ಲು ಸಕ್ಕರೆ, ಐದು ಅರಿಶಿನ ಬೇರು, ಐದು ಬಟ್ಟಲು ಅಡಿಕೆ, ಬಳೆ ಬಿಚ್ಚೋಲೆ ದಕ್ಷಿಣೆ ಹಾಕಿ ಒಂದು ವೀಳ್ಯ ದೆಲೆಯಲ್ಲಿ ನೆನೆಸಿದ 16 ಎಳೆಯ 2 ದಾರ ಮತ್ತು 8 ಎಳೆಯ ದೊಂದು 5 ಎಳೆಯದು ಒಂದು ಹೀಗೆ ಎಲ್ಲಾ ಎಳೆಯ ದಾರಕ್ಕೆ ಅರಿಶಿನ ಕುಂಕುಮ, ಹಚ್ಚಿ ಅದನ್ನು ವೀಳ್ಯದೆಲೆಯಲ್ಲಿ ಹಾಕಿ ಮಡಿಚಿ ಇಡಬೇಕು.ಇದನ್ನೆಲ್ಲ ಹಾಕಿ ಕಳಶಕ್ಕೆ ದೇವರ ಮನೆ ಯಲ್ಲಿಟ್ಟು ಸಂಕಲ್ಪ ಮಾಡಿ ಗೌರಿಗೆ ಅಲಂಕಾರ ಮಾಡಿ ಅಂದರೆ ಅರಿಶಿನ, ಕುಂಕುಮ, ಮಂತ್ರಾಕ್ಷತೆ, ಗೆಜ್ಜೆವಸ್ತ್ರದಿಂದ ಪೂಜಿಸಿ ಲಕ್ಷ್ಮಿ ಅಥವಾ ಗೌರಿಗೆ ಪ್ರಿಯವಾದ ಜಾಜಿ, ಮಲ್ಲಿಗೆ, ಪಾರಿಜಾತ, ಕಮಲ, ಸಂಪಿಗೆ, ಕಮಲದ ಹಾರ, ಮರ್ಗ-ಧವನ ಪತ್ರೆ ಪುಷ್ಪ ಗಳಿಂದ ಪೂಜಿಸಿ ಭಕ್ಷ್ಯಗಳು- ಹಣ್ಣುಗಳನ್ನಿಟ್ಟು ನೈವೇದ್ಯ ಮೂರು ದಿನವು ಮಾಡಿ ನಂತರ ಮೂರನೆ ದಿನ ಪುನಃ ಪೂಜೆ ಮಾಡಿ ಅಮೃತಘಳಿಗೆ ನೋಡಿ ಮೂಲ ನಕ್ಷತ್ರದಲ್ಲಿ ಕಳಶ ಕದಲಿಸಿ ಅದರಲ್ಲಿರುವ ದಾರವನ್ನು ತೆಗೆದು ಅದಕ್ಕೆ ರೇಷ್ಮೇ ವಸ್ತ್ರ, ಕಂಬಳಿ ದಾರ, ಗೆಜ್ಜೆವಸ್ತ್ರ (ಗೌರಿಗೆ ಏರಿಸಿದ್ದು), ನಿರ್ಮಾಲ್ಯದ ಹೂ ಎಲ್ಲ ವನ್ನು ಸೇರಿಸಿ ಹೂ ಕಟ್ಟಿದಂತೆ ದಾರಕ್ಕೆ (ಶಂಕರಗಂಡನ ಹಾಡು ಐದು ಶುಕ್ರವಾರದ ಹಾಡು, ಸಂಪತ್ತು ಶನಿವಾರದ ಹಾಡು ಹೇಳುತ್ತ) ಪೋಣಿಸಿ ಸ್ತ್ರೀಯರು 16 ಎಳೆಯದಾರ, ಪುರುಷರು 8 ಎಳೆಯದಾರ, ಮಕ್ಕಳಿಗೆ 5 ಎಳೆಯ ದಾರ ಮನೆಯವರೆಲ್ಲ ಧರಿಸಿ ಬ್ರಾಹ್ಮಣ ಮುತ್ತೈದೆಯರಿಗೂ ನೀಡಬೇಕು.

## ಇದರ ಹಿಂದಿನ ಇತಿಹಾಸ:

ಶಂಕರ ಗಂಡ ಎಂಬ ಹೆಸರಿನವನಿಗೆ ರತಿಯೆಂಬ ಹೆಸರಿನ ತಂಗಿ ಇದ್ದಳು ಅವಳಿಗೆ ವಿವಾಹ ಮಾಡಲು ನಿಶ್ಚಯಿಸಿ ಮನ್ಮಥ ನೆಂಬ ವರನಿಗೆ ಕೊಟ್ಟು ವಿವಾಹ ಮಾಡಿದನು. ತಂಗಿಯನ್ನು ಗಂಡನ ಮನೆಗೆ ಕಳುಹಿಸುವಾಗ ಜೇಷ್ಠಾದೇವಿಯ ಹಬ್ಬಕ್ಕೆ ತಪ್ಪದೆ ತಂಗಿಯನ್ನು ಕಳುಹಿಸಬೇಕಾಗಿ ಕರಾರು ಹಾಕಿ ಕಳುಹಿಸುವನು. ಸ್ವಲ್ಪ ದಿನಗಳ ನಂತರ ಶಂಕರನು ತಂಗಿಯ ಮನೆಗೆ ಹೋಗಿ ಹಬ್ಬಕ್ಕೆ ಕಳುಹಿಸಬೇಕಾಗಿ ಮನ್ಮಥನ ಬಳಿ ಕೇಳಿದಾಗ ಅವಳಿಗೆ ಜೋಳದ ಆಹಾರ ತಿನ್ನುವ ಅಭ್ಯಾಸ ಹೋಗಿದೆ ಅವಳನ್ನು ಕಳು ಹಿಸಲು ಸಾಧ್ಯವಿಲ್ಲ ಎಂದು ನಿರಾಕರಿಸುತ್ತಾರೆ. ಇದರಿಂದ ಬೇಸತ್ತ ಅಣ್ಣ,ತಂಗಿ ಬಾರದೆ ಇರುವ ಹಬ್ಬವನ್ನು ಆಚರಿಸುವನು, ಪ್ರಸಾದ ನಿರಾಕರಿಸಿದ ಮನ್ಮಥ ಎಲ್ಲವನ್ನೂ ಕಳೆದುಕೊಂಡು ಅತ್ಯಂತ ದರಿದ್ರನಾಗುತ್ತಾನೆ. ಊರೂರು ಭಾಷೆ ಬೇಡುತ್ತಾ ಶಂಕರ ಗಂಡನ ಮನೆಗೆ ಬಂದು ಅವನಿಗೆ ಗೊತ್ತಾಗದಂತೆ ಅವರ ಮನೆಗೆ ದನ ಕಾಯುವ ಕೆಲಸಕ್ಕೆ ಸೇರುತ್ತಾರೆ. ಸ್ವಲ್ಪ ದಿನಗಳ ನಂತರ ಹುಲ್ಲು ಕೊಯ್ಯುವಾಗ ಮನ್ಮಥನಿಗೆ ಕೈ ಗಾಯ ವಾಗಿ ರಕ್ತ ಬರುತ್ತದೆ ಇದರಿಂದ ಬೇಸತ್ತ ರತಿ ಅಣ್ಣನ ಬಳಿ ನಡೆದ ಸಂಗತಿ ಎಲ್ಲಾ ಹೇಳಿದಳು ಇದರಿಂದ ಬೇಸರಿಸಿದ ಶಂಕರಗಂಡ ತಂಗಿ ಮತ್ತು ಅವಳ ಗಂಡನನ್ನು ಪ್ರೀತಿಯಿಂದ ಆದರಿಸಿ ಅವರ ಕೈಯಲ್ಲಿ ಜೇಷ್ಠಾದೇವಿಯ ಪೂಜೆಯನ್ನು ವಿಜೃಂಭಣೆ ಯಿಂದ ನೆರವೇರಿಸಿದರು. ಜೋಳದಿಂದ ಮಾಡಿದ ಆಹಾರವನ್ನು ಸ್ವೀಕರಿಸಿದರು. ನಂತರದ ದಿನಗಳಲ್ಲಿ ಮನ್ಮಥನ ಶ್ರೀಮಂತಿಕೆ ನಿಧಾನ ಗತಿಯಲ್ಲಿ ಮರುಕಳಿಸಿತು. ಅಂದಿನಿಂದ ಜೇಷ್ಠಾದೇವಿಯ ಪೂಜೆಯ ಶ್ರೇಷ್ಠತೆ ತಿಳಿದವರು ವಿಜೃಂಭಣೆಯಿಂದ ಮಾಡುವರು.

ಇನ್ನೊಂದೂ ಕಥೆಯ ಪ್ರಕಾರ ಒಂದು ಸಲ ದೇವಾಸುರ ಯುದ್ಧ ಸಂಭ ವಿಸಿತು. ವೃತ್ರಾಸುರನು ಅಸುರರ ನಾಯಕನಾಗಿದ್ದನು ಆಗ ದೇವೇಂದ್ರನು ನಾರಾ ಯಣನ ಅನುಗ್ರಹದಿಂದ ಅಸುರನನ್ನು ಸೋಲಿಸಿ ಜಯಶಾಲಿಯಾದನು. ಆಗ ಅಸುರರು ಕೆಲವರು ಪಾತಾಳದಲ್ಲಿ ಅಡಗಿ ಕೆಲವರು ಲಂಕೆಗೆ ಹೋದರು. ಕೋಲ ಎಂಬ ರಾಕ್ಷಸನು ಗೋಮಾಂತಕ ಅಂದರೆ ಈಗಿನ ಗೋವಾದಲ್ಲಿನ ದುರ್ಗದಲ್ಲಿ ಅಡಗಿ ಕುಳಿತನು. ನಿರ್ಭಯನಾಗಿ ಸುಂದರವಾಗಿರುವ ರಾಜಕುಮಾರಿಯರನ್ನು ಹಿಡಿಯುವುದು ಅವರನ್ನು ರಮಿಸುವುದನ್ನು ಆರಂಭಿಸಿದನು. ಆ ಸಮಯದಲ್ಲಿ ಪುಲಸ್ತ್ಯ ಹಾಗೂ ಗೌತಮ ಋಷಿಗಳು ಗೋಮಾಂತಕಕ್ಕೆ ಬಂದಿದ್ದರು. ಅಲ್ಲಿ ಜನರಿಂದ ಕೋಲಾಸುರ ಕೋಲಾಹಲವನ್ನು ಹೇಳಿಕೊಂಡರು.ಆಗ ಅಗಸ್ತ್ಯರು ಶ್ರೀಮನ್ನಾ ರಾಯಣ ಹಾಗೂ ಲಕ್ಷ್ಮಿದೇವಿಯಲ್ಲಿ ಮೊರೆ ಹೋದರು.

ಲಕ್ಷ್ಮಿದೇವಿಯು ಕೋಲಾಸುರನನ್ನು ಸಂಹರಿಸುವುದಾಗಿ ಹೇಳಿದಳು ಕೋಲಾಸುರನು ಚತುರ್ಭುಜ ಸೈನ್ಯ ಬಲದೊಂದಿಗೆ ಯುದ್ಧಕ್ಕೆ ಬಂದನು. ಲಕ್ಷ್ಮಿ ದೇವಿಯು ಕೋಲಾಸುರನನ್ನು ಸಂಹರಿಸಿದಳು. ಕೋಲನು ಬಂಧಿಸಿಟ್ಟ ರಾಜ ಕುಮಾರಿಯರೆಲ್ಲರನ್ನೂ ಬಂಧಮುಕ್ತಗೊಳಿಸಿ ಯೋಗಿನಿಯರಾಗುವಂತೆ ಆಶೀರ್ವ ದಿಸಿದಳು. ಇದು ಕೂಡ ಇನ್ನು ಕೆಲವರು ಜೇಷ್ಠಾಲಕ್ಷ್ಮಿಯ ಕುರಿತು ಹೇಳುವ ಕಥೆ ಯಾಗಿದೆ.

ಜೇಷ್ಠಾದೇವಿಗೆ ಪೂಜೆ ಮಾಡಿ ಧರಿಸಿದ ದೋರವನ್ನು ನವಮಿ ಅಥವಾ ದಶಮಿಯ ದಿನದಂದು ಧರಿಸುತ್ತಾರೆ ಮುಂದೆ ಆಶ್ವಯುಜ ಶುದ್ಧ ನವಮಿ ಅಥವಾ ಹುಣ್ಣಿಮೆಯ ದಿನ ಅದನ್ನು ವಿಸರ್ಜಿಸುತ್ತಾರೆ. ಮಹಾನವಮಿಯ ದಿನ ದೋರ ವಿಸರ್ಜನೆ ಮಾಡಿದರೆ ಪುತ್ರ ಪೌತ್ರಾದಿಗಳ ಸುಖವನ್ನು ಪಡೆಯುವವರು ಶೀಗಿ ಹುಣ್ಣಿಮೆಯ ದಿನ ದಾರ ಧರಿಸಿದರೆ ಸಿರಿವಂತರೂ ಆಗುತ್ತಾರೆ ಎಂಬ ನಂಬಿಕೆ ಇದೆ. ದೋರಕ್ಕೆ ಅಪಮಾನ ಮಾಡಿದವರು, ಧನಹೀನರು, ಸಂಕಷ್ಟಕ್ಕೆ ಸಿಲುಕುವವರಾಗು ತ್ತಾರೆ ಎಂಬ ಪ್ರತೀತಿಯು ಇದೆ.



# ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ

## ಸರ್ವಪ್ರತೀಕ ಸಂಧಿ

**ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ**
**80504 36752**



"ಸರ್ವ ಪ್ರತೀಕ ಸಂಧಿಯಲ್ಲಿ ಸರ್ವವ್ಯಾಪ್ತನಾದ ಹರಿಯನ್ನು ಸ್ಮರಿಸಿ ಪಾಪಗಳು ಹರಿದು ಹೋಗಲು ಸರ್ವವನ್ನು ಸಮರ್ಪಿಸುವುದೇ ಸರ್ವಪ್ರತೀಕ.ಇದಕ್ಕೆ ಇನ್ನೊಂದು ಹೆಸರು ಸರ್ವ ಸಮರ್ಪಣಾ ಸಂಧಿ ಎನ್ನುವರು.

ಹರಿಕಥಾಮೃತಸಾರ ಗುರುಗಳ ಕರುಣಾದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥

ಈ ಪಲ್ಲವಿಯನ್ನು ಪ್ರತಿ ಸಂಧಿಯ ಪ್ರಾರಂಭದಲ್ಲಿ ಹೇಳಿದ್ದಾರೆ.

ಆವ ಪರಬೊಮ್ಮನತಿ ವಿಮಲಾಂ ಗಾವ
ಬದ್ಧರುಯೆಂದೆನಿಪ ರಾ ಜೀವ ಭವ
ಮೊದಲಾದಮರರನು ದಿನದಿ ಹರಿಪದವ।
ಸೇವಿಪರಿಗನುಕೂಲರಲ್ಲದೆ ತಾವು ಇವರನ ಕೆಡಿಸಬಲ್ಲರೆ
ಶ್ರೀವಿಲಾಸಾಸ್ಪದನ ದಾಸರಿಗುಂಟೆ ಅಪಜಯವು ॥1॥

ಬ್ರಹ್ಮಾದಿದೇವತೆಗಳೆಲ್ಲ ಹರಿಯಲ್ಲಿ ಆಶ್ರಯ ಪಡೆದವರು ಹಾಗೆ ಹರಿಪಾಡಸೇವಿಸುವರಿಗೆ ಯಾವಾಗಲೂ ಕಾಪಾಡುತ್ತಿರುತ್ತಾನೆ. ಏಕಾದಶ ಇಂದ್ರಿಯಗಳಿಂದ ಸರ್ವ ಸಮರ್ಪಣೆ ಮಾಡಿದ ಹರಿಭಕ್ತನಿಗೆ ನವಗ್ರಹ ಅಭಿಮಾನಿ ದೇವತೆಗಳು ಭಗವಂತನ ಆಜ್ಞೆಯಂತೆ ಆದಿವ್ಯಾಧಿಗಳನ್ನು ಪರಿಹರಿಸುತ್ತಿರುತ್ತಾರೆ. ಭೂಮಿಯ ಮೇಲೆ ಗೋ ನಿಂತಾಗ ಅಥವಾ ಓಡಾಡಿದಾಗ ಬೀಳುವ ತೆಗ್ಗಿನಲ್ಲಿ ಮಳೆ ನೀರು ನಿಂತಿದ್ದರೆ ಅದು ತೀರ್ಥವೆನಿಸುವುದು ಹಾಗೂ ಭೂಮಿಯ ಮೇಲಿನ ಗಿಡ ಶಿಖರ ಪರ್ವತಗಳೇ ಎಲ್ಲವೂ ಹರಿಯ ಪ್ರತಿಮೆಗಳು ಎಂದು ತಿಳಿಯಬೇಕು. ಹರಿಯ ಭಕ್ತರು, ಜ್ಞಾನಿಗಳು ಸೇವಿಸುವ ಪದಾರ್ಥವೇ ನೈವೇದ್ಯ, ಮತ್ತು ನಡೆದಾಡುವುದೇ ಪ್ರದಕ್ಷಿಣೆ ನರ್ತನ ಎನಿಸುತ್ತದೆ.

ಸತತ ಹರಿಯ ಸೇವಿಸುವವರಿಗೆ ಸರ್ವಕಾಲವು ಪರ್ವಕಾಲಗಳು, ಸಮಸ್ತ ದೇಶವು ದೇಗುಲದಂತೆ ಕಾಣುವುದು. ಸಕಲರೂ ಶ್ರೇಷ್ಠ ಎನಿಸುವರು. ಅವರು ಆಡಿದ ಮಾತುಗಳು ಮಂತ್ರ, ಅವರು ಮಾಡುವ ಪ್ರತಿ ಕಾರ್ಯ ದೇವರ ಪೂಜೆಯಾಗಿರುತ್ತದೆ.

ದೇವಖಾತ ತಟಾಕ ವಾಪಿ ಸರೋವರಗಳಭಿಮಾನಿ ಸುರರು
ಕಳೇವರದೊಳಿಹ ರೋಮಕೂಪಗಳೊಳಗೆ ತುಂಬಿಹರು।
ಆವಿಯದ್ಗಂಗಾನದಿಗಳು ಭಾವಿಸುವುದೆಪ್ಪತ್ತೆರಡೆ ನಿಪ
ಸಾವಿರ ಸುನಾಡಿಗಳೊಳಗೆ ಪ್ರವಹಿಸುತಲಿಹವೆಂದು ॥೫॥

ಜ್ಞಾನಿಗಳ ದೇಹವು ಪಾವಿತ್ರ್ಯತೆ ಹೊಂದಿರುತ್ತದೆ. ಅವರ ಒಂದೊಂದು ರೂಮಗಳಲ್ಲಿಯೂ ದೇವರು ಕೆರೆ, ಸರೋವರ, ಬಾವಿ ಇವೆ. ಅದರಲ್ಲಿ ಅಭಿಮಾನಿ ದೇವತೆಗಳು ಇರುತ್ತಾರೆ. ಅವರ ದೇಹದ 72 ಸಾವಿರ ನಾಡಿಗಳಲ್ಲಿ ಗಂಗಾದಿ ಅಭಿಮಾನಿ ದೇವತೆಗಳು ಇರುತ್ತಾರೆ. ಜ್ಞಾನಿಗಳು ಯಾವಾಗಲೂ ಅಣು ತೃಣಾದಿಗಳಲ್ಲಿ ಭಗವಂತನನ್ನು ಕಾಣುತ್ತಾರೆ. ಶಾಸ್ತ್ರಗಳ ನಿಯಮ, ವಿಧಿ ವಿಧಾನ ಅನುಸರಿಸುತ್ತಾ, ಭಗವಂತನ ಸಾಕ್ಷಾತ್ಕಾರವಾಗಿರುತ್ತದೆ. ಎಲ್ಲ ನದಿಗಳು ಸಮುದ್ರ ಸೇರುವ ಹಾಗೇ ನಾವುಗಳು ಅವರಲ್ಲಿ ಎಲ್ಲ ಸನ್ನಿಧಾನ ಇರುವುದರಿಂದ ಅವರನ್ನು ಆಶ್ರಯಿಸಬೇಕು.

ಕಲಿಯ ಸಹಿತವಾಗಿ ತತ್ವಾಭಿಮಾನಿ ದೇವತೆಗಳು, ಬ್ರಹ್ಮರುದ್ರಾದಿ ದೇವತೆಗಳು ಹರಿ ಆಜ್ಞೆಯಂತೆ ಎಲ್ಲರಲ್ಲಿಯೂ ನಿಯಾಮಕರಾಗಿ ನಿಂತು ಅವರವರ ಯೋಗ್ಯತಾನುಸಾರವಾಗಿ ಕೆಟ್ಟ ಕೆಲಸಗಳು ಮಾಡಿಸಿದರು ಹರಿ ಆಜ್ಞೆಯಂತೆ ನಿಯಾಮಕರಾದ ತತ್ವಾಭಿಮಾನಿ ದೇವತೆಗಳಿಗೆ ಪಾಪ ಲೇಪವಿಲ್ಲ ಎಂದಿದ್ದಾರೆ. ಇನ್ನು ಅಹಂಕಾರದಿಂದ ಮಾಡಿದ ಯಾವ ಪೂಜೆ, ಕರ್ಮ, ತೀರ್ಥ ಕ್ಷೇತ್ರ, ಯಾತ್ರಾ, ದಾನ, ಮಂತ್ರ, ಸ್ತೋತ್ರ ಎಲ್ಲವೂ ವ್ಯರ್ಥ.

ಆಂತರಿಕ ಹರಿಯ ಪಾದ ಭಕ್ತಿಯ ದೀಕ್ಷೆ ಇಲ್ಲದೇ ಬಾಹ್ಯ ವೇಷ, ಸಾಧನೆ ಮಾಡಿದರೆ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ.

ವೇದ ಶಾಸ್ತ್ರ ಪುರಾಣ ಕಥೆಗಳ ಓದಿ ಪೇಳಿದರೇನು
ಸಕಲ ನಿಷೇಧ ಕರ್ಮಗಳ ತೊರೆದು ಸತ್ಕರ್ಮಗಳ ಮಾಡೇನು॥
ಓದನಗಳನು ಜರಿದು ಶ್ವಾಸ ನಿರೋಧಗೈಸಿದರೇನು
ಕಾಮಕ್ರೋಧವ ಅಳಿಯದೆ ನಾನು ನನ್ನದೆಂಬ ಮಾನವನು ॥16

ನಾಲ್ಕು ವೇದಗಳನ್ನು ಆರು ಶಾಸ್ತ್ರಗಳನ್ನು ಹದಿನೆಂಟು ಪುರಾಣಗಳನ್ನು ಅಧ್ಯಯನ ಮಾಡಿ ಡಂಭಾಚಾರದಲ್ಲಿ ತೋರಿಕೆಗಾಗಿ ದಂಡ ಕಮಂಡಲ ಧಾರಿಯೆನಿಸಿ, ಆಹಾರ ತ್ಯಜಿಸಿ ಉಪವಾಸಾದಿಗಳು ಮಾಡಿ, ಶ್ವಾಸ ಹಿಡಿದು ತಪಸ್ಸು ಮಾಡಿ ಮನಸ್ಸಿನಲ್ಲಿ ಕಾಮಕ್ರೋಧ ಅಳಿಯದೇ ನನ್ನ ಸಮನಾರೆಂದು ಅಹಂಕಾರ ಪಟ್ಟರೆ ಜ್ಞಾನಿಯಾಗಿಯೂ ಯಾವ ಫಲ ದೊರೆಯುವುದಿಲ್ಲ.

ಭಗವಂತನ ಅವತಾರಗಳನ್ನು ಸ್ಮರಿಸಿದವ ಈ ಜನ್ಮಕ್ಕೆ ವ್ಯರ್ಥ, ಮಾಡಿದ ಕೆಲಸಗಳು ಅಪ್ರಯೋಜಕವಾಗುತ್ತದೆ. ವಿಷಯಾ ಶಕ್ತಿಗಳಲ್ಲಿ ಮುಳುಗಿ ಅಷ್ಟಮದಗಳಲ್ಲಿ ಇದ್ದು ಹರಿಯನ್ನು ಮರೆತು ಭೋಗಿಸುವವರಿಗೆ ಈ ಹರಿಕಥಾಮೃತಸಾರ ತಿಳಿಯುವುದಿಲ್ಲ ಮತ್ತು ಭಕ್ತಿ ಜೊತೆಗೆ ಅದರ ಆಸ್ವಾದನೆ ಮಾಡಿ ಭಕ್ತ ಭಕ್ತಿರಸ ಉಣ್ಣಬೇಕು.

ಅಹಂಕಾರ ಜನರಿಗೆ, ಚಾಡಿಕೊರರಿಗೆ ನಿಷ್ಠುರ ಮಾತಾಡುವವರು ಮೂಢರಿಗೆ, ಢಾಂಭಿಕಾರಿಗೆ ಇಂತಹವರಿಗೆ ಶ್ರವಣ ಮಾಡಲು ಅನರ್ಹರರು. ಹರಿಕಥೆಯನ್ನು ಬ್ರಾಹ್ಮಣರು, ಜ್ಞಾನಿಗಳಿಂದ ಕೇಳಬೇಕು. ಭಗವಂತ ದಶಾವತಾರಿ. ಒಂದೊಂದು ಅವತಾರವು ಲೋಕ ಕಲ್ಯಾಣಕ್ಕಾಗಿ ಶಿಷ್ಟರ ರಕ್ಷಣೆ ದುಷ್ಟರ ಶಿಕ್ಷಿಸಲು ಅವತರಿಸಿದ್ದಾನೆ. ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ ಹೀಗೆ ಸರ್ವೋತ್ತಮನಾದ ದಶಾವತಾರಿಯಾದ ಭಗವಂತನನ್ನು ಜೇನನ್ನು ದುಂಬಿ ಸದಾ ಸವಿಯುವ ಹಾಗೇ ನಾವು ಉಪಾಸನೆ ಮಾಡಬೇಕು.

ಸಚ್ಚಿದಾನಂದಾತ್ಮ ಬ್ರಹ್ಮಕ ರಾರ್ಚಿತಾಂಘ್ರಿ ಸರೋಜ
ಸುಮನಸ ಪ್ರೋಚ್ಚ ಸನ್ಮಂಗಳದ ಮಧ್ವಾಂತಃಕರಣರೂಢ।
ಅಚ್ಯುತ ಜಗನ್ನಾಥ ವಿಠಲ ನಿಚ್ಚ ಮೆಚ್ಚಿದ ಜನರ ಬಿಡ
ಕಾಳ್ಗಿಚ್ಚನುಂಡಾರಣ್ಯದೊಳು ಗೋ ಗೋಪರನು ಕಾಯ್ದ॥ 25॥

ಭಗವಂತನ ವಿಶೇಷತೆಯನ್ನು ಹೇಳಿದ್ದಾರೆ. ಜ್ಞಾನಾನಂದ ಸ್ವರೂಪಿ, ಬ್ರಹ್ಮಾದೇವತೆಗಳಿಂದ ಪೂಜಿತನಾದ ಒಡೆಯನಾದ, ಶ್ರೇಷ್ಠ ಮಂಗಳ ನೀಡುವ, ಮಧ್ವರ ಹೃದಯವಾಸಿಯಾದ ನಾಶ ರಹಿತನಾದ ಭಕ್ತರನ್ನು ತಾಯಿಯಂತೆ ರಕ್ಷಿಸುವ ಹೀಗೆ ಎಲ್ಲರನ್ನು ಸತತ ಸಂತೈಸುವ ನಮ್ಮ ಜಗದ ಜಗನ್ನಾಥವಿಠ್ಠಲ ಎಂದು ಹೇಳಿರುವರು. ಕೊನೆಗೆ ಒಂದೇ ಮತ್ತು ಎಲ್ಲವೂ ನಿಮಿತ್ಯ ಅವನು ಸತ್ಯ. ಇನ್ನು ಮುಂದಿನ ಸಂಚಿಕೆಯಲ್ಲಿ ಭಗವಂತನ ಕುರಿತು ಹೀಗೆ ಧ್ಯಾನ ಮಾಡಬೇಕು. ಹಾಗೂ ಮಹಿಮೆ ಬಗ್ಗೆ ತಿಳಿಸುವ ಧ್ಯಾನಪ್ರಕರಣ ಸಂಧಿ ನೋಡೋಣ.



## ಧ್ವಜಾರೋಹಣ

ಇಂದು ಧ್ವಜಾರೋಹಣವೆಂದು ತಿಳಿದು ವನಜ
ನಂದನ ಇಂದುಶೇಖರ ನಿರ್ಝರ
ಸಂದೋಹ ಸನಕಸನಂದನ ಮುನಿ ನಾ
ರದ ತುಂಬುರ ಗಂಧರ್ವ ಸೊಬಗತಿ
ಛಂದದಿಂದ ಲೊಪ್ಪುವ ಅಂದವಾದ ನಾರೇರು
ವಂದಿಮಾಗಧರು ಸಂದೇಹವಿಲ್ಲದೆ
ನಿಂದೆಡ ಬಲದಲ್ಲಿ ಒಂದೆ ದೈವವೆಂದು
ವಂದಿಸಿ ತಮ ತಮಗಂದವಾಗಿ ಪೊಗಳೆ
ಚಂದಿರವದನ ತಿರುಮಲ ವಿಜಯವಿಠಲನ
ತಂದೆಯಂದದಲಿ ನೆನಿಯೆ ಅಂದದ ವರವನೀವ

- ವಿಜಯದಾಸರು

# ಆಂಜನೇಯನ ಮಾತೆ ಅಂಜನಾದೇವಿ

- ಹನುಮಂತ ಮ. ದೇಶಕುಲಕರ್ಣಿ
94803 64915




ಸ್ವರ್ಗಲೋಕದ ಅಪ್ಸರೆಯಾಗಿದ್ದ ಪುಂಜಿಕಸ್ಥಲೆಗೆ ಅಹಂಕಾರ ವಿಪರೀತವಿತ್ತು. ಸಾಧುವೊಬ್ಬರನ್ನು ಪುಂಜಿಕಸ್ಥಲೆಯು ಅಪಮಾನಿಸಿದ್ದಕ್ಕಾಗಿ ಶಾಪಕ್ಕೊಳಗಾಗುತ್ತಾಳೆ. ಕಾಲುಗಳನ್ನು ಮಡಚಿಕೊಂಡು ತಪಸ್ಸು ಮಾಡುತ್ತಿದ್ದ ವಾನರನೋರ್ವನನ್ನು ಕಾಣುತ್ತಾಳೆ. ತಪಸ್ಸನ್ನಾಚರಿಸುತ್ತಿದ್ದ ವಾನರನನ್ನು ಕಂಡಾಗ ಪುಂಜಿಕಸ್ಥಲೆಯಲ್ಲಿ ಕುಚೋದ್ಯದಿಂದ ವಾನರನತ್ತ ಹಣ್ಣುಗಳನ್ನು ಎಸೆಯಲಾರಂಭಿಸುತ್ತಾಳೆ.

ತಿಳಿಯದ ಅಪರಾಧಕೃತ್ಯದಿಂದ ತಪೋಭಂಗಕ್ಕೀಡಾದ ವಾನರನು ಒಡನೆಯೇ ಮುನಿಯೋರ್ವರ ರೂಪವನ್ನು ಪಡೆದುಕೊಂಡು ಕೋಪೋದ್ರಿಕ್ತರಾಗಿ ಪುಂಜಿಕಸ್ಥಲೆಯ ಪ್ರೇಮಪಾಶದಲ್ಲಿ ಸಿಲುಕಿದಾಗ ಕಪಿಯಾಗಿ ಮಾರ್ಪಾಡುವಂತಾಗಬೇಕೆಂದು ಶಪಿಸುತ್ತಾರೆ. ತಪ್ಪಿನರಿವಾಗಿ ಕ್ಷಮಿಸುವಂತೆ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಪುಂಜಿಕಸ್ಥಲೆಯು ಭವಿಷ್ಯದಲ್ಲಿ ಅಂಜನೆಯಾಗಿ ವಾನರಮುಖವನ್ನು ಹೊಂದುವಂತಾದರೂ ಯಾರೊಂದಿಗೆ ಅನುರಕ್ತಳಾಗುತ್ತಾಳೆಯೋ ಆತನೂ ಆಕೆಯ ಕಪಿಮೋರೆಯನ್ನು ಲೆಕ್ಕಿಸದೇ ಆಕೆಯನ್ನು ಪ್ರೀತಿಸಿ ಶಿವಸ್ವರೂಪಿ ಮಗುವಿಗೆ ಜನ್ಮವಿತ್ತಾಗ ಶಾಪ ವಿಮೋಚನೆಗೊಳ್ಳುವಂತಾಗುತ್ತದೆ ಎಂದು ಸಂತೈಸುತ್ತಾರೆ. ಶಾಪ ವಿಮೋಚನೆಗಾಗಿ ಭೂಲೋಕಕ್ಕೆ ಬರುತ್ತಾಳೆ.

ಅರಣ್ಯವೊಂದರಲ್ಲಿ ತಪಸ್ಸಿನಲ್ಲಿದ್ದಾಗ ಒಂದು ದಿನ ಆಕೆಯು ವ್ಯಕ್ತಿಯನ್ನು ಕಂಡು ಆತನಲ್ಲಿ ಅನುರಕ್ತಳಾದ ಕೂಡಲೇ ಆಕೆ ಮುಖವು ವಾನರ ರೂಪಕ್ಕೆ ತಿರುಗುತ್ತದೆ. ಆತನು, ತಾನು ವಾನರರಾಜನಾದ 'ಕೇಸರಿ'ಯೆಂದು ಪರಿಚಯಿಸಿಕೊಳ್ಳುತ್ತಾನೆ. ಕಪಿಮುಖದ ಮನುಷ್ಯವಾಗಿದ್ದರೂ ಮನುಷ್ಯ - ವಾನರನಾಗಿ ರೂಪಾಂತರವಾಗುವ ಸಾಮರ್ಥ್ಯವಿರುವುದನ್ನು ನೋಡಿ ಚಕಿತಳಾಗುತ್ತಾಳೆ. ಅಂಜನಾದೇವಿ-ಕೇಸರಿ ಪ್ರಣಯವು ಅರಣ್ಯದಲ್ಲಿಯೇ ನಡೆದು ಹೋಗುತ್ತದೆ. ಉಗ್ರತಪಸ್ಸನ್ನಾಚರಿಸುತ್ತಾ ಶಿವನನ್ನು ಆರಾಧಿಸುತ್ತ ಗಾಳಿಯನ್ನೇ ಸೇವಿಸಿ ತಪಸ್ಸುಗೈಯುತ್ತಿದ್ದಾಗ, ಕೇಸರಿಯು ದಿನಾಲು ಸೇಬುವೊಂದನ್ನು ತಂದುಕೊಡುತ್ತಿದ್ದ. ಪ್ರತ್ಯಕ್ಷನಾದ ಶಿವನಿಗೆ ಮುನಿ ಶಾಪದಿಂದ ವಿಮೋಚನೆಗೊಳ್ಳುವಂತಾಗಲು ಪುತ್ರನಾಗಿ ಜನಿಸಬೇಕೆಂದು ಪ್ರಾರ್ಥಿಸಿಕೊಂಡಾಗ ಶಿವನು ಮನ್ನಿಸುತ್ತಾನೆ.

ದಶರಥನು ಸಂತಾನಪ್ರಾಪ್ತಿಗಾಗಿ ಪುತ್ರಕಾಮೇಷ್ಟಿಯಾಗವನ್ನು ಕೈಗೊಂಡಾಗ, ಸಂಪ್ರೀತನಾದ ಅಗ್ನಿದೇವನು ಪ್ರಸಾದ ರೂಪದಲ್ಲಿ ಪವಿತ್ರ ಪಾಯಸವನ್ನು ನೀಡಿ ಮಡದಿಯರಿಗೆ ಹಂಚುವಂತೆ ತಿಳಿಸುತ್ತಾನೆ. ಕೌಸಲ್ಯಾದೇವಿಗೆ ನೀಡಿದ ಪಾಯಸದ ಭಾಗವೊಂದು ಗಾಳಿಪಟವೊಂದು ಒಯ್ದು ಅಂಜನಾದೇವಿಯ ಸ್ಥಳದಲ್ಲಿಯೇ ಪಾಯಸವನ್ನು ಉದುರಿಸುತ್ತದೆ. ಶಿವನು ಅಂಜನಾದೇವಿಯ ಬೊಗಸೆಯಲ್ಲಿ ಹಾಕುವಂತೆ ವಾಯುದೇವನಿಗೆ ಆಜ್ಞಾಪಿಸಿದಾಗ,ಅಂಜನಾದೇವಿಯು ಸ್ವೀಕರಿಸಿದಾಗ ಶಿವನ ಅನುಗ್ರಹದನುಭವವಾಗುತ್ತದೆ ಅಂಜನಾದೇವಿ ಆಂಜನೇಯನಿಗೆ ಜನ್ಮವನ್ನೀಯುತ್ತಾಳೆ.

ಶಿವ ಪುರಾಣದ ಪ್ರಕಾರ, ದೇವ-ದಾನವರಿಗೆ ಅಮೃತವನ್ನು ಹಂಚುವಾಗ ವಿಷ್ಣುವು ಧರಿಸಿದ್ದ ಮೋಹಿನಿರೂಪವನ್ನು ನೋಡಿ ಶಿವನಿಗೆ ವೀರ್ಯಸ್ಖಲನವಾಯಿತು. ಸಪ್ತರ್ಷಿಗಳು ಆ ವೀರ್ಯಗಳನ್ನು ಎಲೆಗಳಲ್ಲಿ ಸಂಗ್ರಹಿಸಿ ಸೂಕ್ತ ಸಂದರ್ಭದಲ್ಲಿ ಕೇಸರಿಪತ್ನಿ ಅಂಜನೆಯ ಹೊಟ್ಟೆಗೆ ಆಕೆ ಕಿವಿಗಳ ಮೂಲಕ ಹಾಕಿದಾಗ ಹನುಮಂತನ ಜನ್ಮವಾಯಿತು. ಹನುಮ ಜನ್ಮೋತ್ಸವವನ್ನು ಉತ್ತರ ಕರ್ನಾಟಕದಲ್ಲಿ, ಉತ್ತರಭಾರತದಲ್ಲಿ ರಾಮನವಮಿ ಆಗಿ 5 ದಿವಸಕ್ಕೆ ದವನದಹುಣ್ಣಿಮೆಗೆ ಆಚರಿಸಿದರೆ,ದಕ್ಷಿಣಕರ್ನಾಟಕದಲ್ಲಿ ಹೊಸ್ತಿಲು ಹುಣ್ಣಿಮೆಗೆ ಆಚರಿಸುತ್ತಾರೆ. ಆಚರಣೆಗಳೆರಡು ಬೃಹತ್ತಾಗಿರುತ್ತವೆ. ಚಿರಂಜೀವಿಯಾಗಿದ್ದರಿಂದ ಆತನ ಜನ್ಮದಿನ "ಜನ್ಮೋತ್ಸವ" ಎನ್ನಬೇಕೇ ಹೊರತು ಜಯಂತಿಯಲ್ಲ.

ಹನುಮನ ಜನನಾನಂತರ ಅಂಜನಾದೇವಿಯ ಶಾಪವಿಮೋಚನೆಯಾಗುತ್ತದೆ. ಹನುಮಂತನಿಗೆ ರಾತ್ರಿ ನಿದ್ರಿಸುವಾಗ ದೇವಾನುದೇವತೆಗಳ ಕತೆಗಳ ಹೇಳುತ್ತಿದ್ದಳು. ಚಿಕ್ಕವನಿದ್ದಾಗ ಸೂರ್ಯನನ್ನು ಕಿತ್ತಳೆಹಣ್ಣೆಂದು ಭ್ರಮಿಸಿ ಆಕಾಶದತ್ತ ಧಾವಿಸಿದಾಗ, ಭಯಗೊಂಡ ಇಂದ್ರ ವಜ್ರಾಯುಧದಿಂದ ಪ್ರಹರಿಸಿದಾಗ ಅಂಜನಾದೇವಿ ಮಗನಿಗಾಗಿ ಗೋಳಾಡುತ್ತ ತ್ರಿಮೂರ್ತಿಗಳಿಗೆ, "ನಿನ್ನ ಮಗಾ ಹಾಗೆ.. ಹೀಗೆ "ಎಂದೇಳಿ ವರ ನೀಡಿ ಈಗ ಹೀಗೆ ಮಾಡಿದ್ದೀರಲ್ಲಾ ಕಂದನನ್ನು, ಪ್ರಜ್ಞೆ ಬರಿಸಿರೆಂದು ಹಲುಬುತ್ತಾಳೆ. ಕುಪಿತನಾದ ವಾಯುದೇವನು ಗಾಳಿಯನ್ನು ನಿಲ್ಲಿಸಿ ಬಿಡುತ್ತಾನೆ. ಬ್ರಹ್ಮನು ಹನು ಮಂತನನ್ನು ಸ್ಪರ್ಶಿಸಿ ಎಚ್ಚರಗೊಳಿಸಿದಾಗ ಉಪಸ್ಥಿತರಿದ್ದ ದೇವತೆಗಳೆಲ್ಲ ಹನುಮಂತನನ್ನು ಹರಸುತ್ತಾರೆ.

ಒಂದು ಸಲ ಅರಮನೆಯಲ್ಲಿ ಹನುಮಂತ-ಅಂಜನಾದೇವಿ ಮಾತಾನಾಡುತ್ತಿದ್ದಾಗ ಸುಮಧುರಹಾಡಿನೊಂದಿಗೆ ವೀಣಾನಾದ ಕೇಳಿಸಿತು. ಹೊರ ಬಂದಾಗ ಹಾಡುತ್ತಿರುವುದು ನಾರದರೆಂದು ತಿಳಿದಾಗ, ನಮಸ್ಕರಿಸಿದ. ನಾನೀಗ ಅವಸರದಲ್ಲಿದ್ದೇನೆಂದಾಗ ಹನುಮಂತನು, ಪೂಜ್ಯರೇ ನಾನು-ತಾಯಿ ಇಬ್ಬರೂ ಸ್ವರಮಾಧುರ್ಯ ಇಷ್ಟಪಟ್ಟಿದ್ದೇವೆ. ಪ್ರಭಾವಶಾಲಿಯಾಗಿ ಆಶೀರ್ವದಿಸಿರೆಂದಾಗ ನಾರದರು ಹನುಮಂತನಿಗೆ ಸಂಗೀತ ಜ್ಞಾನ ಸುಮಧುರಕಂಠವಾಗುವಂತೆ ಆಶೀರ್ವದಿಸಿದರು.

ರಾವಣವಧೆ ನಂತರವೂ ಆಂಜನೇಯನು ರಾಮನನ್ನು ಬಿಟ್ಟು ಹೋಗಲು ಸಿದ್ದನಿರಲಿಲ್ಲವಾದರೂ ತಾಯಿ ಅಂಜನಾದೇವಿ ಕರೆಯಿಂದ ಶ್ರೀರಾಮ ಕಳಿಸಿದ. ಆಗ ತನ್ನ ವಧೆಗಾಗಿ ರಾಮನನ್ನು ನಿಯೋಜಿಸಿದ್ದನ್ನು ಜನರಿಂದ ಕೇಳಿ ತಿಳಿದ ಶಕುಂತ(ಕೆಲವಡೆ ರಾಮನ ಚಿಕ್ಕಪ್ಪನಾದ ಚಂದ್ರನಾನು ರಾಜನೆಂಬ ಉಲ್ಲೇಖನವಿದೆ) ದಿಕ್ಕಾಪಾಲಾಗಿ ಓಡುತ್ತ ಅಂಜನಾದೇವಿ ಪಾದಕ್ಕೆ ಬಿದ್ದು ಪ್ರಾಣಭಿಕ್ಷೆ ಬೇಡಿದ. ಯಾರು ಯಾವ ಕಾರಣಕ್ಕೆ ಕೊಲ್ಲಲೆತ್ನಿಸುತ್ತಿದ್ದಾರೆಂದು ಕೇಳಿದರೂ, ಆತ ಪ್ರಾಣಭಿಕ್ಷೆ ಕೊಡುತ್ತೇನೆಂಬ ವಾಗ್ದಾನ ಮಾಡಿದರೆ ತಿಳಿಸುವುದಾಗಿ ಹೇಳಿದ. ಹೆದರಿದ್ದ ಆತನಿಗೆ ಅಭಯವಿತ್ತಳು. ಆತನನ್ನು ಕೊಲ್ಲಲು ಬರುತ್ತಿರುವುದು ಶ್ರೀರಾಮನೆಂಬುದು ತಿಳಿದಾಗ ಕಕ್ಕಾವಿಕ್ಕಿಯಾದಳು.

ಹನುಮನಲ್ಲಿ ಕೋರಿಕೆಯನ್ನು ಪೂರೈಸಿಕೊಡುವಂತೆ ಹೇಳಿದಳು. ಅಯೋಧ್ಯೆಯಲ್ಲಿ ರಾಮನಿಗೆ ತಿಳಿಯಿತು. ಶಕುಂತ/ಚಿತ್ರಭಾನು ಹನುಮಂತನಿಂದ ರಕ್ಷಿತನಾಗಿರುವುದು ತಿಳಿಯಿತು. ಗುರುವಿನಾಜ್ಞೆ ಪರಿಪಾಲಿಸಬೇಕೇ? ಮೊದಲು ಹನುಮಂತನ ಮುಗಿಸಬೇಕೇ? ಜಿಜ್ಞಾಸೆಯಲ್ಲಿದ್ದ.

ರಾಮನಿಲ್ಲದ ಸಮಯದಲ್ಲಿ ಅಂಜನಾದೇವಿ ಸೀತಾಮಾತೆಯಲ್ಲಿ ಹೋಗಿ ಹೇಳಿಕೊಂಡಳು. ಹನುಮನಿಗೆ ಸೀತೆ 2 ವರಗಳನ್ನು ಅನುಗ್ರಹಿಸಿದಳು. ರಾಮನು ಹನುಮನಿಗೆ ಬಿಡುವ ಬಾಣಗಳೆಲ್ಲ ಶಾಂಡಿಲ್ಯ ಪತ್ರೆಗಳಾಗಿ, ಬಿಲ್ವಪತ್ರೆಗಳಾಗಿ, ತುಳಸೀದಳಗಳಾಗಲಿ, ಹಾಗೂ ಬ್ರಹ್ಮಾಸ್ತ್ರಗಳನ್ನು ಪ್ರಯೋಗಿಸಿದರೆ ವೈಜಯಂತೀಹಾರವಾಗಿ ಹನುಮನ ಕೊರಳಲ್ಲಿ ವಿಜೃಂಭಿಸಲೆಂಬ ವರಗಳ ಪಡೆದು ಹೊರಟಳು. ಇದನ್ನು ರಾಮನಲ್ಲಿ ಸೀತೆ ಹೇಳದ್ದರಿಂದ ರಾಮನಿಗದು ತಿಳಿಯಲಿಲ್ಲ. ರಾಮ-ಹನುಮರಯುದ್ಧ ತಪ್ಪಿಸಬೇಕೆಂಬ ಇರಾದೆ ಅವಳದಾಗಿತ್ತು.

ರಾಮನಾಮ ಜಪಿಸುತ್ತಿದ್ದ ಹನುಮನಿಗೇನೂ ಆಗದ್ದನ್ನು ನೋಡಿ, ರಾಮನು ಆಶ್ಚರ್ಯದಿಂದ ಸೀತೆಯನ್ನು ಕೇಳಿದಾಗ ವರಗಳ ನೀಡಿದೆನೆಂದಾಗ ಕೋಪದಿಂದ ನಾರಾಯಣಾಸ್ತ್ರ ಬಿಡಬೇಕೆನ್ನುವಷ್ಟರಲ್ಲಿ ವಿಶ್ವಾಮಿತ್ರರು ತಡೆದು,ಶಕುಂತ/ಚಿತ್ರಭಾನುವಿನ ರುಂಡ ಬಿದ್ದಿದೆಯೆಂದು ಹನುಮನಿಗೂ ತಿಳಿಸಿಬಿಡಿರೆಂದರು.

ಹನುಮ ಅಮ್ಮನ ಮಾತು ಉಳಿಸಿಕೊಳ್ಳಲಾಗಲಿಲ್ಲವಲ್ಲವೆಂದು ಕ್ರುದ್ಧನಾಗಿ ವಿಶ್ವಾಮಿತ್ರರ ಆಟವೆಂದು ಹರಿಹಾಯತೊಡಗಿದಾಗ ನಾರದರು ಮಧ್ಯಪ್ರವೇಶಿಸಿ ಸಶರೀರಿಯಾಗಿ ಜೀವಂತವಿರುವ ಶಕುಂತ/ಚಿತ್ರಭಾನುವನ್ನು ತೋರಿಸಿದ. ರಾಮನಾಮಜಪದಿಂದ ಅಂಜನಾದೇವಿಯ ಮಾತು ಆಂಜನೇಯ ಈಡೇರಿಸಿದ.






ಬಂದು ನಿಂತಿಹ ನೋಡಿ ಭೂತಳದಿ ವೆಂಕಟ
ಇಂದಿರೆಯೊಡಗೂಡಿ ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ ಆನಂದಗೂಡಿ ॥ಪ॥

ವಂದಿಸುತ ಮನದೊಳಗೆ ಇವನಡಿ
ದ್ವಂದ್ವ ಭಜಿಸಲು ಬಂದ ಭಯಹರ
ಇಂದುಧರ ಸುರವೃಂದ ನುತ ಗೋ
ವಿಂದ ಘನದಯಾಸಿಂಧೂ ಶ್ರೀಹರಿ ॥ಅ.ಪ.॥

ದ್ವಾರದೆಡಬಲದಲ್ಲಿ ಜಯವಿಜಯರಿಬಪ್ಪರು
ಸೇರಿ ಸೇವಿಪರಲ್ಲಿ ಸನಕಾದಿ ನುತ ಶೃಂ
ಗಾರನಿಧಿ ಅಂಗದಲಿಲ ಮುತ್ತಿನಲಿ ಶೋಭಿಪ
ಹಾರ ಪೊಂದಿಹುದಲಿಲ ವಿಶ್ತಾರದಲ್ಲಿ ವಾರ
ವಾರಕೆ ಪೂಜೆಗೊಂಬುವ ಹಾರ ಮಕುಟಾ
ಭರಣ ಕುಂಡಲಧಾರ ಭುಜ ಕೇಯೂರ ಭೂಷಿತ
ಮಾರಪಿತ ಗುಣ ಮೋಹನಾಂಗ ಪೀತಾಂಬರ ಕಟಿಕರ
ಚಾರು ಕಲ್ಹಾರಾದಿ ಪೂವಿನ ಹಾರ ಕೊರಳೊಳು ಎಸೆವು
ತಿರೆ ವೇದನಾರವಿಂದನು ನಗುತ ನಲಿಯುತ ॥೧॥

ಎಲ್ಲ ಭಕ್ತರಭೀಷ್ಟ ಕೊಡುವುದಕೆ ತಾ ಕೈವಲ್ಯ ಸ್ಥಾನವ ಬಿಟ್ಟ
ಶೇಷಾದ್ರಿ ಮಂದಿರದಲ್ಲಿ ಲೋಲುಪ ದಿಟ್ಟ ಸೌಭಾಗ್ಯನಿಧಿ ಗೆದುರಿಲ್ಲ
ಭುಜಬಲಪುಷ್ಟ ಕಸ್ತೂರಿಯಿಟ್ಟು ಚೆಲ್ವ ಫಣೆಯಲಿ
ಶೋಭಿಸುವ ಸಿರಿವಲ್ಲಭನ ಪೊಗಳದಿಹ ಜಗ ಖುಲ್ಲರೆದೆ ದಲ್ಲಣ
ಪರಾಕ್ರಮಮಲ್ಲ ಮರ್ದನ ಮಾತುಳಾಂತಕ
ಫಲ್ಗುಣನ ಸಖ ಪ್ರಕಟನಾಗಿಹ ದುರ್ಲಭನು ಅಘದೂರ
ದುರ್ಲಭನು ಅಘದೂರ ಬಹುಮಾಂಗಲ್ಯ ಹೃದಯನು ಮಾಡಿ
ಸೃಷ್ಟಿಗೆ ಉಲ್ಲಾಸ ಕೊಡುತಲಿ ಚೆಂದದಲಿ ॥೨॥

ಪದಕ ಕೌಸ್ತುಭಧಾರಿ ಸರಿಗೆಯ ಸುಕಂಧರ
ಸುದರ್ಶನ ಧಾರಿ ಸುಂದರ ಮನೋಹರ
ಪದಯುಗದಿ ನೂಪುರ ವಿಟ್ಟಿಹನು
ಸನ್ಮುನಿ ಹೃದಯಸ್ಥಿತ ಗಂಭೀರ ಬಹುದಾನಶೂರ
ವಿಧಿ ಭವಾದ್ಯರ ಪೊರೆವ ದಾತನು
ತುದಿ ಮೊದಲು ಮಧ್ಯಗಳ ರಹಿತನು ಉದುಭವಾದಿಗಳಿಗೆ ಸುಕರ್ತನು
ತ್ರಿದಶಪೂಜಿತ ತ್ರಿಭುವ ನೇಶ ಸದುವಿಲಾಸದಿ ಸ್ವಾಮಿ ತೀರ್ಥದಿ
ಉದಿಸುತಿರೆ ಸಿರಿಮಹಿಳೆ ಸಹಿತ
ಪದುಮನಾಭನು ಪುರಂದರ ವಿಠಲನು
ಪ್ರತಿವರುಷ ಬ್ರಹ್ಮೋತ್ಸವದಿ ಮೆರೆಯುತ ॥೩॥

-ಪುರಂದರದಾಸರು

# ವಿಶ್ವ ಕರ್ಮ ಜಯಂತಿ



ಕೆ. ನಾಗಾರ್ಜುನ್

ವಿಶ್ವರೂಪಂ ವಿಶ್ವವ್ಯಾಪಿಂ ವಿಶ್ವಮೂರ್ತಿಂ ಕೃಪಾಕರಂ
ವಿಶ್ವನಾಥಂ ವಿಶ್ವಪೂಜ್ಯಂ ವಿಶ್ವಕರ್ಮ ನಮೋ ನಮಃ

ಬೇಲೂರು, ಹಳೇಬೀಡು, ಅಜಂತ, ಎಲ್ಲೋರ, ಕೊನಾರ್ಕ, ಮಧುರೈ, ಬೃಹದೀಶ್ವರ ಕುಜರಾಹೋ, ಹಂಪಿ, ಬದರಿ, ಕೇದಾರ, ಮಹಾ ಬೋಧಿ, ವಿರೂಪಾಕ್ಷ ಎಲಿಫೆಂಟಾ ಗುಹೆಗಳು ರಾಜಾಸ್ಥಾನದ ಅರಮನೆಗಳು ಇತ್ಯಾದಿ ವಿವಿಧ ರೀತಿಯ ಕಲೆ ಹಾಗೂ ಶಿಲ್ಪಕ್ಕೆ ಪ್ರಸಿದ್ಧವಾದ ದೇಗುಲಗಳು ಅರಮನೆಗಳು, ಕಟ್ಟಡಗಳು,ಅನೇಕ ಸುಪ್ರಸಿದ್ಧ ಶಿಲ್ಪಕಾರರ ಕೊಡುಗೆ, ಮರ,ಲೋಹ,ಕಲ್ಲು ಇತ್ಯಾದಿಗಳಿಂದ ಅಲಂಕಾರಿಕ ವಿಶೇಷವಾದ ಶಿಲ್ಪಗಳು,ದೇಗುಲಗಳು, ಅರಮನೆಗಳು, ಕಟ್ಟಡಗಳು ಬೃಹತ್ ಗೋಪುರಗಳು, ವಸ್ತುಗಳು, ಆಭರಣಗಳು ಇತ್ಯಾದಿಗಳನ್ನು ನಿರ್ಮಿಸಿ, ವಿಶೇಷವಾದ ಕಟ್ಟಡಗಳು, ನಗರಗಳು, ವಿಶೇಷವಾದ ವಸ್ತುಗಳ ಸೃಷ್ಟಿಗೆ ಕಾರಣರಾದ ವ್ಯಕ್ತಿಗಳ ಮೂಲ ವಿಶ್ವಕರ್ಮ. ವಿಶ್ವಕರ್ಮರೆಂದರೆ ಶಿಲ್ಪಕಲೆಗಳ ದೇವರು, ವಿಶ್ವದ ನಿರ್ಮಾಣ ಮಾಡಿದವರು ಎಂದು ನಂಬಲಾಗಿದೆ.

ಸಂಸ್ಕೃತದಲ್ಲಿ ವಿಶ್ವಕರ್ಮನೆಂದರೆ "ಎಲ್ಲವನ್ನು ಸಾಧಿಸುವವನು" ಎಂಬ ಅರ್ಥವಿದೆ. ಋಗ್ವೇದದಲ್ಲಿ ಸೃಷ್ಟಿದೇವತೆಯ ಅಮೂರ್ತರೂಪ, ಬ್ರಹ್ಮಾಂಡದ ಪ್ರಮುಖ ವಾಸ್ತುಶಿಲ್ಪಿ ಎಂದು ಹೇಳಲಾಗುತ್ತದೆ. ಸಮುದ್ರ ಮಥನದ ಸಮಯದಲ್ಲಿ ಉದ್ಭವಿಸಿದ ಕಲ್ಪವೃಕ್ಷ, ಕಾಮಧೇನುವಿನಂತೆ ವಿಶ್ವ ಕರ್ಮರು ಪ್ರಮುಖರು. ಇವರು ಕೇವಲ ವ್ಯಕ್ತಿ ಮಾತ್ರವಲ್ಲದೆ ಅದೊಂದು ದೈವೀಕಶಕ್ತಿ. ಇಂದು ನಾವು ಕಾಣುತ್ತಿರುವ ಅದ್ಭುತ ಜಗತ್ತಿನ ನಿರ್ಮಾತೃ ಎನ್ನಲಾಗುತ್ತದೆ.

ಸಕಲಕಲಾವಲ್ಲಭನಾದ ಕಲಾದೇವನೇ ವಿಶ್ವಕರ್ಮ. ಯುಗಯುಗಗಳಿಂದೂ ದೇವಾನು ದೇವತೆಗಳಿಗೆ ಸುಂದರ ನಗರಗಳು, ಅರಮನೆಗಳು ವಸ್ತುಗಳನ್ನು ನಿರ್ಮಾಣ ಮಾಡಿಕೊಟ್ಟ ಕೀರ್ತಿ ಇವರದ್ದು. ಸೃಷ್ಟಿಯ ಕರಡು ಪ್ರತಿಯ ತಯಾರಕರೆಂದು ಕರೆಯಲಾಗುತ್ತದೆ. ಸೃಷ್ಟಿಕರ್ತ ಬ್ರಹ್ಮನಾದರೂ ಇವನ ವಂಶಸ್ಥನಾದ ವಿಶ್ವಕರ್ಮನು ಇಡೀ ಸೃಷ್ಟಿ ಕಾರ್ಯದ ಮೂಲನು. ತನಗೆ ತಾನೇ ಸೃಷ್ಟಿ ಮಾಡಿಕೊಂಡಿರುವನೆಂದು ನಂಬಲಾದ ಈ ವಿಶ್ವ ಕರ್ಮರು ಸತ್ಯಯುಗದಲ್ಲಿ ಸ್ವರ್ಗವನ್ನು, ತ್ರೇತಾಯುಗದಲ್ಲಿ ಶ್ರೀಲಂಕಾ ಪಟ್ಟಣವನ್ನು, ದ್ವಾಪರಯುಗದಲ್ಲಿ ಶ್ರೀಕೃಷ್ಣನ ಪಟ್ಟಣ ದ್ವಾರಕೆಯನ್ನು ನಿರ್ಮಿಸಿದ ಕೀರ್ತಿ ಇವರದ್ದು. ಪರಶಿವನ ರಾಣಿ ಪಾರ್ವತಿಗಾಗಿ ಬಂಗಾರದ ಅರಮನೆಯನ್ನು ಪಾಂಡವರಿಗೆ ಇಂದ್ರಪ್ರಸ್ತ ಹಾಗೂ ಕೌರವರಿಗೆ ಹಸ್ತಿನಾ ಪುರವನ್ನು ನಿರ್ಮಿಸಿ ಕೊಟ್ಟವರೇ ವಿಶ್ವಕರ್ಮ. ದೇವಾನುದೇವತೆಗಳ ಅರಮನೆ,ಮಹಾಶಿವನ ತ್ರಿಶೂಲ,ಸುದರ್ಶನ ಚಕ್ರ,ಪುಷ್ಪಕ ವಿಮಾನ,ಜಗನ್ನಾಥ ಪುರಿಯಲ್ಲಿನ ಜಗನ್ನಾಥ ದೇಗುಲ ಇತ್ಯಾದಿ ಈತನಿಂದ ನಿರ್ಮಾಣವಾಗಿದೆಯೆಂದು ಹೇಳಲಾಗುತ್ತದೆ. ಸ್ಕಂದಪುರಾಣ, ವರಾಹಪುರಾಣ, ರಾಮಾಯಣ, ಮಹಾಭಾರತ ದಲ್ಲಿ ಇವರ ಕುರಿತ ಉಲ್ಲೇಖವಿದೆ, ವಿವಿಧ ರೀತಿಯ ದಂತ ಕಥೆಗಳಿವೆ. ಉಪನಿಷತ್ತಿನಲ್ಲಿ ಇವನನ್ನು ಸಕಲ ಜೀವಜಂತುಗಳಲ್ಲಿರುವವನು ಎಂದು ವಿವರಿಸಲಾಗಿದೆ. ಋಗ್ವೇದ,ಸಾಮವೇದ, ಯಜುರ್ವೇದ,ಅಥರ್ವವೇದ ಈ ನಾಲ್ಕು ವೇದಗಳ ಕಾಲದಲ್ಲಿ ವಿವಿಧ ವಿಶೇಷ ಹೆಸರಿನಿಂದ ಉಲ್ಲೇಖಿಸಲಾಗಿದೆ.

ಇವರ ಕಲಾನೈಪುಣ್ಯತೆಗೆ ಒಂದು ಉದಾಹರಣೆ, ಒಮ್ಮೆ ಪರಶಿವನು ತನ್ನ ಪತ್ನಿ ಮಾತಾ ಪಾರ್ವತಿಗೆ ಉಡುಗೊರೆಯೊಂದನ್ನು ನೀಡಲು ನಿರ್ಧರಿಸಿದನಂತೆ. ಅದಕ್ಕಾಗಿ ವಿಶ್ವಕರ್ಮರನ್ನು ಅತ್ಯಂತ ಸುಂದರವಾದ ಬಂಗಾರದ ಅರಮನೆ ನಿರ್ಮಿಸಿ ಕೊಡಲು ಕೇಳಿದನಂತೆ. ಅದರಂತೆ ವಿಶ್ವಕರ್ಮರು ಅತ್ಯಂತ ಸುಂದರವಾದ ಬಂಗಾರದ ಅರಮನೆ ನಿರ್ಮಿಸಿಕೊಟ್ಟರು. ಆ ಮನೆಯ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಶಿವನು ತನ್ನ ಗುರುಗಳಾದ ಪುಲಸ್ಯ ಮಹರ್ಷಿಗಳನ್ನು ಆಹ್ವಾನಿಸಿದ್ದನಂತೆ. ಭವ್ಯ ಅರಮನೆ ಕಂಡ ಗುರುಗಳು ಗುರು ಕಾಣಿಕೆಯಾಗಿ ಅರಮನೆಯನ್ನೇ ಕೊಡುವಂತೆ ಶಿವನಲ್ಲಿ ಕೇಳಿದರು. ಪರಶಿವನು ಆ ಅರಮನೆಯನ್ನು ಅವರಿಗೆ ನೀಡಿದನು. ನಂತರದ ದಿನಗಳಲ್ಲಿ ಈ ಅರಮನೆಯನ್ನು ಮಹರ್ಷಿಗಳು ಕುಬೇರನಿಗೆ ನೀಡಿದರು. ಲಂಕಾಧಿಪತಿಯಾದ ರಾವಣನು ಕುಬೇರನೊಂದಿಗೆ ಹೋರಾಡಿ ಆತನನ್ನು ಸೋಲಿಸಿ ಅರಮನೆಯನ್ನು ತನ್ನದಾಗಿಸಿಕೊಂಡನು. ಮುಂದೆ ಸುವರ್ಣ ಲಂಕೆಯೆನಿ

ಸಿದ್ದು ಶ್ರೀಲಂಕೆ ಎಂದು ಹೆಸರಾಯಿತು. ಬ್ರಹ್ಮ,ವಿಷ್ಣು,ಶಿವನಿಗಿಂತ ಮುನ್ನವೇ ವಿಶ್ವಕರ್ಮನ ಅಸ್ತಿತ್ವವಿತ್ತೆಂದು ಹೇಳಲಾಗುತ್ತದೆ. ವಿಶ್ವದ ಸೃಷ್ಟಿಯಲ್ಲಿ ಈತನ ಪಾತ್ರವು ಅತ್ಯಂತ ವಿಶೇಷವಾದುದು. ಈತನು ಸ್ವಯಂಭೂ ಎಂದು ಕಾಳಹಸ್ತಿ ಮುನಿಯ ವಿಶ್ವಕರ್ಮ ಪುರಾಣ ಹಾಗೂ ಚೋಳರ ಕಾಲದ ಅಮರಸಿಂಹನ ಮೂಲಸ್ತಂಭ ಪುರಾಣದಲ್ಲಿ ಹೇಳಲಾಗಿದೆ. ಧಾರ್ಮಿಕ ಗ್ರಂಥಗಳಲ್ಲಿನ ಮಾಹಿತಿಯಂತೆ ಬ್ರಹ್ಮನ ಮಗನಾದ ಧರ್ಮ ಋಷಿಯ ಮಗ ವಾಸ್ತುದೇವ. ಅಂಗೀರಸ ಹಾಗೂ ವಾಸ್ತುದೇವನ ಮಗನೇ ವಿಶ್ವಕರ್ಮ. ವಿಶ್ವ ನಿರ್ಮಿಸಿ, ದೇವಶಿಲ್ಪಿ ಎನಿಸಿದ ಇವರು ಚತುರ್ಮುಖನಾಗಿ ಎಲ್ಲಾ ದಿಕ್ಕುಗಳನ್ನು ನೋಡುವನೆಂದು ನಂಬಲಾಗಿದೆ. ಚತುರ್ಭುಜನಾಗಿ ವಿವಿಧ ಪರಿಕರಗಳನ್ನು ಹೊಂದಿದ್ದು ವಿಶಿಷ್ಠ ಶಿಲ್ಪಿ ಎನಿಸಿದ್ದಾರೆ, ಮತ್ತೊಂದು ಉಲ್ಲೇಖದಲ್ಲಿ ಈತನು ಪಂಚಮುಖ ಹೊಂದಿದ್ದು ಅವುಗಳಿಂದ ಮನು,ಮಯಾ,ತ್ವಷ್ಟಿ, ಶಿಲ್ಪಿ, ದೈವಜ್ಞ ಎಂಬ ಇವನ ಐವರು ಪುತ್ರರು ಉದ್ಭವಿಸಿದರೆಂದು ವಿವರಣೆಯಿದೆ.ಈ ಕಲಿಯುಗದಲ್ಲಿ ಕಬ್ಬಿಣ, ಚಿನ್ನ,ಬೆಳ್ಳಿ,ತ್ರಾಮ,ಹಿತ್ತಾಳೆ ಲೋಹಗಳು, ಮರ, ಕಲ್ಲು ಇತ್ಯಾದಿಗಳಿಂದ ವಿಶೇಷವಾದ ವಸ್ತುಗಳು ಆಭರಣಗ ಳನ್ನು ತಯಾರಿಸುವ ವ್ಯಕ್ತಿಗಳ ಮೂಲ ಪುರುಷನಾಗಿ ಈ ವಿಶ್ವಕರ್ಮ ದೇವರನ್ನು ಬಹಳ ಭಕ್ತಿಯಿಂದ ಆರಾಧಿಸಲಾಗುತ್ತದೆ. ವಿಶ್ವಕರ್ಮರ ಐವರು ಪುತ್ರರು ವಿಶ್ವಕರ್ಮ ಗೋತ್ರ ಪ್ರವರ್ತಕರಾದರು. ದೇವಶಿಲ್ಪಿ ವಿಶ್ವಕರ್ಮರ ಜಯಂತಿಯನ್ನು ಪ್ರತಿವರ್ಷ ವಿಶೇಷ ಸಂಭ್ರಮದೊಂದಿಗೆ ಆಚರಿಸಲಾಗುತ್ತದೆ.

ಪ್ರತೀ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಭಾರತದ ಹಲವು ಕಡೆ ವಿಶ್ವಕರ್ಮರ ಜಯಂತಿಯನ್ನು ಅತ್ಯಂತ ಭಕ್ತಿ ಪೂರ್ವಕವಾಗಿ ನಡೆಸಲಾಗುತ್ತದೆ. ಚಿನ್ನ, ಬೆಳ್ಳಿ, ಕಬ್ಬಿಣ ಮರದ ವಸ್ತುಗಳು, ಆಭರಣಗಳನ್ನು ತಯಾರಿಸುವ ಯಾಂತ್ರಿಕ, ತಾಂತ್ರಿಕ ಕಾರ್ಯಗಳ ವಿವಿಧ ಪರಿಕರಗಳನ್ನು ಸ್ವಚ್ಛಗೊಳಿಸಿ, ಅಲಂಕರಿಸಿ ವಿಶೇಷವಾಗಿ ಪೂಜಿಸಲಾಗುತ್ತದೆ. ವಿಶ್ವಕರ್ಮರ ಪೂಜೆಗೆ ಬಿಳಿ ಹಾಗೂ ಹಳದಿ ಬಣ್ಣದ ಹೂಗಳು ಶ್ರೇಷ್ಠವೆಂದು ಅವುಗಳಿಂದ ಅಲಂಕರಿಸಿ ಪೂಜಿಸಲಾಗುತ್ತದೆ. ಬಗೆ ಬಗೆಯ ಸಿಹಿ ಪದಾರ್ಥಗಳಿಂದ ನೈವೇದ್ಯ ನೀಡಿ ಜಪತಪ ನಡೆಸಲಾಗುತ್ತದೆ.



## ಚಿಕ್ಕಶೇಷವಾಹನ

**ಶೇಷವಾಹನನಾಗಿ ಬಂದ ಶ್ರೀನಿವಾಸ**

**ವಾಸುದೇವ ವಾಸವಪ್ರಿಯ ॥ಪ॥**

**ಅಜಭವ ಸುರಮುನಿ ವ್ರಜ ನಾನಾ ಬಗೆಯಲ್ಲಿ**

**ಭಜನೆ ಮಾಡುತ ಬಲು ನಿಜಮನದಲಿ ನೋಡೆ ॥೧॥**

**ಗಂಧರ್ವ ಗಣ ನಿಜನಲವಿಂದ ಪಾಡಲು ಭೇರಿ**

**ದುಂದುಭಿ ವಾದ್ಯ ಆನಂದ ನುಡಿವುತಿರೆ ॥೨॥**

**ಛತ್ರ ಚಾಮರ ಜನರ ಸ್ತೋತ್ರ ಸಂಗೀತನಾದ**

**ಧಾತ್ರಿಯ ತುಂಬಿರಲು ಸರ್ವತ್ರ ವ್ಯಾಪಕದೇವ ॥೩॥**

**ಇಕ್ಕೆಲದ ವರಬೆಳಕು ದಿಕ್ಕ ಬೆಳಗುತಿರೆ**

**ಚೊಕ್ಕದೈವ ತಾನೆ ಶುದ್ಧ ಭಕ್ತರ ಒಡಗೂಡಿ ॥೪॥**

**ಇಷ್ಟ ಮೂರುತಿ ಮನೋಭೀಷ್ಟ ಪಾಲಿಪ ವಿಜಯ**

**ವಿಠಲ ವೆಂಕಟೇಶ ಬೆಟ್ಟದೊಡೆಯ ಇಂದು ॥೫॥**

**- ವಿಜಯದಾಸರು**

ಧಾರಾವಾಹಿ



# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ತಿರುಮಲೆಯ ಆಲಯ ವಿವರ

**ವಿಮಾನಪ್ರದಕ್ಷಿಣ :**

ಎರಡನೇ ಪ್ರಾಕಾರ ಗೋಡೆಗಳು, ಒಳ ಗೋಪುರ ಹಾಗೂ ಗರ್ಭಗುಡಿಯನ್ನು ಆವರಿಸಿರುವ ಮೊದಲ ಪ್ರಾಕಾರದ ಗೋಡೆಗಳ ನಡುವೆಯಿರುವ ಆಯತಾಕೃತಿಯ ಸ್ಥಳವಿದು. ಒಳ ಗೋಪುರದ ನಂತರದ ಹಾಗೂ ತಿರುಮಾಮಣಿ ಮಂಟಪದ ನಡುವಿನ ಅಗಲ 18 ಅಡಿಗಳೂ ಇಲ್ಲ.ಮುಖ್ಯ ವಿಮಾನವನ್ನು ಹೊಂದಿದ ಕಟ್ಟಡದೊಡನೆಯೇ ಹಲವಾರು ಕಲ್ಲಿನ ನಿರ್ಮಾಣಗಳನ್ನೂ,ಗುಡಿಗಳನ್ನೂ,ಮಂಟಪಗಳನ್ನೂ, ವಿಮಾನಪ್ರದಕ್ಷಿಣೆಯನ್ನೂ ಒಳಗೆ ಹೊಂದಿದ್ದು, ಮುಖ್ಯ ಆಲಯದ ಹೊರಗೆ ತುಸುವೇ ಸ್ಥಳಾಕಾಶವಿದೆ. ಅಂಗಪ್ರದಕ್ಷಿಣೆಯನ್ನು ಮಾಡುವ ಹರಕೆ ಹೊತ್ತಿರುವ ಭಕ್ತರು ಈ ಪ್ರದಕ್ಷಿಣಾಪಥದಲ್ಲಿಯೇ ಅಂಗಪ್ರದಕ್ಷಿಣೆ ಮಾಡುವರು.

ವಿಮಾನ ಪ್ರದಕ್ಷಿಣೆಯ ಹೊರ ಸುತ್ತಿನಲ್ಲಿರುವ ಮಂಟಪಗಳಲ್ಲಿ ವಿಜಯನಗರದ ಕಾಲದ ಮಾದರಿ ಕಂಬಗಳಿದ್ದು,ಸುಂದರವಾದ ಕಂಸ, ಪೂತನಿ,ಬಿಲ್ಲಿನ ಕನ್ಯೆ,ಕೋತಿ,ಒರಳಿಗೆ ಕಟ್ಟಿದ ಕೃಷ್ಣ-ಮುಂತಾದ ಶಿಲ್ಪಗಳಿವೆ. ಈ ಮಂಟಪಗಳಲ್ಲಿ ಪಶ್ಚಿಮ ಮಂಟಪಗಳಲ್ಲಿ ವೇದ ಪಾರಾಯಣ ಮಾಡುವರು.(ಇದೀಗ ಇಲ್ಲಿ ಯಾತ್ರಿಕರ ಕಾಣಿಕೆಗಳನ್ನು ಲೆಕ್ಕಿಸುವ ಪರಕಾಮಣಿ ನಡೆಯುತ್ತದೆ. ಮಂಟಪಗಳನ್ನು ಗಾಜಿನ ಕೋಣೆಗಳನ್ನಾಗಿಸಿ, ಹವಾ ನಿಯಂತ್ರಿತವಾಗಿಸಲಾಗಿದೆ. ಇದರಿಂದಾಗಿ ಯಾತ್ರಿಕರು ಪ್ರದಕ್ಷಿಣಾಪಥದಲ್ಲಿ ನಡೆಯುವಾಗ ಮಂಟಪದ ಹೊರಗಿನಿಂದ, ಒಳಗಡೆ ಹಣವೆಣಿಸುವ ಕಾರ್ಯವನ್ನು ನೋಡಬಹುದು-ಅನುವಾದಕ)ಈ ಮಂಟಪಗಳಲ್ಲಿಯೇ ಹಲವಾರು ಕೋಣೆಗಳ ವಿಂಗಡನೆಯಾಗಿ, ದೀಪಗಳ ಕೋಣೆ, ಪಲ್ಲಕ್ಕಿ ಕೋಣೆ-ಮೊದಲಾದವುಗಳು ಉಂಟಾಗಿವೆ. ಉತ್ತರದ ಕಡೆಯಲ್ಲಿ ವಿಮಾನ ವೆಂಕಟೇಶ್ವರಸ್ವಾಮಿ ದರ್ಶನ ಪೀಠದ ನಂತರ ಸ್ವಾಮಿಯ ಹುಂಡಿಯ ಎದುರು ಇರುವ ಸಂಕೀರ್ತನಾ ಭಂಡಾರ ವಿಶೇಷವಾಗಿ ಗಮನ ಸೆಳೆಯುತ್ತದೆ. ಕಾರಣ ಇಲ್ಲಿ ಅನ್ನಮಾಚಾರ್ಯರ ಸಂಕೀರ್ತನೆಗಳನ್ನು ಕೆತ್ತಿದ ತಾಮ್ರಪಟಗಳನು ಸಂಗ್ರಹಿಸಿದ್ದು. ಈ ಗೋಡೆಗಳ ಬಾಗಿಲ ಮೇಲೆ ಅನ್ನಮಾಚಾರ್ಯರ ವಿಗ್ರಹವನ್ನು ಕೆತ್ತಲಾಗಿದೆ.

**ಶ್ರೀ ವರದರಾಜ ಆಲಯ:**

ಗೋಪುರದ್ವಾರದ ಮೂಲಕ ಒಳಬಂದ ಕೂಡಲೇ ಗೋಪುರದಿಂದ ಏಳು ಅಡಿ ದಕ್ಷಿಣಕ್ಕೆ ಪೂರ್ವದ ಪ್ರಾಕಾರದ ಗೋಡೆಯಿಂದ ಎರಡು ಅಡಿ ದೂರದಲ್ಲಿ 20 ಅಡಿ ಉದ್ದ ಹಾಗೂ 15 ಅಡಿ ಅಗಲದ ಶ್ರೀ ವರದರಾಜಸ್ವಾಮಿ ಆಲಯವಿದೆ. ಎತ್ತರವಾದ ಅಧಿಷ್ಠಾನದಲ್ಲಿ ಅಂತರಾಳ, ಗರ್ಭಗೃಹ, ಗರ್ಭಗೃಹದ ಮೇಲಿನ ವಿಮಾನಗಳೊಡನೆ ಕೂಡಿದ ಆಲಯವಿದು. ವೇಸರ ಶೈಲಿಯಲ್ಲಿದೆ. ಗರ್ಭಗೃಹದ ಗೋಡೆಗಳು ನಾಲ್ಕು ಗೋಡೆ ಗಂಬಗಳಿಂದ ಕೂಡಿವೆ.ದ್ವಾರದಲ್ಲಿ

ಎರಡು ಗೋಡೆಗಂಬಗಳಿದ್ದು, ನಾಸಿಕಾಲಂಕೃತ ಕಪೋತದಿಂದ ಕೂಡಿದ್ದು ಸಿಂಹಲಲಾಟವಿದೆ.

**ಪೋಟ್ಟು ಕೊಠಡಿ:**

ವರದರಾಜಸ್ವಾಮಿ ಅಲಯದ ದಕ್ಷಿಣದಲ್ಲಿ ಎರಡೂವರೆ ಅಡಿ ಎತ್ತರದ ತಳಹದಿಯಲ್ಲಿ 61 ಅಡಿ ಉದ್ದ 30 ಅಡಿ ಅಗಲದ ಮುಖ್ಯ ಅಡುಗೆಯ ಮನೆಯಿದೆ. ಆಲಯದ ಎಲ್ಲ ನೈವೇದ್ಯಗಳೂ ಅಡಿಗೆಯಾಗುವುದು ಇಲ್ಲಿಯೇ. ಈಗಲೂ ಇಲ್ಲಿ ಕೇವಲ ಮಣ್ಣಿನ ಪಾತ್ರೆಗಳು ಬಳಕೆಯಲ್ಲಿವೆ. ಬಾಗಿಲಿನಿಂದ ಒಳ ಹೊಕ್ಕರೆ ಒಂದು ಕಿರಿದಾದ ಮಂದಿರದಲ್ಲಿ ಮಂಡಪಲ್ಲಿನಾಚ್ಚಿಯಾರ್ ಎಂಬ ಬಕುಳಾದೇವಿಯ ವಿಗ್ರಹವಿರುವುದು. ಈಕೆ ಶ್ರೀನಿವಾಸನ ತಾಯಿಯಾಗಿದ್ದು ಅಡುಗೆಯ ಮನೆಯಲ್ಲಿನ ಆಗುಹೋಗುಗಳನ್ನು ನೋಡಿಕೊಳ್ಳುವಳೆಂಬ ಪ್ರತೀತಿಯಿದೆ.

**ಬಂಗಾರದ ಬಾವಿ:**

ಪೋಟ್ಟು ಕೋಣೆಯ ಈಚೆಗೆ ಅಂಗಳದಲ್ಲಿ ಬಂಗಾರದ ಬಾವಿ ಎಂದು ಪ್ರಸಿದ್ಧವಾಗಿರುವ ಬಾವಿಯಿದೆ. ಆಲಯಕ್ಕೂ ಅಲ್ಲಿನ ಅಡುಗೆ ಮನೆಗೂ ಬೇಕಾಗುವ ನೀರನ್ನು ಇಲ್ಲಿಂದ ಕಲ್ಲಿನ ಕಾಲುವೆಗಳ ಮೂಲಕ ಹರಿಯುವಂತೆ ಮಾಡಲಾಗಿದೆ. ಪವಿತ್ರವಾದ ಈ ಬಾವಿಯ ಸ್ಥಳವು ಆಗಮನಿರ್ದೇಶಿತವಾದದ್ದು. ಇಲ್ಲಿನ ನೀರು ಸರಬರಾಜು ಪದ್ಧತಿ, ಅಂದಿನ ವಿಜಯನಗರದ ರಾಜಧಾನಿ ಹಂಪೆಯಲ್ಲಿನ ನೀರಿನ ಸರಬರಾಜು ವ್ಯವಸ್ಥೆಯನ್ನು ನೆನಪಿಗೆ ತರುತ್ತದೆ. ಈಗ ಬಳಕೆಯಲ್ಲಿದೆ ವಿಜಯನಗರ ಸಾಮ್ರಾಜ್ಯ ಕಾಲದ ಅಪೂರ್ವ ಪದ್ಧತಿಯಿದು.(ಈಗ ಈ ಬಾವಿಯ ನೀರನ್ನು ಬಳಸಲಾಗುತ್ತಿಲ್ಲ.ಇಲ್ಲಿನ ನೀರನ್ನು ಶುದ್ಧೀಕರಿಸುವ ಕಾರ್ಯ ಇದೀಗ ನಡೆದಿದೆ - ಅನುವಾದಕ.)

**ಕಲ್ಯಾಣ ಮಂಟಪ:**

ವಿಮಾನ ಪ್ರದಕ್ಷಿಣಾ ಪಥದಲ್ಲಿ ಬಂಗಾರದ ಬಾವಿಯಿಂದ ಮುಂದುವರಿದರೆ ಎಡಕ್ಕೆ ನೈಋತ್ಯದ ಮೂಲೆಯಲ್ಲಿ ತನ್ನ ಶಿಲ್ಪಸೌಂದರ್ಯದಿಂದ ಖ್ಯಾತವಾಗಿರುವ ಕಲ್ಯಾಣ ಮಂಟಪವಿದೆ. 80 ಅಡಿ ಉದ್ದ ಹಾಗೂ 36 ಅಡಿ ಅಗಲವಿರುವ ಈ ಮಂಟಪವು ವಾಸ್ತುಶಿಲ್ಪದ ವಿವರದಲ್ಲಿ ಹೊರಗಡೆ ಇರುವ ತಿರುಮಲರಾಯ ಮಂಟಪವನ್ನು ಹೋಲುತ್ತದೆ. ಇದರ ಪಶ್ಚಿಮದ ಕೋಣೆಯಲ್ಲಿ ಕಪ್ಪುಗ್ರಾನೈಟ್ ಶಿಲೆಯಿಂದ ಮಾಡಿದ ಒಂದು ಚಿಕ್ಕ ಅಂತರ್ ಮಂಟಪವಿದ್ದು ಇದರ ನಾಲ್ಕು ಮೂಲೆಯಲ್ಲೂ, ಮೂರು ಮೂರು ಒಳಗಂಬಗಳನ್ನು ಹೊಂದಿದ ನಾಲ್ಕು ಕಂಬಗಳಿವೆ. ಇದರ ಹಿಂದೆ ಎತ್ತರವಾದ ಯಾಗಶಾಲೆಯಿದೆ.

ಇಲ್ಲಿನ ಕಂಬಗಳು ವೈವಿಧ್ಯಮಯವಾಗಿ ಚೌಕಾಕಾರ ಹಾಗೂ ಷಡ್ಭುಜಾಕಾರದಲ್ಲಿದ್ದು ಕುಸುರಿ ಕೆಲಸದ ಬೋದಿಗೆಗಳನ್ನು ಹೊಂದಿವೆ. ನಾಲ್ಕು ಕಂಬಗಳ ಒಳ ಮಂಟಪವು ಕಪ್ಪು ಶಿಲೆಯಲ್ಲಿ ಅತ್ಯಂತ ನಯವಾದ ಕುಸುರಿ ಕೆಲಸವನ್ನು ಪ್ರಕಟಿಸಿದೆ. ಮೇಲು ಛಾವಣಿಯಲ್ಲಿ ಕಿಕ್ಕಿರಿದ ನೃತ್ಯಗಾರ್ತಿಯರು, ಕಂಬಗಳ ಎಲ್ಲ ಮುಖಗಳಲ್ಲೂ ತುಂಬಿರುವ ಕಿರು ಶಿಲ್ಪಗಳೂ ಒಂದು ರೀತಿಯ ಶಿಲ್ಪಮಾಧುರ್ಯವನ್ನುಂಟು ಮಾಡಿದೆ. ಹೊಯ್ಸಳರ ಕಾಲದ ಪ್ರಸಿದ್ಧ ಕೆತ್ತನೆಯಿಂದ ಪ್ರಭಾವಿತವಾಗಿರುವಂತಿದೆ- ಇಲ್ಲಿನ ಶಿಲ್ಪದ ಕುಸುರಿ ಗೆಲಸ.

ಕಲ್ಯಾಣ ಮಂಟಪವೂ ಅದರೊಳಗಿನ ಅಂತರ್ ಮಂಟಪವೂ ಅಸಂಖ್ಯ ಉಬ್ಬು ಶಿಲ್ಪಗಳನ್ನು ಹೊಂದಿದ್ದು, ತ್ರಿವಿಕ್ರಮ, ಸುದರ್ಶನ, ಷೋಡಶಕರ ನರಸಿಂಹ,ಹಯಗ್ರೀವ-ಮೊದಲಾದವರ ಶಿಲ್ಪಗಳು ಅತ್ಯುತ್ತಮವಾಗಿವೆ.

ಬ್ರಹ್ಮೋತ್ಸವದ ಧ್ವಜಾರೋಹಣದಿಂದ ಮೊದಲುಗೊಂಡು ದೀಪಾವಳಿಯವರೆಗೆ ಮಲೆಯಪ್ಪಸ್ವಾಮಿಯು ಗರ್ಭಗುಡಿಯನ್ನು ಬಿಟ್ಟು ಇಲ್ಲಿನ ಮಂಟಪದಲ್ಲಿರುತ್ತಾನೆ. ಇದರಂತೆಯೇ ಡಿಸೆಂಬರ್ ತಿಂಗಳಲ್ಲಿನ 20 ದಿನ ನಡೆಯುವ ಅಧ್ಯಯನೋತ್ಸವ ಕಾಲದಲ್ಲೂ ಇಲ್ಲೇ ನೆಲೆಸುವನು. ಉತ್ಸವಗಳಲ್ಲಿನ ಆಸ್ಥಾನಗಳೂ ಇಲ್ಲಿಯೇ ನಡೆಯುತ್ತವೆ.(ಈಗ ಈ ಕಲ್ಯಾಣಮಂಟಪದಲ್ಲಿ ಹುಂಡಿಯ ಚಿಲ್ಲರೆಯನ್ನು ಬೇರ್ಪಡಿಸಿ ಎಣಿಸುವ ಪರಕಾಮಣಿ ನಡೆಯುತ್ತದೆ. ಭಕ್ತರು ಸ್ವಾಮಿದರ್ಶನ ಪಡೆದನಂತರ ತೀರ್ಥ ಶಠಾರಿಯನ್ನು ಪಡೆದು ಇದನ್ನು ಸುತ್ತಿಕೊಂಡು ಪ್ರದಕ್ಷಿಣಾಪಥದ ಹಿಂಭಾಗಕ್ಕೆ ಬರುವಾಗ ಈ ಪರಕಾಮಣಿಯನ್ನೂ ನೋಡಬಹುದು-ಅನುವಾದಕ)

**ರಾಮಾನುಜ ಮಂದಿರ:**

ವಿಮಾನ ಪ್ರದಕ್ಷಿಣಾಪಥದಲ್ಲಿನ ಉತ್ತರದಲ್ಲಿನ ಸಂಕೀರ್ತನ ಭಂಡಾರದ ಬದಿಯಲ್ಲಿ ಶ್ರೇಷ್ಠ ಶ್ರೀವೈಷ್ಣವ ಆಚಾರ್ಯ ಪುರುಷರಾದ ರಾಮಾನುಜರ ಮಂದಿರವಿದೆ. ಈ ಆಲಯದಲ್ಲಿ ಯಾವುದೇ ಸ್ವತಂತ್ರವಾದ ಪೂಜೆ ನಡೆಯದಿದ್ದರೂ ಮೂಲವರಿಗೆ ಸಮರ್ಪಿಸಿದ ಎಲ್ಲ ಪ್ರಸಾದಗಳಲ್ಲಿಯೂ ಪ್ರಥಮವಾದ ಒಂದು ಪಾಲು ಈ ಆಲಯದಲ್ಲಿ ಆಚಾರ್ಯರಿಗಾಗಿ ನೀಡಲಾಗುವುದು. ವಿಶೇಷ ಉತ್ಸವಗಳ ದಿನಗಳಲ್ಲಿ ಆಚಾರ್ಯರಿಗೆ ವಿಶೇಷವಾದ ಗೌರವವನ್ನು ಸಮರ್ಪಿಸಲಾಗುವುದು,ಕಾರಣವೆಂದರೆ ಈ ಆಲಯದ ಪೂಜಾ ವ್ಯವಸ್ಥೆಯನ್ನು ತಿದ್ದಿ ನೇರ್ಪುಗೊಳಿಸಿದವರಲ್ಲಿ ಆಚಾರ್ಯರು ಬಹುಮುಖ್ಯವಾಗಿರುವುದು.

ರಾಮಾನುಜರ ಮಂದಿರದ ವಾಸ್ತುಶಿಲ್ಪವನ್ನು ಗಮನಿಸಿದರೆ ಇದನ್ನು ಹದಿಮೂರನೇ ಶತಮಾನದಲ್ಲಿ ನಿರ್ಮಿಸಿರ

# ಹಂಸವಾಹನ



ಹಂಸವಾಹನ ಕ್ರತುಧ್ವಂಸಿ ಸುಮನಸೋ ತ್ತಂಸ
ಕೃಶಾನು ಪಾಪಿಗಳ ಹಿಂಸೆ ಪಡಿಸುವ ಪುಂಸ ರಕ್ಕಸ ಘಾತಿ
ಅಂಶಮಾಲಿ ಸೋಮ ಹಂಸ ಮುನಿ ಅಲ್ಲಲ್ಲೆ ನಿಂದು
ಸಂಸೇವ್ಯ ಮಾಡುತ್ತ ಸಮ್ಮೊಹವಾಗಿಹರು ಕಂಸಾರಿ ತ್ರಿಗುಣಾತೀತ
ಹತ್ತವತಾರದ ಹರಿಯೆ ಘನಸಿರಿಯೆ ಮತ್ತೊಬ್ಬರನು ಹೀಗೆ ಕರೆಯೆ
ಭೃತ್ಯರ ಸಂಗಡ ತಿರುಗುವ ಮರಿಯೆ ಎನ್ನ ಹತ್ತಿರದಲಿ ಆಡುವ ಮರಿಯೆ
ಚಿತ್ತದೊಲ್ಲಭ ನಮ್ಮ ವಿಜಯ ವಿಠಲರೇಯ ಎತ್ತ ನೋಡಲು ನಿನಗೆ ಸರಿಯೆ
ಅತ್ತಿತ್ತ ಪೋಗದೆ ಸಾಗಿ ಬರುವುದೊ ಎನ್ನ ತ್ತಲು ವೆಂಕಟ ಧೊರಿಯೆ

- ವಿಜಯದಾಸರು

ಬಹುದೆಂದು ತೋರುತ್ತದೆ. ಪ್ರವೇಶ ದ್ವಾರದ ಪಕ್ಕದ ಗೋಡೆಯ ಮೇಲೆ ಪಾಂಡ್ಯರಾಜ ಚಿಹ್ನವಾದ ಎರಡು ಮೀನು ಹಾಗೂ ಗಾಳವನ್ನು ಕೆತ್ತಲಾಗಿದೆ. ಪ್ರಾಯಶಃ ಪಾಂಡ್ಯರಾಜರ ಅಧೀನ ನಾಗಿ ಯಾದವರಾಯನು ಆಳುತ್ತಿರುವಾಗ ಈ ಮಂದಿರದ ನಿರ್ಮಾಣವಾಗಿರಬೇಕು. ಆದರೆ ಮಂದಿರದ ಮುಂದಿನ ಮುಖ ಮಂಟಪವನ್ನು ಒಂದೆರಡು ಶತಮಾನಗಳ ನಂತರ ವಿಜಯ ನಗರದರಸರ ಕಾಲದಲ್ಲಿ ನಿರ್ಮಿಸಿರಬಹುದು. ಆಚಾರ್ಯ ರಾಮಾನುಜರನ್ನು ಪೂಜಾರ್ಹರನ್ನಾಗಿಸಿ ಅವರಿಗಾಗಿ ಒಂದು ಮಂದಿರದ ನಿರ್ಮಾಣವಾದದ್ದು, ಅವರು ತಿರುಮಲೆ-ತಿರುಪತಿ ಗಳಿಗೆ ಮಾಡಿದ ಅತ್ಯಂತ ಹೆಚ್ಚಿನ ಸೇವೆಯಿಂದಲೇ ಎನ್ನ ಬಹುದು. ಪರಂಪರೆಯ ಪ್ರಕಾರ ತಿರುಮಲೆ ತಿರುಪತಿಗಳಲ್ಲಿನ ರಾಮಾನುಜಮಂದಿರಗಳ ನಿರ್ಮಾಣ ಈ ಶ್ರೇಷ್ಠ ಆಚಾರ್ಯರು ವೈಕುಂಠ ವಾಸಿಗಳಾದ ಸ್ವಲ್ಪಕಾಲದಲ್ಲಿಯೇ ನಡೆಯಿತು. ರಾಮಾನುಜರಿಗೆ ಸ್ವಾಮಿ ತೀರ್ಥವನ್ನೂ ಪ್ರಸಾದವನ್ನೂ ನಿತ್ಯವೂ ನೀಡುವ ವೈಖಾನಸ ಅರ್ಚಕರ ಹಾದಿಯಲ್ಲಿ ರಾಮಾ ನುಜಾಚಾರ್ಯರ ಪಾಂಚರಾತ್ರಾಗಮ ಪೂಜಾಪದ್ಧತಿಯೇನೂ ಅಡ್ಡಬರಲಿಲ್ಲ.

**ನರಸಿಂಹಸ್ವಾಮಿ ಆಲಯ:**

ವಿಮಾನ ಪ್ರದಕ್ಷಿಣಾಪಥದ ಈಶಾನ್ಯ ಮೂಲೆಯಲ್ಲಿ ಎತ್ತರವಾದ ತಳಗಟ್ಟಿನಲ್ಲಿ ಕಂಬಗಳಿರುವ ಅಂಗಳದಲ್ಲಿ ಈ ಆಲಯವಿದೆ. ಒಂದು ನಯವಾದ ಕಲ್ಲಿನ ಮಂಟಪದಲ್ಲಿದ್ದು ಪ್ರಾಯಶಃ 15 ನೇ ಶತಮಾನದಲ್ಲಿ ನಿರ್ಮಿತವಾಗಿರಬೇಕು. ಇಲ್ಲಿನ ಕಂಬಗಳ ಮೇಲೆ ನೃತ್ಯದ ಆಸಕ್ತಿದಾಯಕ ನಮೂನೆ ಗಳನ್ನು ಕಾಣಬಹುದು.

ಕ್ರಿ.ಶ.1469 ರ ಒಂದು ಶಾಸನದಲ್ಲಿ (ಅತಿ ಪ್ರಾಚೀನ ವಾದ ಉಲ್ಲೇಖ) ಈ ದೈವವನ್ನು ಆಳಗಿಯಸಿಂಗರ್ ಎಂದು ಕರೆದು ಇವರಿಗೆ ಮಾಡಿದ ನಿವೇದನೆಯ ಬಗ್ಗೆ ಹೇಳಲಾಗಿದೆ. (70-ಎ.ತಿ.ತಿ.) ಇನ್ನೊಂದು ಶಾಸನವು ಧನುರ್ಮಾಸದ ಮುವತ್ತು ದಿನಗಳಲ್ಲಿ, ವಸಂತ ಪಂಚಮಿಯಂದು,ಶ್ರೀರಾಮ ನವಮಿಯ ದಿನದಂದು ಹಾಗೂ ತಿರುಕ್ಕೊಡಿ ತಿರುನಾಳ್ ಉತ್ಸವದ ಏಳನೆಯ ದಿನದಂದು ಮಾಡತಕ್ಕ ನಿವೇದನೆಯ ಬಗ್ಗೆ ತಿಳಿಸುತ್ತದೆ.(280-ತಿ.ತಿ.)ಇನ್ನೊಂದು ವಸಂತ ಪಂಚ ಮಿಯ ನೈವೇದ್ಯದ ಬಗ್ಗೆ ಹೇಳುತ್ತದೆ. (599-ತಿ.ತಿ.) ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಈ ದೇವರಿಗೆ ತಿರುಮಂಜ ನಕ್ಕಾಗಿ ಹಾಗೂ ಪಂಗುಣಿ ಅಮಾವಾಸ್ಯೆ ಮತ್ತು ವಸಂತ ಪೂರ್ಣಿಮೆಯ ದಿನಗಳಲ್ಲಿ ನಿವೇದನಕ್ಕೆ ಒದಗಿಸಿದ.(70 ತಿ.ತಿ.)

ಮೊದಲಿಗೆ ಮತ್ತೆರಡು ಕೋಣೆಗಳು-ಚಂದನ ಕೋಣೆ ಹಾಗೂ ಪರಿಮಳ ಕೋಣೆ-ಇದ್ದವಾದರೂ ಈಗ ಇವೆರಡೂ ಇಲ್ಲ.

ಮುಂದುವರೆಯುತ್ತದೆ.

# ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವಗಳು

- ಡಾ|| ಐ.ಎಲ್.ಎಸ್. ಚಂದ್ರಶೇಖರ್
ಅನುವಾದ : ಎಸ್. ವಾದಿರಾಜ



## 04-10-2024 ರಿಂದ 12-10-2024 ರ ವರೆಗೆ

ಲೋಕನಾಯಕ... ನಿತ್ಯಕಲ್ಯಾಣಚಕ್ರವರ್ತಿಯಾದ ತಿರುಮಲೆಯ ಶ್ರೀವೇಂಕಟೇಶ್ವರಸ್ವಾಮಿಗೆ ವರ್ಷಪೂರ್ತಿ ಅನೇಕ ಸೇವೆಗಳು, ಅನೇಕ ಉತ್ಸವಗಳು. ಹೀಗೆ ತಿರುಮಲೇಶನಿಗೆ ಎಷ್ಟು ಸೇವೆಗಳು ನಡೆದರೂ, ಎಷ್ಟು ಉತ್ಸವಗಳನ್ನು ವೈಭವದಿಂದ ನೆರವೇರಿಸಿದರೂ ಅತ್ಯಂತ ಸಂಭ್ರಮದಿಂದ ನಡೆಯುವುದು ಬ್ರಹ್ಮೋತ್ಸವ ಎಂದರೆ ತಪ್ಪಾಗಲಾರದು-ಬ್ರಹ್ಮದೇವನು ತನ್ನ ಸ್ವಹಸ್ತಗಳಿಂದ ನೆರವೇರಿಸಿದನೆಂದು ಹೇಳಲಾಗುವ ಈ ಉತ್ಸವಗಳಲ್ಲಿ ಪ್ರತಿಯೊಂದು ಹೆಜ್ಜೆಯೂ ಪ್ರತ್ಯೇಕವಾದುದೇ ಆಗಿದೆ. ಪ್ರತಿ ಸೇವೆಯೂ ವೈಭವೋಪೇತವಾದುದೇ ಆಗಿದೆ.

ವೇಂಕಟಾಚಲ ಪರ್ವತದ ಮೇಲೆ ಪುಷ್ಕರಿಣಿಯ ತೀರದಲ್ಲಿ ಕನ್ಯಾ-ಭಾದ್ರಪದ ಮಾಸದಲ್ಲಿ ಏಕಾದಶಿಯಂದು ಸೋಮವಾರ ಶ್ರವಣಾ ನಕ್ಷತ್ರ ಸಿದ್ಧಿಯೋಗದ ಸಮಯದಲ್ಲಿ ಶ್ರೀನಿವಾಸನು ವೇಂಕಟಾದ್ರಿಯ ಮೇಲೆ ಅವತರಿಸಿದನೆಂದು ಪುರಾಣಗಳಲ್ಲಿ ಹೇಳಲ್ಪಟ್ಟಿದೆ!!

ವೈಕುಂಠವನ್ನು ಬಿಟ್ಟು ಲೋಕಕಲ್ಯಾಣಕ್ಕಾಗಿ, ಪ್ರಜೆಗಳನ್ನು ಸಂರಕ್ಷಿಸುವುದಕ್ಕಾಗಿ ವೇಂಕಟಾದ್ರಿಯ ಮೇಲೆ ನೆಲೆಸಿರುವ ಶ್ರೀನಿವಾಸನನ್ನು ಹುಡುಕುತ್ತಾ ಸೃಷ್ಟಿಕರ್ತನಾದ ಬ್ರಹ್ಮದೇವನು ಇತರ ದೇವತೆಗಳೊಂದಿಗೆ ವೇಂಕಟಾದ್ರಿಯನ್ನು ತಲುಪಿ ಸ್ವಾಮಿಯನ್ನು ದರ್ಶಿಸಿ ಆನಂದಿಸಿದರು. ಈ ಸಮಯದಲ್ಲಿ,

"ಧ್ವಜಾರೋಹಣ ಪೂರ್ವಶ್ಚ ಕಾರ್ಯ
ಸ್ತವ ಮಹೋತ್ಸವಃ
ಸಚ ತ್ವಯಾ ಮಹಾಭೂಮಾಸ್ ಅಂಗೀಕಾರ್ಯಃ
ಶ್ರಿಯಾಸಹ" (ವರಾಹ ಪುರಾಣ)

"ಓ ಶ್ರೀಯಪತೀ! ಧ್ವಜಾರೋಹಣ ಪೂರ್ವಕವಾಗಿ ನಿನಗೆ ಮಹೋತ್ಸವವನ್ನು ನೆರವೇರಿಸಬೇಕೆಂದು ಸಂಕಲ್ಪಿಸಿಕೊಂಡಿದ್ದೇವೆ. ಮಹಾಪ್ರಭೂ! ಉತ್ಸವವನ್ನು ನೀನು ಶ್ರೀದೇವಿಯೊಂದಿಗೆ ಅನುಗ್ರಹಿಸಬೇಕೆಂದು ಬ್ರಹ್ಮದೇವನು ಶ್ರೀನಿವಾಸನನ್ನು ಪ್ರಾರ್ಥಿಸಿದನು. ಬ್ರಹ್ಮದೇವನ ಪ್ರಾರ್ಥನೆಯನ್ನು ಮನ್ನಿಸಿದ ಸ್ವಾಮಿಯು "ತಥಾಸ್ತು" ಎಂದು ಹೇಳಿದ. ನಂತರ ಬ್ರಹ್ಮದೇವನು ಸಂಭ್ರಮದಿಂದ ಎಲ್ಲಾ ದೇವತೆಗಳಿಂದ ಒಡಗೂಡಿ ಈ ಉತ್ಸವವನ್ನು ನಿರ್ವಹಿಸಿದನು. ಆದ್ದರಿಂದ ಈ ಉತ್ಸವವನ್ನು "ಬ್ರಹ್ಮೋತ್ಸವ" ಎಂದು ಕರೆಯುತ್ತಾರೆ. ಅಂದಿನಿಂದ ಇಂದಿನವರೆಗೂ ಈ ಉತ್ಸವಗಳನ್ನು ಬ್ರಹ್ಮೋತ್ಸವವೆಂದೇ ನಿರ್ವಹಿಸಿದ್ದಾರೆ. ಹಾಗೇ ಬ್ರಹ್ಮಾಂಡವೆಲ್ಲಾ ಆನಂದಿಸುವಂತೆ ನಡೆಯುವ ಉತ್ಸವಗಳಾದ್ದರಿಂದ ಬ್ರಹ್ಮೋತ್ಸವಗಳೆಂದೂ ಕರೆಯುತ್ತಾರೆ.

ಈ ರೀತಿ ಮೊದಲಬಾರಿಗೆ ತಿರುಮಲೆಯ ಶ್ರೀನಿವಾಸನಿಗೆ ಬ್ರಹ್ಮೋತ್ಸವಗಳನ್ನು ಸ್ವತಃ ಸೃಷ್ಟಿ ಕರ್ತನೇ ನೆರವೇರಿಸಿದ್ದರಿಂದ ದೇವತೆಗಳೆಲ್ಲಾ ಆ ಉತ್ಸವಕ್ಕೆ ಹಾಜರಾದರು. ಈ ರೀತಿ ಪುರಾಣ ಕಾಲದಿಂದಲೂ ಉತ್ಸವಗಳು ನಡೆಯುತ್ತಿದ್ದರೂ, ಚಾರಿತ್ರಿಕ ಕಾಲದಲ್ಲಿ ಅನೇಕ ಚಕ್ರವರ್ತಿಗಳು, ಮಹಾರಾಜರು ಶ್ರೀವೇಂಕಟೇಶ್ವರನಿಗೆ ಈ ರೀತಿ ಉತ್ಸವಗಳನ್ನು ನಡೆಸುತ್ತಿ ದ್ದಾರೆ. ತಮ್ಮ ರಾಜ್ಯಾಭಿವೃದ್ಧಿ,ತಮ್ಮ ವಿಜಯಗಳನ್ನು ಆಚರಿಸುವ ಸಲುವಾಗಿ ಸ್ವಾಮಿಗೆ ಕೃತಜ್ಞತಾ ಪೂರ್ವಕವಾಗಿ ಈ ಉತ್ಸವಗಳನ್ನು



ನಡೆಸಿದಂತೆ ಹೇಳಲಾಗಿದೆ. ತಿರುಮಲೆ ತಿರುಪತಿಯಲ್ಲಿ ಲಭಿಸಿದ ಶಾಸನಗಳಲ್ಲಿ ಈ ಉತ್ಸವ ವಿಶೇಷಗಳನ್ನು ತಿಳಿಸಲಾಗಿದೆ.

ಆಂಗ್ಲಶಾಸನದ ಪ್ರಕಾರ ಏಳನೆಯ ಶತಮಾನಕ್ಕಿಂತಲೂ ಹಿಂದೆ ತಿರುಮಲೆಯಲ್ಲಿ ಧ್ವಜಾರೋಹಣ, ಧ್ವಜಾವರೋಹಣ ಕಾರ್ಯಕ್ರಮಗಳನ್ನು ಮಾತ್ರಾ ನಿರ್ವಹಿಸಿ ಉಳಿದ ಉತ್ಸವಗಳನ್ನು ತಿರುಚಾನೂರಿನಲ್ಲಿ ನಡೆಸುತ್ತಿದ್ದರು.

10ನೆ ಶತಮಾನಕ್ಕೆ ಮುಂಚೆ ಪಲ್ಲವ ರಾಣಿಯಾದ ಸಾಮವಾಯಿ,"ಮನವಾಳ ಪೆರುಮಾಳ್" ಎಂಬ ಹೆಸರಿನಿಂದ ಬೆಳ್ಳಿಯ ಉತ್ಸವ ಮೂರ್ತಿಯನ್ನು ಬಹುಕರಿಸಿದಳು. ಈ ರಾಣಿಯನ್ನು ಪೆರುಂದೇವಿ ಎಂದೂ ಕರೆಯುತ್ತಾರೆ. ಈ ಉತ್ಸವ ಮೂರ್ತಿಯನ್ನೇ ಶ್ರೀಭೋಗಾಶ್ರೀನಿವಾಸ ಮೂರ್ತಿಯೆಂದು ಕರೆಯುತ್ತಾರೆ. ಪೆರಟಾಸಿ ತಿಂಗಳಿನಲ್ಲಿ ನಡೆಯುವ ಬ್ರಹ್ಮೋತ್ಸವಗಳಿಗೂ ಮೊದಲು ಈ ಉತ್ಸವ ಮೂರ್ತಿಯನ್ನು ಸನ್ನಿಧಿಯ ಬೀಧಿಯಲ್ಲಿ ಮೆರವಣಿಗೆ ಮಾಡುವ ಸಂಪ್ರದಾಯವನ್ನು ರಾಣಿಯು ಏರ್ಪಡಿಸಿದಂತೆ ಹೇಳಲಾಗಿದೆ. ಈ ವಿಗ್ರಹವನ್ನು ತಯಾರು ಮಾಡಿಸಿ ಬಹುಕರಿಸಿದ ನಂತರವೇ ತಿರುಮಲೆಯಲ್ಲಿ ಪೂರ್ತಿಯಾಗಿ ಉತ್ಸವಗಳು ಪ್ರಾರಂಭವಾದುದೆಂದು ಹೇಳುತ್ತಾರೆ.

ದಕ್ಷಿಣ ಆಂಧ್ರ ಮತ್ತು ಕಂಚಿಯನ್ನು ಆಳುತ್ತಿದ್ದ ನೆಲ್ಲೂರು ಚೋಡರ ತೆಲುಗು ಚೋಳರಾಜನು ತ್ರಿಭುವನ ಚಕ್ರವರ್ತಿಯೆಂದು ಪ್ರಸಿದ್ಧಿ ಪಡೆದಿದ್ದ ವಿಜಯಗೊಂಡ ಗೋಪಾಲನು (1248- 1263) 1254 ನೆಯ ವರ್ಷದಲ್ಲಿ ಚೈತ್ರ ಮಾಸದಲ್ಲಿ ಉತ್ಸವಗಳನ್ನು ನಿರ್ವಹಿಸಿದರು.

ತಿರುವೇಂಕಟನಾಥ ಯಾದವ ರಾಯರು (1321-1337) ತನ್ನ ರಾಜ್ಯಾಡಳಿತ ಕಾಲದಲ್ಲಿ 1328 ನೆಯ ವರ್ಷದಲ್ಲಿ ಆಷಾಢ ಮಾಸದಲ್ಲಿ "ಆಡಿ ತಿರುನಾಳ್ಳು"ಎಂಬ ಹೆಸರಿನಿಂದ ಉತ್ಸವಗಳನ್ನು ನಿರ್ವಹಿಸಿದ. ಇಲ್ಲತ್ತೂರುನಾಡಿನಲ್ಲಿನ ಪೊಂಗಲ್ಲೂರು ಗ್ರಾಮದ ಆದಾಯದಲ್ಲಿನ ಅರ್ಧಭಾಗವನ್ನು ಶ್ರೀಸ್ವಾಮಿಗೆ ಸರ್ವ ಮಾನ್ಯವಾಗಿ ದಾನ ಮಾಡಿದ. ಈ ದಾನವನ್ನು "ಆಣಿ" ತಿಂಗಳಿನಲ್ಲಿ ನಡೆಯುವ ಬ್ರಹ್ಮೋತ್ಸವಕ್ಕೆ ಬೇಕಾಗುವ ಖರ್ಚಿಗಾಗಿ ಉಪಯೋಗಿಸಿದರು.

ವಿಜಯನಗರದ ಸಾಮ್ರಾಜ್ಯವನ್ನು ಪರಿಪಾಲಿಸಿದ ಸಂಗಮ ವಂಶದ ಪಾಲಕನಾದ ಎರಡನೆಯ ಹರಿಹರ ರಾಯರು (1379-1399) ತಮ್ಮ ಪಾಲನೆಯ ಕಾಲದಲ್ಲಿ 1388 ನೆಯ ವರ್ಷದ ಜನವರಿ 18ನೆಯ ತಾರೀಖಿನೆಂದು ಪುಂದೋಡು ಎಂಬ ಗ್ರಾಮವನ್ನು ಸ್ವಾಮಿಗೆ ಸಮರ್ಪಿಸಿ ಆ ಗ್ರಾಮದಿಂದ ಲಭಿಸುವ ಆದಾಯದಿಂದ ಪ್ರತಿವರ್ಷವೂ "ಮಾಶಿ" ತಿಂಗಳಿನಲ್ಲಿ ಬ್ರಹ್ಮೋತ್ಸವಗಳನ್ನು ನಡೆಸುವ ಏರ್ಪಾಟು ಮಾಡಿದರು.

ವಿಜಯನಗರವನ್ನು ಆಳಿದ ಸಂಗಮ ವಂಶದ ಪಾಲಕರಾದ ಎರಡನೆಯ ದೇವರಾಯರು (1419-1444) ತನ್ನ ಆಳ್ವಿಕೆಯ ಕಾಲದಲ್ಲಿ 1429 ನೆಯ ವರ್ಷ ಡಿಸೆಂಬರ್ ತಿಂಗಳಿನ 5 ನೆಯ ತಾರೀಖು ತಿರುಮಲೆಯ ಕ್ಷೇತ್ರಕ್ಕೆ ಬಂದು, ಶ್ರೀವೇಂಕಟೇಶ್ವರ ಸ್ವಾಮಿಯನ್ನು ದರ್ಶಿಸಿ ಆಶ್ವಯುಜ ಮಾಸದಲ್ಲಿ ಪುನರ್ವಸು ನಕ್ಷತ್ರದಿಂದ ಪ್ರಾರಂಭಿಸಿ ಸ್ವಾತಿ ನಕ್ಷತ್ರದವರೆಗೂ ಒಂಭತ್ತು ದಿನಗಳ ಕಾಲ ಬ್ರಹ್ಮೋತ್ಸವಗಳನ್ನು ನಡೆಸುವ ಏರ್ಪಾಟು ಮಾಡಿದರು.

ಈ ರೀತಿ ವಿವಿಧ ಪಾಲಕರು ಏರ್ಪಾಟು ಮಾಡಿದ್ದರು. ಹಾಗೆಯೇ ವಿಜಯನಗರ ಸಾಮ್ರಾಜ್ಯವನ್ನು ಪರಿಪಾಲಿಸಿದ ಸಾಳುವ ವಂಶದ ಪಾಲಕನಾದ ಸಾಳುವ ನರಸಿಂಹರಾಯರ ಕಾಲದಲ್ಲಿ ವರ್ಷಕ್ಕೆ ಏಳುಬಾರಿ ಬ್ರಹ್ಮೋತ್ಸವಗಳು ನಡೆಯುತ್ತಿದ್ದುವೆಂದು ಚರಿತ್ರೆಯ ಮೂಲಕ ತಿಳಿದುಬರುತ್ತಿದೆ.

ವಿಜಯನಗರ ಸಾಮ್ರಾಜ್ಯವನ್ನು ಪಾಲಿಸಿದ ಸಾಹಿತಿ ಸಮರಾಂಗಣ ಸಾರ್ವಭೌಮ ಶ್ರೀಕೃಷ್ಣದೇವರಾಯರು (1509-1529) ಏಳು ಬಾರಿ ತಿರುಮಲೆಯ ಕ್ಷೇತ್ರವನ್ನು ದರ್ಶಿಸಿದರು. 1513 ನೆಯ ವರ್ಷದಲ್ಲಿ ಮೇ ತಿಂಗಳ 2 ನೆಯ ತಾರೀಖಿನಂದು ಎರಡ

ನೆಯ ಬಾರಿ, ಅದೇ ವರ್ಷದ ಜೂನ್ ತಿಂಗಳ 13 ನೆಯ ತಾರೀಖಿನಂದು ಮೂರನೆಯ ಬಾರಿ, ತಿರುಮಲೆಯ ಕ್ಷೇತ್ರವನ್ನು ದರ್ಶಿಸಿದರು. ಈ ಸಮಯದಲ್ಲಿ ಅನೇಕ ಕಾಣಿಕೆಗಳನ್ನು ಶ್ರೀನಿವಾಸನಿಗೆ ಅರ್ಪಿಸುವುದರೊಂದಿಗೆ, ಅನೇಕ ಗ್ರಾಮಗಳನ್ನು ಸ್ವಾಮಿಗೆ ಸಮರ್ಪಿಸಿ ತನ್ನ ತಂದೆತಾಯಿಗಳ ಆತ್ಮೋದ್ಧಾರಕ್ಕಾಗಿ ಪ್ರತಿ ವರ್ಷ ತೈಮಾಸದಲ್ಲಿ ಉತ್ಸವವು ನಡೆಯುವಂತೆ ಏರ್ಪಾಟು ಮಾಡಿದಂತೆ ಚರಿತ್ರೆಯ ಆಧಾರಗಳು ಕಂಡು ಬರುತ್ತಿವೆ.

ಶ್ರೀ ಕೃಷ್ಣದೇವರಾಯನ ನಂತರ ಅಚ್ಯುತದೇವರಾಯ ತಿರುಮಲೆಯ ಆಲಯದಲ್ಲೇ 1529 ನೆಯ ವರ್ಷದಲ್ಲಿ ವಿಜಯ ನಗರ ರಾಜ್ಯದ ಚಕ್ರವರ್ತಿಯಾಗಿ ಪಟ್ಟಾಭಿಷೇಕ ಮಾಡಿಸಿ ಕೊಂಡನಂತೆ. ನಂತರ ಆತ 1530 ನೆಯ ವರ್ಷದಲ್ಲಿ ಅಚ್ಯುತ ರಾಯನು ಬ್ರಹ್ಮೋತ್ಸವದ ಹೆಸರಿನಲ್ಲಿ ಬ್ರಹ್ಮೋತ್ಸವವನ್ನು ನೆರ ವೇರಿಸಿದನಂತೆ.

ಈ ರೀತಿ 1583 ನೆಯ ವರ್ಷದ ವೇಳೆಗೆ ವರ್ಷಕ್ಕೆ ಹೆಚ್ಚೂ ಕಡಿಮೆ ಪ್ರತಿ ತಿಂಗಳೂ ಬ್ರಹ್ಮೋತ್ಸವಗಳನ್ನು ನಡೆಸುತ್ತಿದ್ದರಂತೆ, ಆದರೆ ಕಾಲಗರ್ಭದಲ್ಲಿ ರಾಜ್ಯಗಳು,ರಾಜರು ಕಳೆದು ಹೋಗಿದ್ದ ರಿಂದ ಉತ್ಸವಗಳೂ ನಿಂತು ಹೋದುವು.

ಕೊನೆಗೆ ಬ್ರಹ್ಮದೇವನು ಪ್ರಾರಂಭಿಸಿದ ಬ್ರಹ್ಮೋತ್ಸವ ಮಾತ್ರಾ ಹಾಗೇ ವೈಭವದಿಂದ ಪ್ರತೀವರ್ಷವೂ ನಡೆಯುತ್ತಿದೆ. ಸಾಧಾರಣವಾಗಿ ಯಾವ ದೇವಾಲಯದಲ್ಲಾದರೂ ಯಾವು ದಾದರೂ ಒಂದು ತಿಂಗಳಿನಲ್ಲಿ ಒಂದು ಪ್ರತ್ಯೇಕವಾದ ತಿಥಿ ಯಂದು ಉತ್ಸವಗಳನ್ನು ನಿರ್ವಹಿಸುತ್ತಾರೆ. ಆದರೆ ತಿರುಮಲೆ ಯಲ್ಲಿ ಹಾಗಲ್ಲದೇ ಮುಕ್ತಾಯದ ತಿಥಿಯನ್ನು ಲೆಕ್ಕದಲ್ಲಿರಿಸಿಕೊಂಡು ಉತ್ಸವಗಳನ್ನು ನೆರವೇರಿಸುವುದು ವಿಶೇಷವಾಗಿದೆ. ಕನ್ಯಾ ಮಾಸದಲ್ಲಿ ಅಂದರೆ ಸೂರ್ಯನು ಕನ್ಯಾರಾಶಿಯಲ್ಲಿ ಸಂಚರಿಸು ವಂತಹಾ ಮಾಸ ಮತ್ತು ಶ್ರವಣಾ ನಕ್ಷತ್ರವು ಬರುವ ದಿನದಂದು ಅವಭೃತಸ್ನಾನವನ್ನು ನಿರ್ಧಾರಮಾಡಿ, ಅಂದರೆ ಚಕ್ರಸ್ನಾನದ ದಿನವನ್ನು ನಿರ್ಣಯಮಾಡಿ, ಆ ದಿನದಿಂದ ಒಂಭತ್ತು ದಿನಗಳ ಮೊದಲಿನಿಂದ ಉತ್ಸವಗಳನ್ನು ನಡೆಸುತ್ತಾರೆ. ಆದ್ದರಿಂದ ಬ್ರಹ್ಮೋ ತ್ಸವಗಳು ದಸರಾ ಹಬ್ಬದ ಸಮಯದಲ್ಲಿ ನಡೆಯುತ್ತದೆ. ಆದರೆ ಚಾಂದ್ರಮಾನದ ಪ್ರಕಾರ ಮೂರು ವರ್ಷಗಳಿಗೊಮ್ಮೆ ಅಧಿಕ ಮಾಸವು ಬರುತ್ತದೆ. ಆ ಸಮಯದಲ್ಲಿ ಕನ್ಯಾಮಾಸ ಭಾದ್ರಪದ ಮಾಸದಲ್ಲೇ ಬರುತ್ತದೆ. ಆದ್ದರಿಂದ ಭಾದ್ರಪದ ಮಾಸದಲ್ಲೇ ಬ್ರಹ್ಮೋತ್ಸವಗಳು ನಡೆಯುತ್ತವೆ. ಪುನಃ ಆಶ್ವೀಜ ಮಾಸದಲ್ಲಿ ದಸರಾ ಹಬ್ಬದ ಸಮಯದಲ್ಲಿ ಎಂದಿನಂತೆ ಬ್ರಹ್ಮೋತ್ಸವಗಳು ನಡೆಸುತ್ತಾರೆ. ಅಂದರೆ ಅಧಿಕಮಾಸ ಬರುವ ವರ್ಷದಲ್ಲಿ ಎರಡು ಬಾರಿ ಬ್ರಹ್ಮೋತ್ಸವಗಳು ನಡೆಯುತ್ತವೆ. ಮೊದಲ ಬಾರಿ ನಡೆ



ಯುವ ಬ್ರಹ್ಮೋತ್ಸವಗಳಿಗೆ ಸಾಲಕಟ್ಲ ಬ್ರಹ್ಮೋತ್ಸವ ಎಂದೂ, ದಸರಾ ಹಬ್ಬದ ಸಮಯದಲ್ಲಿ ನಡೆಯುವ ಉತ್ಸವಗಳಿಗೆ ನವ ರಾತ್ರಿ ಬ್ರಹ್ಮೋತ್ಸವಗಳೆಂದೂ ಕರೆಯುತ್ತಾರೆ. ಈ ರೀತಿ ಎರಡು ಬ್ರಹ್ಮೋತ್ಸವಗಳು ಬರುವ ಸಮಯದಲ್ಲಿ ಸಾಲಕಟ್ಲ ಬ್ರಹ್ಮೋತ್ಸವ ಗಳು ಎಂದಿನಂತೇ ನಡೆಯುತ್ತವೆ. ನವರಾತ್ರಿ ಬ್ರಹ್ಮೋತ್ಸವಗಳಲ್ಲಿ ಧ್ವಜಾರೋಹಣ, ಧ್ವಜಾವರೋಹಣ ಇರುವುದಿಲ್ಲ. ಹಾಗೇ ಸಾಲ ಕಟ್ಲ ಬ್ರಹ್ಮೋತ್ಸವಗಳು ಎಂಟನೆಯ ದಿನ ನಡೆಯುವ ರಥೋತ್ಸ ವದಲ್ಲಿ ಶ್ರೀವೇಂಕಟೇಶ್ವರ ಸ್ವಾಮಿಯು ಮರದ ರಥದಲ್ಲಿ ಮೆರ ವಣಿಗೆಯಲ್ಲಿ ಬರುತ್ತಾರೆ. ಹಾಗೇ ಸಾಲಕಟ್ಲ ಬ್ರಹ್ಮೋತ್ಸವಗಳಲ್ಲಿ ರಾತ್ರಿಯ ವೇಳೆಯ ವಾಹನ ಸೇವೆಯ ನಂತರ ಆಲಯದಲ್ಲಿನ ತಿರುಮಲರಾಯ ಮಂಟಪದಲ್ಲಿ ಪ್ರತಿದಿನವೂ ಬಂಗಾರದ ತಿರುಚ್ಚಿವಾಹನದಲ್ಲಿ ಸ್ವಾಮಿಯನ್ನು ಮೆರವಣಿಗೆಯನ್ನು ಮಾಡಿಸಿ, ಆಸ್ಥಾನವನ್ನು ನಿರ್ವಹಿಸುತ್ತಾರೆ. ನವರಾತ್ರಿ ಬ್ರಹ್ಮೋತ್ಸವಗಳಲ್ಲಿ ರಂಗನಾಯಕಿ ಮಂಟಪದಲ್ಲಿ ಬಂಗಾರದ ಶೇಷವಾಹನದಲ್ಲಿ ಅಧಿರೋಹಿಸಿ ಆಸ್ಥಾನವನ್ನು ನಡೆಸುತ್ತಾರೆ.

ಬ್ರಹ್ಮೋತ್ಸವಗಳ ಪ್ರಾರಂಭಕ್ಕೆ ಮೊದಲು ಬರುವ ಮಂಗಳ ವಾರದಂದು ಕೋಯಿಲ್ ಆಳ್ವಾರ್ ತಿರುಮಂಜನ ಅಂದರೆ ಆಲಯದ ಶುದ್ಧಿ ಕಾರ್ಯಕ್ರಮವು ನಡೆಯುತ್ತದೆ. ಬ್ರಹ್ಮೋತ್ಸವದ ಹಿಂದಿನ ದಿನ ಸಂಜೆ ಅಂಕುರಾರ್ಪಣೆ ಕಾರ್ಯಕ್ರಮವು ನಡೆ ಯುತ್ತದೆ. ಸ್ವಾಮಿಯ ಸೇನಾಧಿಪತಿಯಾದ ವಿಷ್ವಕ್ಸೇನರನ್ನು ಮೆರವಣಿಗೆಯಲ್ಲಿ ವಸಂತ ಮಂಟಪಕ್ಕೆ ಕರೆದೊಯ್ದು ಹುತ್ತದ



ಮಣ್ಣನ್ನು ಶೇಖರಿಸಿ ತಂದು ಆಲಯದಲ್ಲಿರುವ ಯಾಗ ಶಾಲೆಯಲ್ಲಿ ಹೊಸ ಮಣ್ಣಿನ ಓಡುಗಳಲ್ಲಿ ನವ ಧಾನ್ಯ ಗಳನ್ನು ಹಾಕಿ ಅಂಕುರಾರ್ಪಣೆಯನ್ನು ಮಾಡುತ್ತಾರೆ.

ಬ್ರಹ್ಮೋತ್ಸವಗಳು ಧ್ವಜಾರೋಹಣದೊಂದಿಗೆ ಪ್ರಾರಂಭವಾಗುತ್ತವೆ. ಮೊದಲ ದಿನ ಸಂಜೆ ಆಲಯ ದಲ್ಲಿನ ಧ್ವಜಸ್ತಂಭದ ಮೇಲೆ ಗರುಡಕೇತನವನ್ನು ಹಾರಿ ಸುವುದಕ್ಕೆ ಧ್ವಜಾರೋಹಣ ಎಂದು ಕರೆಯುತ್ತಾರೆ. ಆ ದಿನ ರಾತ್ರಿಯಿಂದ ವಾಹನ ಸೇವೆಗಳು ನಡೆಯುತ್ತವೆ.

ಈ ಬ್ರಹ್ಮೋತ್ಸವಗಳಲ್ಲಿ ಶ್ರೀವೇಂಕಟೇಶ್ವರ ಸ್ವಾಮಿಯ ಉತ್ಸವ ಮೂರ್ತಿಯಾದ ಶ್ರೀಮಲೆಯಪ್ಪ ಸ್ವಾಮಿ ಎಲ್ಲಾ ವಾಹನಗಳನ್ನು ಅಧಿರೋಹಿಸಿ ಸನ್ನಿಧಿಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಬರುತ್ತಾ ಭಕ್ತರನ್ನು ಅನುಗ್ರಹಿಸುತ್ತಾರೆ.

ಅದಲ್ಲದೇ ವಿವಿಧ ರೂಪಗಳನ್ನು, ಅಲಂಕಾರ ಗಳನ್ನು ಧರಿಸುವ ಸ್ವಾಮಿಯು ಕೆಲವು ವಾಹನಗಳಲ್ಲಿ ಒಬ್ಬರೇ, ಮತ್ತೇ ಕೆಲವು ವಾಹನಗಳಲ್ಲಿ ತನ್ನ ಇಬ್ಬರು ಪ್ರಿಯ ದೇವಿಯರೊಂದಿಗೆ ಅಧಿರೋಹಿಸಿ ಮೆರವಣಿಗೆ ಯಲ್ಲಿ ಬರುತ್ತಾರೆ.

ಚಿಕ್ಕಶೇಷವಾಹನ,ಹಂಸವಾಹನ,ಸಿಂಹವಾಹನ, ಮೋಹಿನಿ ಅವತಾರದಲ್ಲಿ ಪಲ್ಲಕಿಯಲ್ಲಿ,ಗರುಡ, ಹನುಮಂತ ಗಜ, ಸೂರ್ಯಪ್ರಭ,ಚಂದ್ರಪ್ರಭ,ಅಶ್ವವಾಹನಗಳ ಮೇಲೆ ಶ್ರೀವೇಂಕಟೇ ಶ್ವರಸ್ವಾಮಿ ಒಬ್ಬರೇ ಮೆರವಣಿಗೆಯಲ್ಲಿ ಬರುತ್ತಾರೆ.

ದೊಡ್ಡಶೇಷವಾಹನ,ಮುತ್ತಿನಚಪ್ಪರ,ಕಲ್ಪವೃಕ್ಷ, ಸರ್ವ ಭೂಪಾಲ ವಾಹನಗಳೊಂದಿಗೆ, ಸ್ವರ್ಣರಥೋತ್ಸವ, ದೊಡ್ಡ ರಥ ದಲ್ಲಿ ಉಭಯದೇವಿಯರೊಂದಿಗೆ ಸ್ವಾಮಿಯು ಮೆರವಣಿಗೆಯಲ್ಲಿ ಬರುತ್ತಾರೆ.

ಪುಟ್ಟ ಕೃಷ್ಣ,ಕಾಳಿಂಗಮರ್ಧನ ಕೃಷ್ಣ, ಯೋಗಮುದ್ರೆ, ರಾಮ, ಮಹಾರಾಜನಂತಹಾ ರೂಪಗಳಿಂದ ಅಲಂಕರಿಸಿ ಕೊಂಡು ವಾಹನ ಸೇವೆಯಲ್ಲಿ ಬರುವ ಸ್ವಾಮಿಯು ಸರಸ್ವತೀ ದೇವಿಯ ರೂಪದಲೂ ಹಂಸವಾಹನದ ಮೇಲೆ, ಹಿಂದೆ ಅಮೃತ ವನ್ನು ಹಂಚಿದ ಘಟನೆಯ ನೆನಪಿನಲ್ಲಿ ಮೋಹಿನಿ ರೂಪದಲ್ಲಿ ಪಲ್ಲಕಿಯ ಮೇಲೆ ಮೆರವಣಿಗೆ ಬರುತ್ತಾ ಭಕ್ತರ ಕಣ್ಣಿಗೆ ಹಬ್ಬ ವನ್ನುಂಟು ಮಾಡುತ್ತಾರೆ.

ಬ್ರಹ್ಮೋತ್ಸವಗಳಲ್ಲಿ ಒಂಭತ್ತನೆಯ ದಿನ ಬೆಳಿಗ್ಗೆ ಶ್ರೀದೇವಿ, ಭೂದೇವಿ ಸಮೇತ ಶ್ರೀಮಲೆಯಪ್ಪಸ್ವಾಮಿಯು ತಿರುಚ್ಚಿವಾಹನದ ಮೇಲೆ ಮೆರ ವಣಿಗೆ ಬರುತ್ತಾ ಶ್ರೀ ವರಾಹಸ್ವಾಮಿಯ ಆಲಯವನ್ನು ತಲುಪುತ್ತಾರೆ. ಸ್ವಾಮಿಯ ಆಯುಧವಾದ ಶ್ರೀ ಚಕ್ರತ್ತಾಳ್ವಾರ್ ಸ್ವಾಮಿಯನ್ನು ಅನುಸರಿಸುತ್ತಾರೆ. ವರಾಹ ಸ್ವಾಮಿಯ ಆಲಯ ದಲ್ಲಿ ಸ್ನಪನ ತಿರುಮಂಜನವನ್ನು ನಿರ್ವಹಿಸುತ್ತಾರೆ. ನಂತರ ಚಕ್ರತ್ತಾಳ್ವಾರ್ ಅನ್ನು ಪುಷ್ಕರಿಣಿಗೆ ಕರೆದೊಯ್ದು ಪುಷ್ಕರಿಣಿಯಲ್ಲಿ ಮುಳುಗಿಸಿ ಪವಿತ್ರಸ್ನಾನವನ್ನು ಮಾಡಿಸುತ್ತಾರೆ.

ಇದೇ ಚಕ್ರಸ್ನಾನ!ಇದೇ ಅವಭೃತಸ್ನಾನ! ಆ ದಿನ ಸಂಜೆ ಬ್ರಹ್ಮೋತ್ಸವಗಳು ಪ್ರಾರಂಭದಲ್ಲಿ ಧ್ವಜಸ್ತಂಭದ ಮೇಲೆ ಹಾರಿಸಿದ ಗರುಡ ಕೇತನವನ್ನು ಕೆಳಗೆ ಇಳಿಸುತ್ತಾರೆ.

ಅಂದರೆ ಧ್ವಜಾವರೋಹಣವನ್ನು ಮಾಡುತ್ತಾರೆ. ಅಂದರೆ ಗರುಡ ಕೇತನವನ್ನು ಹಾರಿಸುವುದರೊಂದಿಗೆ ಸಕಲ ದೇವತೆ ಗಳನ್ನು ಆಹ್ವಾನಿ ಸುತ್ತಾ ಬ್ರಹ್ಮೋತ್ಸವಗಳು ಪ್ರಾರಂಭವಾಗಿ,ಗರುಡ ಕೇತನವನ್ನು ಇಳಿಸುವುದರಿಂದ ಅವರನ್ನೆಲ್ಲಾ ಬೀಳ್ಕೊಡುವ ಕಾರ್ಯಕ್ರಮದೊಂದಿಗೆ ಬ್ರಹ್ಮೋತ್ಸವಗಳು ಮುಕ್ತಾಯವಾಗುತ್ತವೆ.

ಈ ರೀತಿ ನಡೆಯುವ ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವ ಗಳಿಂದ ಲೋಕವೆಲ್ಲಾ ರೋಮಾಂಚನದೊಂದಿಗೆ ಆನಂದ ಸಾಗರದಲ್ಲಿ ತೇಲಾಡುತ್ತದೆ.




# ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನ ಕಾಸರಗೋಡು

– ಡಾ|| ಆರ್. ಶೈಲಜ ಶರ್ಮ

99806 27041

ಕರ್ನಾಟಕದ ಗಡಿ ಭಾಗ ಕುಂಬಳೆ, ಕಾಸರಗೋಡು ಜಿಲ್ಲೆಯಲ್ಲಿ ಇರುವ ಪರಮ ಪುಣ್ಯ ಕ್ಷೇತ್ರ ಅನಂತಪುರ,ಪೌರಾಣಿಕವಾಗಿ, ಐತಿಹಾಸಿಕವಾಗಿ ಬಹಳ ಪ್ರಸಿದ್ಧಿ ಪಡೆದಿರುವ ಸ್ಥಳ. ವಿಶಾಲವಾದ ಪ್ರದೇಶದಲ್ಲಿ ಪ್ರಕೃತಿಯ ಮಧ್ಯೆಕೆರೆಯ ನಡುವೆ ಇರುವ ಸರೋವರ ಕ್ಷೇತ್ರವನ್ನು ಕಲಿಯುಗದ ವೈಕುಂಠ ಎನ್ನುವರು. ಇಲ್ಲಿರುವ ಅನಂತಪದ್ಮನಾಭ ಸ್ವಾಮಿ, ಶ್ರೀದೇವಿ, ಭೂದೇವಿಯ ಮೂರ್ತಿಗಳು ಬಹಳ ಸುಂದರವಾಗಿದೆ. ಇಲ್ಲಿರುವ ಮಕರ/ಮೊಸಳೆಯು ದೇವರ ಮೊಸಳೆ 'ಬಬಿಯಾ' ಶುದ್ಧ ಸಸ್ಯಾಹರಿ, ಸಾಧುವಿನಂತಹದ್ದು.

**ವಿಶೇಷತೆ:**

ಕಡುಶರ್ಕರದಿಂದ ತಯಾರಾಗಿರುವ ದೇವರ ಮೂರ್ತಿಗಳು ಆಕರ್ಷಕವಾಗಿದೆ. ಎಲ್ಲೆಡೆಯು ಅನಂತಪದ್ಮನಾಭ ಸ್ವಾಮಿಯು ಆದಿಶೇಷನ ಮೇಲೆ ಮಲಗಿರುವ ಭಂಗಿಯಲ್ಲಿ ಇದ್ದರೆ ಇಲ್ಲಿ ಐದು ಎಡೆ ನಾಗಪ್ಪನ ಮೇಲೆ ಕುಳಿತಿರುವ ಭಂಗಿಯಲ್ಲಿದೆ. ಪುಟ್ಟ ಗರ್ಭಗುಡಿಯಲ್ಲಿ ಇರುವ ಸ್ವಾಮಿಯ ಪೂರ್ಣ ದರ್ಶನವನ್ನು ಕುಳಿತು ನೋಡಬೇಕು. ದೇವಿಯರನ್ನು ಕಿಂಡಿಯ ಮೂಲಕ ನೋಡಬೇಕು. ಈ ದೇವ ಸನ್ನಿಧಿಯಲ್ಲಿರುವ ದೇವರ ಮೊಸಳೆ ಬಬಿಯಾವನ್ನು ನೋಡುವುದೇ ಒಂದು ಭಾಗ್ಯ. ಇಲ್ಲಿಯವರೆಗೂ ಯಾರಿಗೂ ತೊಂದರೆ ಕೊಟ್ಟಿಲ್ಲ. ಅನ್ನ ಪ್ರಸಾದವನ್ನು ಮಾತ್ರ ತಿನ್ನುವ ಮಕರವಿದು. ಆಶ್ಚರ್ಯವಾದರೂ ಸತ್ಯವಿದು. ಬಬಿಯಾವನ್ನು ನೋಡಿದ ಭಕ್ತರಿಗೆ ಸಾಕ್ಷಾತ್ ಸ್ವಾಮಿಯನ್ನೇ ನೋಡಿದಂತಾಗುತ್ತದೆ.

**ಇತಿಹಾಸ :**

ಶ್ರೀ ಬಿಲ್ವಮಂಗಳ ಸ್ವಾಮಿಗಳಿಗೂ ಅನಂತಪದ್ಮನಾಭ ಸ್ವಾಮಿ ಸನ್ನಿಧಾನಕ್ಕೂ ನಿಕಟ ಸಂಬಂಧವಿದೆ ಎಂಬ ಐತಿಹ್ಯವಿದೆ. ಯತಿವರೇಣ್ಯರು ಶ್ರೀಹರಿಯ ಪರಮ ಭಕ್ತರು. ಅನಂತಪುರ ಕ್ಷೇತ್ರದಲ್ಲಿ ತಪಸ್ಸನ್ನಾಚರಿಸುತ್ತಾ ಪೂಜೆಗಳನ್ನು ಮಾಡುತ್ತಾ ವಾಸವಾಗಿರುತ್ತಾರೆ.ಒಮ್ಮೆ ಪೂಜೆಯಲ್ಲಿ ಮಗ್ನರಾಗಿದ್ದ ಸಮಯದಲ್ಲಿ ಪಕ್ಕದಲ್ಲಿ ಇದ್ದ ಬಾಲಕನನ್ನು ಗಮನಿಸುವುದಿಲ್ಲ. ಸ್ವಲ್ಪ ಸಮಯದ ನಂತರ ನೋಡಿದರೂ ಅಷ್ಟಾಗಿ ಪರಿಗಣಿಸುವುದಿಲ್ಲ. ಪೂಜೆಯ ಸಮಯದಲ್ಲಿ ಬಾಲಕನು ಬಹಳ ಚೇಷ್ಟೇ ಮಾಡುತ್ತಿರುತ್ತಾನೆ. ಪೂಜೆಗೆ ತೊಂದರೆ ಕೊಡುತ್ತಿದ್ದ ಬಾಲಕನನ್ನು ಕೈಯಿಂದ ತಳ್ಳುತ್ತಾರೆ. ಆಗ ಬಾಲಕನು ಈ ಸರೋವರ ಕ್ಷೇತ್ರದ ದಡದಲ್ಲಿ ಬೀಳುತ್ತಾನೆ. ಅಲ್ಲಿದ್ದ ಒಂದು ಗುಹೆಗೆ ಹೋದ ಬಾಲಕ ಮಾಯವಾಗುತ್ತಾನೆ. ಅಲ್ಲಿ 'ಓಂಕಾರ ಸಹಿತವಾಗಿ ಜ್ಯೋತಿ ಕಾಣಿಸುತ್ತದೆ. ಕ್ಷಣ ಯೋಚಿಸಿದ ಯತಿಗಳು ತಮ್ಮಿಂದ ಆದ ಅಪರಾಧಕ್ಕೆ ಸಂಕಟ ಪಡುತ್ತಾರೆ. ತಡ ಮಾಡದೆ ಆ ಗುಹೆಯ ಬಳಿ ಬಂದು ಸುರುಂಗದ ಮೂಲಕ ಹೋಗಿ ಬಾಲಕನನ್ನು ಹುಡುಕುತ್ತಾ ಸಾಗುತ್ತಾರೆ. ಸಾಗುತ್ತಾ, ಸಾಗುತ್ತಾ ಅನಂತನ್ ಕಾಡ್ ಎಂಬಲ್ಲಿಗೆ ಬರುತ್ತಾರೆ. ಇಲ್ಲಿ ಅನಂತಪದ್ಮನಾಭ ಸ್ವಾಮಿಯು ಪ್ರತ್ಯಕ್ಷನಾಗಿ ಭಕ್ತನನ್ನು ಆಶೀರ್ವದಿಸಿ,ಯತಿಗಳನ್ನು ಅನಂತಪುರ ಕ್ಷೇತ್ರಕ್ಕೆ ಹೋಗಿ ಮೊದಲಿನಂತೆ ಪೂಜೆ ಮಾಡಿಕೊಂಡಿರಲು ಹೇಳುತ್ತಾರಂತೆ. ಆನಂದಭರಿತರಾದ ಬಿಲ್ವ ಮಂಗಳ ಸ್ವಾಮಿಗಳು ದೇವನಿಗೆ 'ಮಾವಿನ ಕಾಯಿ' ನೈವೇದ್ಯ ಮಾಡಿ ದೇವನ ಅಣತಿಯಂತೆ ಸರೋವರ ಕ್ಷೇತ್ರಕ್ಕೆ ಬರುತ್ತಾರಂತೆ ಇಲ್ಲಿಂದಲೇ ಅನಂತ ಪದ್ಮನಾಭ ಸ್ವಾಮಿಯು ಹೋಗಿ ಈಗಿನ 'ತಿರುವನಂತಪುರ'ದಲ್ಲಿ ನೆಲೆಸಿದರು ಎಂಬುದಾಗಿ ಹೇಳುತ್ತಾರೆ. ಸುಮಾರು 900 ವರ್ಷಗಳ ಹಿಂದಿನ ಶಾಸನವು ಈ ಕ್ಷೇತ್ರದಲ್ಲಿ ದೊರೆತಿದೆ. ಇದು 'ತುಳು' ಭಾಷೆಯಲ್ಲಿ ಇದೆ ಎನ್ನುವರು. ಮೊಗೆರೆಯರು ಈ ಗ್ರಾಮ ವನ್ನು ಉಂಬಳಿ ಬಿಟ್ಟಿರುವ ಬಗೆಗೆ ವಿವರಣೆ ಇದೆ. ಕುಂಬಳೆಯ ರಾಜಜಯ ಸಿಂಹ ಸುಮಾರು 15ನೇಯ ಶತಮಾನದಲ್ಲಿ ಮಾಡಿರುವ ಶಾಸನವಿದೆ. ಇದನ್ನು ಅನಂತಪುರ ಶಾಸನ ಎಂದು ಕರೆಯುತ್ತಾರೆ. ಇಲ್ಲಿ ಸುಮಾರು ವರ್ಷಗಳ ಹಿಂದೆ ಬಬಿಯಾ ಮೊಸಳೆ ಬರುವುದಕ್ಕೂ ಮುನ್ನ ಮತ್ತೊಂದು ಮೊಸಳೆ ಇದ್ದು, ಅದನ್ನು ಬ್ರಿಟೀಷ್ ಅಧಿಕಾರಿಯೊಬ್ಬರು ತಮ್ಮ ಗನ್ನ್‌ನಿಂದ ಶೂಟ್ ಮಾಡಿಕೊಂದರಂತೆ. ಅವರು ಸರ್ಪ ಕಚ್ಚಿದಾಗ ಮೃತರಾದರಂತೆ, ಈಗಿರುವ ಮೊಸಳೆ ಇಲ್ಲಿಗೆ ಹೇಗೆ ಬಂದಿತು ಎಂಬುದು ಯಾರಿಗೂ ತಿಳಿಯದು.

**ವಾಸ್ತುಶೈಲಿ**

ಭೂಮಟ್ಟದಿಂದ ಕೆಳಗಿರುವ ದೇವಾಲಯ. ಸರ್ಪಕಟ್ಟು ಶೈಲಿಯ ಸುದೀರ್ಘವಾದ ಕೆಂಪು ಬಂಡೆಯ ನಡುವೆ ಇರುವ ಮಹಾದ್ವಾರದ ಮೂಲಕ ಬರಬೇಕು. ಬಲಿಕಲ್ಲು ದಾಟಿ ಮುಂದೆ ಮೆಟ್ಟಿಲುಗಳು ಇಳಿದು ಬಂದರೆ ನಮಸ್ಕಾರ ಮಂಟಪ ಛಾವಣಿಯಲ್ಲಿ ತೈಲವರ್ಣದ ಚಿತ್ರಗಳು, ಮರದ ಕೆತ್ತನೆಗಳು ಇದೆ. ಸುತ್ತಲೂ ಕೊಳ, ಮಧ್ಯದಲ್ಲಿ ದೇಗುಲ, ಗರ್ಭಗುಡಿಯಲ್ಲಿ ಶ್ರೀದೇವಿ, ಭೂದೇವಿಯೊಂದಿಗೆ ಸ್ವಾಮಿ ವಿರಾಜಮಾನರಾಗಿದ್ದಾರೆ.





46



ಕರ್ನಾಟಕದ ವೈಷ್ಣವ ಕ್ಷೇತ್ರಗಳು

# ಮೇಲುಕುಂಟೆಯ ನವನೀತ ಬಾಲಕೃಷ್ಣ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಕಸಬೆಯಿಂದ 15 ಕಿ.ಮೀ. ದೂರದಲ್ಲಿರುವ ಸಣ್ಣ ಗ್ರಾಮ ಮೇಲುಕುಂಟೆ ಇಲ್ಲಿರುವ ನವನೀತ ಬಾಲಕೃಷ್ಣನ ದೇವಾಲಯವು ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಮೇಲುಕುಂಟೆಯ ಊರ ನಡುವಿರುವ ಬಾಲಕೃಷ್ಣ ದೇವಾಲಯವು ಬಹಳ ವಿಶೇಷತೆಯನ್ನು ಹೊಂದಿದೆ ಸಾಮಾನ್ಯವಾಗಿ ನವನೀತ ಬಾಲಕೃಷ್ಣನ ಮೂರ್ತಿಗಳೂ ಅಂಬೆಗಾಲಿನಲ್ಲಿದ್ದು ಒಂದು ಕೈಯಲ್ಲಿ ಬೆಣ್ಣೆಯನ್ನು ಹಿಡಿದಿರುವಂತೆ ರಚಿಸಿರುವುದು ಕಂಡು ಬರುತ್ತದೆ. ಆದರೆ ಇಲ್ಲಿರುವ ಬಾಲಕೃಷ್ಣನು ಸ್ಥಾನಕ (ನಿಲುವಿನ) ಭಂಗಿಯಲ್ಲಿದ್ದು ಎರಡೂ ಕೈಗಳಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದಿರುತ್ತಾನೆ. ಇದು ಬಹಳ ಅಪರೂಪದ ಮೂರ್ತಿಯಾಗಿದ್ದು ಬೇರೆಲ್ಲಿಯೂ ಕಾಣಸಿಗುವುದಿಲ್ಲ. ಅಲಂಕೃತ ಪ್ರಭಾವಳಿಯ ನಡುವೆ ಸುಮಾರು ಮೂರು ಅಡಿಗಳು ಎತ್ತರವಿರುವ ಸುಂದರ ಬಾಲಕೃಷ್ಣ ಸ್ವಾಮಿಯ ಇಕ್ಕೆಲಗಳಲ್ಲಿ ಶ್ರೀದೇವಿ,ಭೂದೇವಿಯರಿರುವರು. ಪ್ರಭಾವಳಿಯಲ್ಲಿ ಬಳ್ಳಿಯ ಅಲಂಕಾರವಿದ್ದು ಮೇಲ್ಭಾಗದಲ್ಲಿ ಚಕ್ರ, ಶಂಖಗಳನ್ನು ಬಿಡಿಸಲಾಗಿದೆ. ದೇವಾಲಯವು ಗರ್ಭಗೃಹ ಅಂತರಾಳ, ನವರಂಗ ಹಾಗೂ ವಿಶಾಲವಾದ ಪ್ರಾಕಾರವನ್ನು ಹೊಂದಿದೆ. ನವರಂಗದಲ್ಲಿ ಶ್ರೀದೇವಿ, ಭೂ ದೇವಿ ಸಮೇತನಾದ ಜನಾರ್ದನನ ಉತ್ಸವ ಮೂರ್ತಿಯ ಹಾಗೂ ಮತ್ತೊಂದು ಗರ್ಭ ಗುಡಿಯಲ್ಲಿ ಶ್ರೀ ಮಹಾಲಕ್ಷ್ಮಿಯ ಸುಂದರ ಮೂರ್ತಿಯಿದೆ. ಮೇಲುಕುಂಟೆಯ ಬಾಲಕೃಷ್ಣ ದೇವಾಲಯದ ಶಿಥಿಲವಾಗಿ ನೆಲಕಚ್ಚುವ ಹಂತವನ್ನು ತಲುಪಿತ್ತು ಆದರೆ ಮೇಲುಕುಂಟೆ ಬಾಲಕೃಷ್ಣ ದೇವಾಲಯದ ಭಕ್ತವೃಂದವು ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿ ಸುತ್ತಲೂ ಪ್ರಾಕಾರವನ್ನು ವಿಸ್ತರಿಸಿ ದೇವಾಲಯದ ಬಾಹ್ಯ ಸೌಂದರ್ಯವನ್ನು ಹೆಚ್ಚಿಸಿರುವರು. ಬಾಲಕೃಷ್ಣ ದೇವಾಲಯದ ಪ್ರಾಕಾರದಲ್ಲಿ ಬಲಗೈಯಲ್ಲಿ ಶಂಖ ಹಾಗೂ ಎಡಗೈಯಲ್ಲಿ ಚಕ್ರವನ್ನು ಹಿಡಿದಿರುವ ವರಲಕ್ಷ್ಮಿಯ ಸುಂದರವಾದ ಮೂರ್ತಿ ಹಾಗೂ ಇತ್ತೀಚಿಗೆ ಪ್ರತಿಷ್ಠಾಪಿತವಾದ ಲಕ್ಷ್ಮೀನರಸಿಂಹ, ಲಕ್ಷ್ಮೀಹಯಗ್ರೀವ, ಸುದರ್ಶನ ಆಳ್ವಾರ್, ಶ್ರೀನಿವಾಸ, ದತ್ತಾತ್ರೇಯ ಧನ್ವಂತರಿ, ರಾಮಾನುಜಾಚಾರ್ಯರು, ವೇದಾಂತದೇಶಿಕಾರ್, ನಮ್ಮಾಳ್ವಾರ್, ಪೆರಿಯಾಳ್ವಾರ್ ಹಾಗೂ ವಾಯುವ್ಯ ದಿಕ್ಕಿನಲ್ಲಿ ಸೀತಾರಾಮ ಲಕ್ಷ್ಮಣಾಂಜನೇಯರ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ದೇವಾಲಯದ ಆವರಣವು ಅತ್ಯಂತ ಸ್ವಚ್ಛವಾಗಿದ್ದು ಬರುವ ಭಕ್ತಾದಿಗಳಿಗೆ ಸ್ವಾಮಿಯನ್ನು ಧ್ಯಾನಿಸಲು ಸುಂದರವಾದ ಪರಿಸರವಿದೆ. ಮೇಲುಕುಂಟೆಯ ನವನೀತ ಬಾಲಕೃಷ್ಣ ಸ್ವಾಮಿಯ ವಾರ್ಷಿಕೋತ್ಸವವು ಮಾಘ ಶುದ್ಧ ಸಪ್ತಮಿಯಲ್ಲಿ (ರಥ ಸಪ್ತಮಿ) ಮೂರು ದಿನಗಳ ಕಾಲ ವೈಭವವಾಗಿ ಜರುಗುತ್ತದೆ. ಪಾಂಚರಾತ್ರಾಗಮ ಕ್ರಮದಿಂದ ನಡೆಯುವ ವಾರ್ಷಿಕೋತ್ಸವದಲ್ಲಿ ಮೊದಲನೆಯ ದಿನ ಮಹಾಭಿಷೇಕ,ಸಂಜೆ ಅಂಕುರಾರ್ಪಣೆ,ಕಳಸಾರಾಧನೆ,ಎರಡನೆಯ ದಿನ ಶಾಂತಿ ಹೋಮ, ಮಧ್ಯಾಹ್ನ ಸೂರ್ಯಮಂಡಲೋತ್ಸವವು ಬಹಳ ವೈಭವದಿಂದ ಜರುಗುವುದು. ಮೂರನೆಯ ದಿನ ನವಕಳಶಾಭಿಷೇಕ ಹಾಗೂ ಸ್ವಾಮಿಗೆ ಪುಷ್ಪಾಲಂಕಾರ, ಮಹಾಮಂಗಳಾರತಿಗಳು ಪಾಂಗಿತವಾಗಿ ನೆರವೇರುತ್ತದೆ. ಬಾಲಕೃಷ್ಣಸ್ವಾಮಿಗೆ ಗೋಕುಲಾಷ್ಟಮಿಯಲ್ಲಿ ವಿಶೇಷ ಪೂಜೆಗಳು ಬಹು ವಿಜೃಂಭಣೆಯಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನೆರವೇರುತ್ತದೆ. ದೇವಾಲಯದ ಭಿತ್ತಿಯಲ್ಲಿ ನಾಗರ ಮೂರ್ತಿಯಿದ್ದು ಸಂತಾನಾಪೇಕ್ಷೆಯನ್ನು ಬಯಸುವ ದಂಪತಿಗಳು ಇಲ್ಲಿ ಬಂದು ನಾಗನಿಗೆ ಪೂಜೆ ಸಲ್ಲಿಸಿದರೆ ಮಕ್ಕಳಭಾಗ್ಯ ದೊರೆಯುವುದೆಂಬ ನಂಬಿಕೆ ಇಲ್ಲಿಯ ಭಕ್ತರದು. ಮೇಲುಕುಂಟೆಯ ಬಾಲಕೃಷ್ಣ ದೇವಾಲಯದ ಸೇವಾಸಮಿತಿಯವರು ದೇವಾಲಯವನ್ನು ಬಹು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದು ದೇವಾಲಯವನ್ನು ಅಭಿವೃದ್ಧಿ ಪಡಿಸುವ ಬೃಹತ್ ಯೋಜನೆಯನ್ನು ಹಾಕಿಕೊಂಡಿರುವರು. ದೇವಾಲಯದಲ್ಲಿ ಪ್ರತಿ ಶನಿವಾರ ಮತ್ತು ವಿಶೇಷ ದಿನಗಳಲ್ಲಿ ಭಕ್ತಾದಿಗಳ ಸಹಕಾರದಿಂದ ಅನ್ನದಾಸೋಹದ ವ್ಯವಸ್ಥೆಯಿದೆ.

ಹೀಗೆ ಬನ್ನಿ : ಸಿರಾ- ಅಮರಾಪುರ ರಸ್ತೆಯಲ್ಲಿ ಹತ್ತು ಕಿ.ಮೀ. ಸಾಗಿದರೆ ಮೇಲುಕುಂಟೆಯ ತಿರುವು ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಸುಮಾರು 1.5 ಕಿ.ಮೀ ಸಾಗಿ ಮೇಲುಕುಂಟೆಯನ್ನು ಸೇರಬಹುದು.

## ತಿರುಮಲ ತಿರುಪತಿ ದೇವಸ್ಥಾನಗಳು

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

## (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ. ಈ ಒಂದು ದಿನದ ವಿರಾಳ ಪಥಕವು ಸೆಪ್ಟೆಂಬರ್, 2024 ರ ವರೆಗೆ ಅನ್ವಯಿಸುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ (ಡೋನಾರ್ ಸೆಲ್) ಎಫ್.ಎ.ಸಿ.,

ತಿ.ತಿ.ದೇ., ತಿರುಮಲೆ. ಫೋನ್ : -

0877 - 2263001, 2263472.

ಈ ಮೇಲ್ ಐ.ಡಿ. :-

**cdmc.ttd@tirumala.org**

ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

### ದೈನಂದಿನ ವೆಚ್ಚಗಳು

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |





**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**



# ಅಸ್ಕಿಹಾಳ ಗೋವಿಂದ ದಾಸರು

– ಶ್ರೀಧರ ರಾಯಸಂ

ಸಂಗೀತ, ಸಾಹಿತ್ಯ ಸಮನ್ವಯದ ಹರಿದಾಸರು, ದೇಶ ಕಾಲಕ್ಕೆ ಅನುಸಾರವಾಗಿ ಅನೇಕ ಕೀರ್ತನೆಗಳನ್ನು ಕಿರಿವಯಸ್ಸಿನಲ್ಲೇ ರಚನೆ ಮಾಡಿ ಸಮಾಜ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ ಮಹಾಸಾಧಕರು, ಅಸ್ಕಿಹಾಳ ಗೋವಿಂದದಾಸರು,ಎಲ್ಲಾ ದಾಸರಂತೆ,ಭಕ್ತಿ ಮಾರ್ಗದ ಅನುಸಂಧಾನದ ಜೊತೆಗೆ ಸಾಧನೆಗೈಯುತ್ತಾ, ಭಗವಂತನನ್ನು ಆರಾಧಿಸಿದ ಮಹಾನುಭಾವರು! ಅತ್ಯಂತ ಸುಂದರ, ಭಕ್ತಿ ರಸ ಹೊಂದಿದ 35 ಕೀರ್ತನೆಗಳನ್ನು ಲಾವಣಿಗಳನ್ನು ಗೀಗಿ ಪದ, ಬಯಲಾಟ ರಚಿಸಿದ ಮಹನೀಯರು. ಇವರು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಅಂತರಂಗದ ಭಕ್ತರಾಗಿ ಅನೇಕ ಪದಗಳನ್ನು ರಚಿಸಿದ್ದಾರೆ.

ಹೊಸರಿತ್ತಿಯಲ್ಲಿ ಬೃಂದಾವನಸ್ಥರಾಗಿರುವ ಶ್ರೀ ಸುಶೀಲೇಂದ್ರ ತೀರ್ಥರ ಮೇಲೂ, ಭಕ್ತಿಯಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ಶ್ರೀಹರಿಯನ್ನು ಕುರಿತು ಹಲವು ನಿಂದಾ ಸುತ್ತಿಗಳನ್ನು ರಚಿಸಿ,ಪರಮಾತ್ಮನಲ್ಲಿ ಅತಿ ಸಲುಗೆಯಿಂದ ಹಾಡಿದ ಮಹಾಸಾಧಕರು! ಶ್ರೀರಾಮಚಂದ್ರ ದೇವರು ತಮ್ಮ ಅಂತರಂಗದ ದೈವ ಎಂದು ಸ್ಮರಿಸಿದ್ದಾರೆ. ದಿನ್ನಿ ರಾಘಪ್ಪ ಇವರಿಗೆ ಗುರೋಪದೇಶ ಮಾಡಿದ ಗುರುಗಳು. ಗುರುಗಳಿಂದ "ಸಿರಿಗೋವಿಂದವಿಠಲ" ಅಂಕಿತ ಪಡೆದು ಅನೇಕ ದೇವರ ನಾಮಗಳನ್ನು ನಿತ್ಯ ಭಜನೆಗೆ ರಚಿಸಿದರು.

ಸುರಪುರದ ಕೌಶಿಕ ಗೋತ್ರದ ಗಿರಿದಾಸರು ಮತ್ತು ಶೇಷಮ್ಮ ಅವರಿಗೆ ಮೂರನೇ ಪುತ್ರನಾಗಿ ಗೋವಿಂದದಾಸರು, ಶಾಲಿವಾಹನ ಶಕೆ ವಿಕ್ರಮ ನಾಮ ಸಂವತ್ಸರ ಆಶ್ವೀಜ ಶುದ್ಧ ದಶಮೀ (1873) ಸುರಪುರದಲ್ಲಿ ಜನಿಸಿದರು. ಇವರ ಸೋದರರು, ರಾಘವೇಂದ್ರದಾಸರು, ಮತ್ತು ಸೀತಾರಾಮ ದಾಸರು, ಹಾಗೂ ಸೋದರಿ ಗಿರೆಮ್ಮೆ ಜನಿಸಿದ್ದರು. ಸಣ್ಣ ವಯಸ್ಸಿನಲ್ಲೇ ಮಾತಾಪಿತೃಗಳನ್ನು ಕಳೆದುಕೊಂಡು ತಮ್ಮ ಚಿಕ್ಕಪ್ಪ ವೆಂಕಟದಾಸರ ಪಾಲನೆಯಲ್ಲಿ ಬೆಳೆದರು. ಬಾಲ್ಯದಲ್ಲಿ ಅಸ್ಕಿಹಾಳ. ಗೋವಿಂದದಾಸರ ಉಪನಯನ ಶ್ರೀಯಳಮೇಲಿ ವಿಠಲಾಚಾರ್ಯರಿಂದ ಸುರಪುರದಲ್ಲಿ ನೆರವೇರಿತು. ಚಿಕ್ಕ ವಯಸ್ಸಿನಲ್ಲಿ ಸುರಪುರ ತೊರೆದು,ರಾಯಚೂರು ಹತ್ತಿರ ಇರುವ ಚಿಕ್ಕ ಗ್ರಾಮ ಅಸ್ಕಿಹಾಳದಲ್ಲಿ, ಶ್ರೀಮಾನ್, ಗೋವಿಂದದಾಸರ ಸಾಧನೆ ಮತ್ತು ಸಾಹಿತ್ಯ ಕ್ಷೇತ್ರವಾಯಿತು.

ಅಲ್ಲಿಯ ರಘುವೀರ ಮಂದಿರದಲ್ಲಿ ತಮ್ಮ ಶಿಷ್ಯರೊಂದಿಗೆ ಕೀರ್ತನೆಗಳ ಮೂಲಕ ಪಾಠ ಹೇಳಿ ಕೊಡುತ್ತಿದ್ದರು. ಅನೇಕ ಕೀರ್ತನೆಗಳಲ್ಲಿ, ಗಜೇಂದ್ರಮೋಕ್ಷ, ದ್ರೌಪದಿ ಮಾನರಕ್ಷಣೆ, ರಾಮಾಯಣ, ಶ್ರೀನಿವಾಸಕಲ್ಯಾಣ, ಗಯೋಪಾಖ್ಯಾನ, ನಲಕೂಬರ ಮತ್ತು ಮಣಿಗ್ರೀವರ ಶಾಪ ವಿಮೋಚನೆ, ದಶಾವತಾರದ ಕಥೆಗಳನ್ನು ಶಿಷ್ಯರಿಗೆ ಮನನ ಮಾಡಿಸುತ್ತಿದ್ದರು. ಶ್ರೀಹರಿಯನ್ನು ಕುರಿತು ಹಲವು ನಿಂದಾಸ್ತುತಿಗಳನ್ನು ರಚಿಸಿದ ಮಹನೀಯರು, ಅಸ್ಕಿಹಾಳ ಗೋವಿಂದದಾಸರ ಆಪ್ತಶಿಷ್ಯರಾದ ನರಸಿಂಹ ವಿಠಲಾಂಕಿತ ಬಟ್ಟಲಗಿ ಗುಂಡಾಚಾರ್ಯರು ಪ್ರಮುಖರು ಅಸ್ಕಿಹಾಳ ಗೋವಿಂದ ದಾಸರ ವಿವಾಹ ದೇವದುರ್ಗ ತಾಲೂಕಿನ ಚಿಕ್ಕ ಗ್ರಾಮ ಮದರಕಲ್‌ನಲ್ಲಿ ವೆಂಕೋಬರಾಯರ ಮಗಳಾದ ತುಳಸಾಬಾಯಿ ಜೊತೆಗೆ ಜರುಗಿತು. ಬಾಲ್ಯದಲ್ಲಿಯೇ ತಾಳ. ತಂಬೂರಿ ಹಿಡಿದು, ಭಕ್ತಿಯಿಂದ ವೈರಾಗ್ಯದಿಂದ ಆಧ್ಯಾತ್ಮಿಕದ ಕಡೆಗೆ ಮನಸ್ಸಿಟ್ಟು, ಭಗವಂತನ ನಾಮಗಳ ಸಂಕೀರ್ತನೆ ಮಾಡುತ್ತಿದ್ದರು.

ದಾಸರು ಆಡಂಬರದ ಜೀವನದಿಂದ ಬಹು ದೂರವಿದ್ದು.ಢಾಂಬಿಕರನ್ನು ಕಂಡರೇ ಅವರಿಗೆ ಆಗುತ್ತಿರಲಿಲ್ಲ. ಗುರುಜಗನ್ನಾಥದಾಸರ ಪ್ರೇರಣೆಯಂತೆ,ಅಸ್ಕಿಹಾಳ ಗೋವಿಂದದಾಸರಿಗೆ "ಸಿರಿಗೋವಿಂದವಿಠಲ" ಅಂಕಿತ ಪ್ರದಾನ ಮಾಡಿದ ಮಹಾತ್ಮರು ಶ್ರೀರಘುಪತಿವಿಠಲರು, ಸಿರಿ ಗೋವಿಂದವಿಠಲ ಅಂಕಿತ ನಾಮದಿಂದ ಅನೇಕ ದೇವರ ನಾಮಗಳನ್ನು ರಚಿಸಿದ್ದಾರೆ. "ಕನಕಾಂಗಿ ಕಲ್ಯಾಣ"ಎನ್ನುವ ಸುಂದರ ಬಯಲಾಟವನ್ನು ಸಹ ರಚಿಸಿ,ಜನರಿಗೆ ನೀಡಿದ್ದಾರೆ.

ದಾಸ ಪ್ರಭಾವ ಎಂಬ ನಾಟಕವನ್ನು ಬರೆದು, ಅದರಲ್ಲಿ ತಾವೇ ಸ್ವತಃ ಶ್ರೀಪುರಂದರ ದಾಸರ ಪಾತ್ರವಹಿಸಿದ್ದು ಅದ್ಭುತ! ರಘುವೀರ ಮಂದಿರ ನಿರ್ಮಿಸಿ ಜ್ಞಾನಸತ್ರ ನಡೆಸಿ ಅನೇಕ ಪುರಜನರು ಆಧ್ಯಾತ್ಮಿಕ ಬಗ್ಗೆ ಚರ್ಚೆ, ಚಿಂತನ, ಭಜನೆ ನಡೆಸಿ ಅವರನ್ನು ಪುನೀತರನ್ನಾಗಿ ಮಾಡಿದ ಸಾಧಕರು. ಶ್ರೀಗೋವಿಂದದಾಸರ

ಜೀವಿತ ಕಾಲದಲ್ಲಿ ಉತ್ತರಾಧಿ ಮಠದ ಮಹಾನ್ ಗುರುಗಳು, ಯತಿಗಳಾದ ಶ್ರೀಸತ್ಯಧೀರತೀರ್ಥರು, ಶ್ರೀಸತ್ಯಜ್ಞಾನತೀರ್ಥರು, ಶ್ರೀಸತ್ಯಧ್ಯಾನತೀರ್ಥರು ವಿರಾಜಮಾನರಾಗಿದ್ದ ಕಾಲವಾಗಿತ್ತು.

ಅಸ್ಕಿಹಾಳ ಶ್ರೀಗೋವಿಂದದಾಸರು,ತಮ್ಮ ಅನೇಕ ಮಹಿಮೆಗಳನ್ನು, ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಅನುಗ್ರಹದಿಂದ ಜನರಿಗೆ ಪ್ರದರ್ಶಿಸಿದ್ದು ವಿಶೇಷ! ಅಸ್ವಸ್ಥ ಬಾಲಕ ಗುಣಮುಖನಾಗಿದ್ದು,ರತ್ನಗರ್ಭ ಶಾಲಿಗ್ರಾಮ ನೀಡಿದ್ದು, ಸಂಗಪ್ಪನಿಗೆ ತಿರುಪತಿ ತಿಮ್ಮಪ್ಪನ ಬ್ರಹ್ಮೋತ್ಸವ ಅವರ ಗ್ರಾಮದಲ್ಲೇ ದರ್ಶನ ಮಾಡಿಸಿದ್ದು, ಎತ್ತಿನ ಬಂಡಿಯನ್ನು ದಾಸರೇ ಮೇಲಕ್ಕೆತ್ತಿದ್ದು, ಹೊಂಡದಲ್ಲಿ ಮುಳುಗಿದ್ದ ಕೋಣವನ್ನು ತಾವೇ ಸ್ವಂತ ಸಾಹಸದಿಂದ ಮೇಲಕ್ಕೆತ್ತಿದ್ದು ಹೀಗೆ ಅನೇಕ ಮಹಿಮೆಯನ್ನು ತೋರಿಸಿದ ಮಹಾತ್ಮರು! ದಾಸರ ಕೀರ್ತನೆಗಳಲ್ಲಿ, ಸಾಮಾಜಿಕ ಕಳಕಳಿ,ಜನಪರಕಾಳಜಿ,ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಮಧ್ವಸಿದ್ಧಾಂತ ಪ್ರತಿಪಾದನೆ ಪ್ರಚುರಪಡಿಸಿದ ಹರಿದಾಸರು,ಕೇವಲ ಅಲ್ಪ ಕಾಲದ ಆಯುಷ್ಯದಲ್ಲಿ ಮಹಾನ್ ಸಾಧನೆ ಮಾಡಿ ಜನ ಸಾಮಾನ್ಯರ ಮನೆ ಮನೆಗಳಲ್ಲಿ ಚಿರಸ್ಥಾನ ಪಡೆದ ಧ್ರುವತಾರೆ. ಇವರ ಆರಾಧನೆ ಭಾದ್ರಪ್ರದ ಶುದ್ಧ.ಪಂಚಮಿಯಂದು ಜರುಗುವುದು.

ಗೋವಿಂದಾಂಘ್ರಿಯುಗಾಸಕ್ತಂ
ಗೋಸುರಾಳಿ ಸುಸನ್ನತಂ
ಗೋಜಾತಾರಿ ಸುತಾಂಶಂ
ಗೋವಿಂದದಾಸಂ ಭಜೇನಿಶಂ ॥




ಸಿಂಗನ ಯೇರಿದ ನರಸಿಂಗ
ತೋಮರವ ಪಿಡಿದು
ಅಂಗ ರಂಗ ವೈಭೋಗದಿಂದ
ನಲಿದು ಚತುರಂಗ ಬೀದಿಯೊಳು ಮೆರೆದ ॥ಪ॥

ಮುತ್ತಿನ ಕಿರೀಟ ಮೇಲೆ
ಯೆತ್ತಿದ ಸತ್ತಿಗೆ ಪೊಳೆಯೆ
ಸುತ್ತ ಮುತ್ತ ಬೊಮ್ಮಾದಿಗಳು ವಾಹನ ರಥ
ಹತ್ತಿ ಬರುವ ಪುರದ ಜನಗಳು ॥೧॥

ಸನಕ ಸನಂದನ ಸನತ್ಸುಜಾತ
ಸನತ್ಕುಮಾರ ಮುನಿವರರು ವೇದ ಘೋ
ಷಣೆ ಉಚ್ಚರಿಸುತ
ಅನಿಮಿಷರಾಗಿ ಇಚ್ಛೈಸುತ ॥೨॥

ಗಂಧರ್ವಾದಿ ಗಾಯನ ನಾ
ರಂದ ಪಾಡುತ ಬರುತಿರೆ
ಇಂದು ಮೌಳಿ ಮುಂದೆ ಕುಣಿವುತ ಥೈಯ
ಯೆಂದು ತುಂಬುರನು ಹಾಡಿಪಾಡುತ ॥೩॥

ದಾಸಿ ಜನರು ರಂಭೆಯೂ
ರ್ವಶಿ ಪಾತ್ರ ಮಾಡುತಿರೆ
ದಾಸಾನುದಾಸರು ಪಾಡುತ ಸಲಹೋ ಶ್ರೀನಿವಾಸ ನೆಂದು
ಬೇಡಿಕೊಳುತಲಿರೆ ॥೪॥

ಮಂಗಳವಾಗಲಿ ಸಾಂಗೋ
ಪಾಂಗದಿ ಒಪ್ಪೆ ಅಲಮೇಲು
ಮಂಗೆ ರಮಣ ವಿಜಯವಿಠಲ ತಿರು
ವೆಂಗಳೇಶ ಶ್ರೀ ವೆಂಕಟೇಶ ॥೫॥

- ವಿಜಯದಾಸರು

## 108 ದಿವ್ಯ ದೇಶಗಳು

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**



# ತಿರುಇಂದಳೂರ್

ಪಂಚರಂಗವೆಂದು ಪ್ರಸಿದ್ಧಿಯನ್ನು ಪಡೆದ ಐದು ಕ್ಷೇತ್ರಗಳಲ್ಲಿ ಈ ಕ್ಷೇತ್ರವು ಒಂದಾಗಿದೆ. ಈ ಕ್ಷೇತ್ರವು ತಮಿಳುನಾಡಿನಲ್ಲಿನ ಮಾಯವರ ಎಂಬ ಪಟ್ಟಣದಲ್ಲಿದೆ. ಈ ದೇವಾಲಯ ಮೂರು ಪ್ರಾಕಾರಗಳೊಂದಿಗೆ, ಐದು ಅಂತಸ್ತುಗಳಲ್ಲಿ, ಅದ್ಭುತವಾದ ರಾಜಗೋಪುರದೊಂದಿಗೆ, ಕಾವೇರಿ ನದೀ ತೀರದಲ್ಲಿ ಶೋಭಾಯ ಮಾನವಾಗಿರಾರಾಜಿಸುತ್ತಿದೆ. ಈ ಕ್ಷೇತ್ರ ಸುಗಂಧವನ, ಪಂಚರಂಗ, ಪರಿಮಳ ರಂಗ, ಇಂದುಪುರಿ ಎಂದೂ ಕರೆಯಲ್ಪ ಡುತ್ತಿದೆ. ಈ ದಿವ್ಯದೇಶದಲ್ಲಿ ಸ್ವಾಮಿಯು ಪರಿಮಳ ರಂಗನಾಥನಾಗಿ ಪೂರ್ವದಿಕ್ಕಿಗೆ ಅಭಿಮುಖವಾಗಿ ನಿಂತು ಚತುರ್ಭುಜ ಗಳೊಂದಿಗೆ ಶಂಖಚಕ್ರಾದಿಗಳೊಂದಿಗೆ ದರ್ಶನವನ್ನು ನೀಡುತ್ತಿದ್ದಾನೆ.

ಹಾಗೇ ಮೂಲಮೂರ್ತಿಯ ಶಿರ ಸ್ಸಿನ ಸಮೀಪದಲ್ಲಿ ಕಾವೇರಿ ನದಿಯು ಪಾದಗಳ ಬಳಿ ಗಂಗಾಮಾತೆಯು ಕುಳಿತಿ ರುವ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿ ದ್ದಾರೆ. ಗರ್ಭಗುಡಿಯಲ್ಲಿ ಎಡಭಾಗದಲ್ಲಿ ಚಂದ್ರನು ಪಶ್ಚಿಮ ದಿಕ್ಕನ್ನು ನೋಡುತ್ತಿದ್ದರೆ, ಸೂರ್ಯನು ದಕ್ಷಿಣ ದಿಕ್ಕನ್ನು ನೋಡುತ್ತಾ ಭಗವಂತನ ಪರಿವಾರದ ದೇವತೆಗಳಾಗಿ ಸೇವೆಯನ್ನು ಮಾಡುತ್ತಿದ್ದಾರೆ.

| | |
|---|---|
| **ಸ್ವಾಮಿಯವರು** | |
| **ಮೂಲಮೂರ್ತಿ:** | **ಪರಿಮಳ ರಂಗನಾಥ** |
| **ಉತ್ಸವಮೂರ್ತಿ :** | **ಸುಗಂಧವನ ನಾಥ** |
| **ಅಮ್ಮನವರು** | |
| **ಮೂಲಮೂರ್ತಿ:** | **ಚಂದ್ರಶಾಪವಿಮೋಚನಾ ನಾಚ್ಚಿಯಾರ್** |
| **ಉತ್ಸವಮೂರ್ತಿ :** | **ಪರಿಮಳ ರಂಗನಾಯಕಿ** |
| **ಪುಷ್ಕರಿಣಿ:** | **ಇಂದು ಪುಷ್ಕರಿಣಿ** |
| **ವಿಮಾನಗೋಪುರ:** | **ವೇದಾಮೋದ ವಿಮಾನ** |
| **ಪ್ರತ್ಯಕ್ಷ:** | **ಚಂದ್ರನಿಗೆ** |
| **ಕ್ಷೇತ್ರ:** | **ಪಂಚರಂಗ ಕ್ಷೇತ್ರ** |
| **ಮುಖಸ್ಥಿತಿ :** | **ಶಯನ** |
| **ಮಂಗಳಾಶಾಸನ:** | **ತಿರುಮಂಗೈ ಆಳ್ವಾರ (11)** |
| **ಉತ್ಸವಗಳು :** | **ಪಂಗುಣಿ (ಫಾಲ್ಗುಣ ) ಮಾಸದಲ್ಲಿ 11 ದಿನಗಳ ಕಾಲ ಬ್ರಹ್ಮೋತ್ಸವ** |

### ಸ್ಥಳ ಪುರಾಣಗಳು :

1. ಚಂದ್ರನು ದಕ್ಷಪ್ರಜಾಪತಿಯು ತನ್ನ 27 ಜನ ಪುತ್ರಿಯರನ್ನು ಚಂದ್ರನಿಗೆ ಧಾರೆ ಎರೆದು ಕೊಟ್ಟಿದ್ದನು. ಆದರೆ ಚಂದ್ರನಿಗೆ ರೋಹಿಣಿ ಯೆಂದರೆ ಬಹಳ ಪ್ರೀತಿ. ಚಂದ್ರನು ರೋಹಿಣಿಯನ್ನು ಪ್ರೀತಿಸುತ್ತಾ, ತಮ್ಮ ನ್ನೆಲ್ಲಾ ಅಲಕ್ಷ್ಯದಿಂದ ಕಾಣುತ್ತಿರುವ ವಿಷಯವನ್ನು ಚಂದ್ರನ ಇತರ ಪತ್ನಿಯರು ತಮ್ಮ ತಂದೆಯಾದ ದಕ್ಷನ ದೃಷ್ಟಿಗೆ ತಂದರು. ಆಗ ದಕ್ಷನು ಚಂದ್ರನಿಗೆ ಹಲವು ಬಾರಿ ತಿಳಿ ಹೇಳಿದನು. ಆದರೂ ಚಂದ್ರನ ನಡವಳಿಕೆಯಲ್ಲಿ ಬದ ಲಾವಣೆಯಾಗಲಿಲ್ಲ. ಆಗ ದಕ್ಷನು "ಕ್ಷಯಗ್ರಸ್ತನಾಗಿ ಕ್ಷೀಣಿಸಿ ಹೋಗು" ಎಂದು ಕೋಪದಿಂದ ಚಂದ್ರನನ್ನು ಶಪಿಸಿದನು. ಶಾಪಗ್ರಸ್ಥ ನಾದ ಚಂದ್ರನು ತನ್ನ ಶಾಪ ವಿಮೋಚನೆಗಾಗಿ ಈ ಕ್ಷೇತ್ರಕ್ಕೆ ಬಂದು ಶ್ರೀಮಹಾವಿಷ್ಣುವನ್ನು ಕುರಿತು ತಪಸ್ಸು ಮಾಡಿ ದನು. ಚಂದ್ರನ ತಪಸ್ಸಿಗೆ ಮೆಚ್ಚಿದ ಶ್ರೀಮಹಾವಿಷ್ಣುವು, ತಪ್ಪು ಯಾರು ಮಾಡಿದರೂ ಅದು ತಪ್ಪೇ ಎಂದೂ ಶಾಪ ಫಲವನ್ನು ಅನುಭವಿಸಲೇಬೇಕು ಎಂದು ತಿಳಿಸಿ, ಮಾಸದಲ್ಲಿ ಹದಿನೈದು ದಿನಗಳ ಕಾಲ ಅಭಿವೃದ್ಧಿ, ಇನ್ನೂ ಹದಿನೈದು ದಿನಗಳ ಕಾಲ ಕ್ಷಯವನ್ನು ಅನುಭವಿಸಬೇಕೆಂದು ವರ ವನ್ನು ನೀಡಿ, ಶಾಪವನ್ನು ಸ್ವಲ್ಪವಾಗಿ ಉಪ ಶಮನ ಮಾಡಿದನು.ಆಗ ಚಂದ್ರನು ಈ ದಿವ್ಯ ದೇಶದಲ್ಲಿ ಒಂದು ಪುಷ್ಕರಿಣಿ ಯನ್ನು ನಿರ್ಮಿಸಿ ಅದರಲ್ಲಿ ಸ್ನಾನವನ್ನು ಮಾಡಿ, ಪರಿಮಳರಂಗನಾಥನನ್ನು, ಪರಿ ಮಳರಂಗನಾಯಕಿಯನ್ನು ಪ್ರತಿನಿತ್ಯವೂ ಸೇವೆ ಮಾಡುತ್ತಾ ಅವರ ಅನುಗ್ರಹ ದಿಂದಾಗಿ ಯಥಾ ಸ್ಥಿತಿಯನ್ನು ಪಡೆದ. ಚಂದ್ರನಿಗೆ ಶಾಪ ವಿಮೋಚನೆಯನ್ನು ಉಂಟು ಮಾಡಿದ ಕ್ಷೇತ್ರವಾಗಿದ್ದ ಈ ಕ್ಷೇತ್ರವು ಇಂದಲೂರು ಎಂಬ ಹೆಸರು ಪಡೆಯಿತು.

2. ಬ್ರಹ್ಮದೇವನ ಬಳಿ ಇದ್ದ ವೇದಗಳನ್ನು ರಾಕ್ಷಸರು ಅಪಹರಿಸಿದಾಗ, ಶ್ರೀ ಹರಿ ಆ ರಾಕ್ಷಸರನ್ನು ಸಂಹರಿಸಿ ವೇದ ಗಳನ್ನು ತಂದು ಪುನಃ ಬ್ರಹ್ಮದೇವನಿಗೆ ನೀಡಿದ. ವೇದಗಳು ಕೆಲವು ಕಾಲ ರಾಕ್ಷ ಸರ ಹತ್ತಿರದಲ್ಲಿದ್ದ ಕಾರಣದಿಂದಾಗಿ ದುರ್ಗಂಧಭರಿತವಾಗಿದ್ದುವು. ಆ ದುರ್ವಾಸನೆಯನ್ನು ಹೋಗಲಾಡಿಸುವುದಕ್ಕಾಗಿ ಬ್ರಹ್ಮದೇವನು ಈ ಸುಗಂಧ ಪುಣ್ಯಕ್ಷೇತ್ರಕ್ಕೆ ಬಂದು ತಪಸ್ಸು ಮಾಡಿದ. ನಾರಾಯಣನು ಮೆಚ್ಚಿ, ವೇದಗಳು ನಿತ್ಯವೂ ಸುಗಂಧಗಳನ್ನು ಹೊರಸೂಸುವಂತೆ ಮಾಡಲೆಂದು ಅನುಗ್ರಹಿಸಿದ.

3. ದಕ್ಷಿಣ ದಿಕ್ಕಿನಲ್ಲಿ ಆನಂದದಿಂದ ಅದ್ಭುತವಾಗಿ ಪ್ರವಹಿಸುವ ಕಾವೇರಿ ನದಿಯನ್ನು ಅನುಗ್ರಹಿಸಿದ. ಗಂಗಾ ನದಿಗಿಂತಲೂ ತನಗೇ ಅಧಿಕ ವಾದ ಪ್ರಾಮುಖ್ಯತೆ ದೊರೆಯಬೇಕೆಂದು ಕಾವೇರಿ ನದಿಯು ಬೇಡಿ ಕೊಂಡಾಗ ಪರಿಮಳ ರಂಗನಾಥ."ನೀನು ಎಲ್ಲೆಲ್ಲಿ ಪ್ರವಹಿಸುವೆಯೋ







ಅಲ್ಲೆಲ್ಲಾ ನಾನು ನೆಲೆಸುತ್ತೇನೆ'' ಎಂದು ಈ ದಿವ್ಯಕ್ಷೇತ್ರದಲ್ಲಿ ನೆಲೆಸಿದ ತುಲಾಮಾಸದಲ್ಲಿ ವಿಷ್ವಕ್ಸೇನನು ಭಗವಂತನ ಪ್ರತಿನಿಧಿಯಾಗಿ ಕಾವೇರಿ ನದಿಗೆ ಬಂದು ಆ ನದಿಯನ್ನು ಅನುಗ್ರಹಿಸಿದ. ಉಳಿದ ಹದಿನೈದು ದಿನಗಳ ಕಾಲ ರಂಗ ನಾಥನು ಒಂದೊಂದು ದಿನ ಒಂದೊಂದು ಅಲಂಕಾರವನ್ನು ಧರಿಸಿ ನಾಲಕ್ಕು ಸನ್ನಿಧಿ ಬೀದಿಯಲ್ಲಿ ಮೆರವಣಿಗೆಯಲ್ಲಿ ಬಂದು ಕಾವೇರಿ ನದಿಯನ್ನು ಅನುಗ್ರಹಿಸುತ್ತಾನೆ. ಗಂಗಾ ನದಿಯಲ್ಲಿ ಸ್ನಾನವನ್ನು ಆಚರಿಸಿದರೆ ಎಂತಹಾ ಪಾಪಾತ್ಮರ ಪಾಪಗಳೂ ಕಳೆಯುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ ಆದರೆ ತನ್ನಲ್ಲಿ ಶೇಖರವಾದ ಪಾಪಗಳನ್ನು ಕಳೆದುಕೊಳ್ಳ ಬೇಕೆಂದು ಗಂಗಾ ದೇವಿಯು ಭಗವಂತನ ಮೊರೆ ಹೊಕ್ಕಳು ಆಗ ಭಗವಂತನು ಗಂಗಾ ನದಿಯನ್ನು ಸಮಾಧಾನ ಪಡಿ ಸುತ್ತಾ ತುಲಾ ಮಾಸದಲ್ಲಿ ಮೂವತ್ತು ದಿನಗಳ ಕಾಲ ಈ ದಿವ್ಯ ದೇಶದಲ್ಲಿ ಕಾವೇರಿ ನದಿಯೊಂದಿಗೆ ಸಂಗಮವಾದರೆ ನಿನ್ನ ಪಾಪವೆಲ್ಲಾ ಕಳೆದು ಹೋಗುತ್ತದೆಂದು ತಿಳಿಸಿದ. ಆದ್ದರಿಂದ ಗಂಗಾಮಾತೆಯು ತುಲಾಮಾಸದಲ್ಲಿ ಈ ಕ್ಷೇತ್ರ ದಲ್ಲಿ ಕಾವೇರಿ ನದಿಯೊಂದಿಗೆ ಸೇರಿ ಪವಿತ್ರಳಾಗುತ್ತಾಳೆ.

ಆದ್ದರಿಂದ ಇಲ್ಲಿ ನೆಲೆಸಿರುವ ಪರಿಮಳ ರಂಗನಾಥ ನನ್ನು ಸೇವಿಸುವುದರಿಂದ ಸಕಲ ಸೌಭಾಗ್ಯಗಳು ಉಂಟಾ ಗುತ್ತದೆ. ಮನಸ್ಸಿನಲ್ಲಿ ಮಲಿನವನ್ನೆಲ್ಲಾ ಕಳೆದುಕೊಂಡು ಪವಿತ್ರರಾಗಿ ಇಹಪರ ಸೌಖ್ಯಗಳನ್ನು ಪಡೆಯುತ್ತಾರೆ.

## ಮುತ್ತಿನ ಪಲ್ಲಕ್ಕಿ ವಾಹನ

**ಧ್ವಜದ ತಿಮ್ಮಪ್ಪ ಪಲ್ಲಕ್ಕಿಯೇರಿ ತನ್ನಯ**
**ನಿಜಗಿರಿ ಯಾತ್ರೆ ಗೈದಿದ ಹರುಷವ ಕೇಳಿ ॥ಪ॥**

**ಬಲದಲಬುಜ ಭವಾದಿಗಳೆಡದಲಿ**
**ಉಲಿದ ವೇದ - ಉಪನಿಷದುಗಳು**
**ಸಲುಗೆಯಲಿ ನಸಕಾದಿಗಳು ಸೇವಿಸೆ ಮುನ್ನ**
**ಹಲವು ಋಷಿ ಮುನಿ ನಿಕರ ಹಿಂದೆ ಬರುತಿರಲು ॥೧॥**

**ಛತ್ರವ ಶಶಿ ಚಾಮರವ ಢಾಳಿಸೆ ಇಂದ್ರ**
**ಚಿತ್ತಜಾತನು ವ್ಯಜನವ ಬೀಸಲು**
**ಹೊತ್ತು ಮಾರುತಿ ಹಡಪ ಹೊಳೆವೆಲೆಗಳ ಕೊಡಲು**
**ಹಸ್ತದ ಕಾಳಂಜಿ ಹರಿಣಾಂಕನು ಬರೆ ॥೨॥**

**ವರುಣನು ಸ್ವಾದುಜಲ ಪಿಡಿದು ಬರೆ**
**ತರುಣಿ ತನಗೆ ಆಧಾರದಂತಿರಲು**
**ಸುರರು ಸುಮನಗಳಿಂದ ಸರ್ವರೂ ತಮ ತಮ್ಮ**
**ಪರಿಪರಿ ಆಯುಧಂಗಳ ಬಳಸಿಬರೆ ॥೩॥**

**ಮಂದರ ಮಧ್ಯಮ ತಾರಕ ಮೋಹನ**
**ದಿಂದ ಗಂಧರ್ವರು ಗಾನ ಮಾಡೆ**
**ತೋಂಧಿಮಿ ಧಿಮಿಕೆಂದು ತಾಳ ಮೇಳದಿ ನಾ**
**ರಂದ ಪಾಡಲು ಆಡುತಾಡುತ ಬರುತಿರೆ ॥೪॥**

**ಲೋಕನಾಯಕ ಲೋಕೈಕ ರಕ್ಷಾಮಣಿ**
**ಸಾಕಾರರೂಪ ಸದ್ಗುಣ ಭರಿತ**
**ವೆಂಕಟೇಶ ವ್ಯಾಸಮುನಿ ವರದನಾದ ಕರು**
**ಣಾಕರ ಪುರಂದರ ವಿಠಲನು ಗರುಡ ॥೫॥**

**- ಪುರಂದರದಾಸರು**



# ಕೋಟಿ ಗೋವಿಂದನಾಮ ಲಿಖಿತಕ್ಕೆ ಪಾಲಿಸಬೇಕಾದ ಸಾಧಾರಣ ನಿಯಮಗಳು




1. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತಿದಿನವೂ ಒಂದು ಪ್ರತ್ಯೇಕವಾದ ಸಮಯದಲ್ಲಿ ಪೂರ್ವದಿಕ್ಕಿಗೆ ಕುಳಿತು ಪ್ರಾರಂಭಿಸಬೇಕು.

2. ಪ್ರತಿದಿನವೂ ಕೋಟಿ ಗೋವಿಂದ ನಾಮವನ್ನು ಬರೆಯುವ ಮೊದಲು ಮನಸ್ಸಿನಲ್ಲೇ ಶ್ರೀವೆಂಕಟೇಶ್ವರನಿಗೆ ನಮಸ್ಕರಿಸಬೇಕು.

3. ಗೋವಿಂದನಾಮವನ್ನು ಬರೆಯಬೇಕೆಂದು ಕೊಂಡಾಗ ಶ್ರೀವೆಂಕಟೇಶ್ವರ ಸ್ವಾಮಿಯ ಪಟದ ಮುಂದೆ ಅಥವಾ ವಿಗ್ರಹದ ಮುಂದೆ ಮಾನಸಿಕವಾಗಿ ಸಂಕಲ್ಪವನ್ನು ಮಾಡಿಕೊಳ್ಳಬೇಕು.

4. ಒಳ್ಳೆಯ ದಿನವನ್ನು, ನೋಡಿಕೊಂಡು ಪುಸ್ತಕಕ್ಕೆ ಅರಿಶಿನ , ಕುಂಕುಮವನ್ನುಇಟ್ಟು ದೇವರ ಸನ್ನಿಧಿಯಲ್ಲಿ ಇರಿಸಿ. ಹೂಗಳೊಂದಿಗೆ ಶ್ರೀವೇಂಕಟೇಶ್ವರ ಸ್ವಾಮಿಯ ಅಷ್ಟೋತ್ತರ ಶತನಾಮಾವಳಿಯೊಂದಿಗೆ ಪೂಜಿಸಬೇಕು.

5. ಗೋವಿಂದ ನಾಮವನ್ನು ಬರೆಯುವಾಗ ಇತರ ಕೆಲಸಗಳನ್ನು ಯೋಚನೆಗಳನ್ನು ಮಾಡಬಾರದು. ಮನಸ್ಸು ಅಚಲವಾಗಿರಿಸಿಕೊಂಡು ಗೋವಿಂದಾ! ಎಂದು ಸ್ಮರಿಸುತ್ತಾ ಮನಸ್ಸನ್ನು ದೇವರಲ್ಲೇ ಕೇಂದ್ರೀಕರಿಸಿಕೊಂಡು ಬರೆಯಬೇಕು.

6. ಅಕಸ್ಮಾತ್ತಾಗಿ ಯಾವುದಾದರೂ ಕೆಲಸದ ಮೇಲೆ ಹೊರಗೆ ಹೋಗಬೇಕಾದಲ್ಲಿ ಒಂದು ಸರಿಸಂಖ್ಯೆಯಲ್ಲಿ ಗೋವಿಂದನಾಮವನ್ನು ಬರೆಯುವುದನ್ನು ನಿಲ್ಲಿಸಿ ಪುಸ್ತಕವನ್ನು ಮುಚ್ಚಿ ನಮಸ್ಕರಿಸಿ ಹೋಗಬೇಕು. ಕೆಲಸವಾದ ನಂತರ ಕೈಕಾಲುಗಳನ್ನು ತೊಳೆದುಕೊಂಡು ಶುಚಿಯಾಗಿ ಮತ್ತೆ ಬರೆಯುವುದನ್ನು ಪ್ರಾರಂಭಿಸಬೇಕು.

7. ಕೋಟಿ ಗೋವಿಂದ ನಾಮವನ್ನು ಬರೆಯುವ ಪುಸ್ತಕವನ್ನು ಭದ್ರವಾಗಿರಿಸಿಕೊಳ್ಳಬೇಕು. ಅದರಲ್ಲಿ ಇತರ ಯಾವುದೇ ವಿಷಯಗಳನ್ನು ಬರೆಯಬಾರದು.ಇದಕ್ಕೆ ಉಪಯೋಗಿಸುವ ಲೇಖನಿಯನ್ನೂ ಪ್ರತ್ಯೇಕವಾಗಿರಿಸಿಕೊಳ್ಳಬೇಕು.

8. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತ್ಯೇಕವಾದ ಸಮಯವೆನ್ನುವುದು ಇರುವುದಿಲ್ಲ. ಆದರೆ ಶುಚಿ, ಶುಭ್ರತೆ, ಪವಿತ್ರತೆಯನ್ನು,ಪ್ರಶಾಂತತೆಯನ್ನು ಪಾಲಿಸಬೇಕು. ಒಂದು ವೇಳೆ ನಿದ್ದೆ ಬರುತ್ತಿದ್ದರೆ, ನಿದ್ದೆಯನ್ನು ತಡೆದುಕೊಂಡು ಬರೆಯಬಾರದು.

9. ಪ್ರತಿ ಲಕ್ಷ ನಾಮಗಳಿಗೆ ಪ್ರತ್ಯೇಕವಾದ ಪೂಜೆ, ನೈವೇದ್ಯವನ್ನು ಮಾಡಿ ಪ್ರಸಾದವನ್ನು ಹಂಚಬೇಕು. ಕೋಟಿಗೋವಿಂದ ನಾಮವನ್ನು ಬರೆದ ನಂತರ ಶಕ್ತ್ಯಾನುಸಾರ ಪೂಜೆ, ನೈವೇದ್ಯವನ್ನು ಸಮರ್ಪಿಸಿ ಆರಾಧನೆಯನ್ನು ಮಾಡುವುದು ಒಳ್ಳೆಯದು .

10. ಕೋಟಿ ಗೋವಿಂದನಾಮವನ್ನು ಬರೆದು ಮುಗಿಸಿದ ನಂತರ ಆ ಪುಸ್ತಕವನ್ನು ಅರಿಸಿನದ ಬಟ್ಟೆಯಲ್ಲಿ ಸುತ್ತಿ ತಿರುಮಲೆಯ ಶ್ರೀವೆಂಕಟೇಶ್ವರನಿಗೆ ಸಮರ್ಪಿಸಬೇಕು.

11. ಈ ರೀತಿ ಗೋವಿಂದ ನಾಮಕೋಟಿಯನ್ನು ಭಕ್ತರು ನಿಷ್ಠೆಯಿಂದ ಬರೆದರೆ ಮನಸ್ಸಿನಲ್ಲಿ ಅಂದುಕೊಂಡ ಕೆಲಸಗಳನ್ನು ದಿಗ್ವಿಜಯವಾಗಿ ಪೂರ್ತಿಯಾಗುತ್ತವೆ.

12. ಯಾವುದಾದರೂ ಕೆಲಸವು ಪೂರ್ತಿಯಾಗಬೇಕೆಂದು ಸಂಕಲ್ಪಿಸಿಕೊಂಡು ಕೋಟಿ ಗೋವಿಂದನಾಮವನ್ನು ಬರೆಯಲು ಪ್ರಾರಂಭಿಸಿದರೆ ಅದು ಖಂಡಿತವಾಗಿಯೂ ನೆರವೇರುತ್ತದೆ.

13. ಅಶುಚಿಯಾಗಿದ್ದಾಗ, ಮೈಲಿಗೆಯ ಸಮಯದಲ್ಲಿ ಗೋವಿಂದ ನಾಮವನ್ನು ಬರೆಯಬಾರದು.

14. ಸ್ತ್ರೀ, ಪುರುಷರು, ವಯಸ್ಸು ತಾರತಮ್ಯಗಳಿಲ್ಲದಂತೆ ಕೋಟಿ ಗೋವಿಂದ ನಾಮವನ್ನು ಬರೆಯಬಹುದು.

# त्रयस्त्रिंशः पाठः

## ಪಾಠ : 33

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

| | ए | | ब | | ए | | ब | |
|---|---|---|---|---|---|---|---|---|
| प्र - | रामः - | ರಾಮನು | रामाः - | ರಾಮರು | फलम् - | ಹಣ್ಣು | फलानि - | ಹಣ್ಣುಗಳು |
| द्वि - | रामम् - | ರಾಮನನ್ನು | रामान् - | ರಾಮರುಗಳನ್ನು | फलम् - | ಹಣ್ಣನ್ನು | फलानि - | ಹಣ್ಣುಗಳನ್ನು |
| त्रु- | रामेण - | ರಾಮನಿಂದ | रामैः - | ರಾಮರುಗಳ | फलेन - | ಹಣ್ಣಿನಿಂದ | फलैः - | ಹಣ್ಣುಗಳಿಂದ |
| च- | रामाय - | ರಾಮನಿಗೋಸ್ಕರ | रामेभ्यः | ರಾಮಗಳಿಗೋಸ್ಕರ | फलाय - | ಹಣ್ಣಿಗೋಸ್ಕರ | फलेभ्यः - | ಹಣ್ಣುಗಳಿಗೋಸ್ಕರ |
| पं- | रामात्- | ರಾಮನದೆಸೆಯಿಂದ | रामेभ्यः- | ರಾಮರುಗಳದೆಸೆಯಿಂದ | फलात् - | ಹಣ್ಣಿನ ದಸೆಯಿಂದ | फलेभ्यः- | ಹಣ್ಣುಗಳ, ಹಣ್ಣುಗಳಿಗೆ |
| ष - | रामस्य - | ರಾಮನಿಗೆ, ರಾಮನ | रामाणाम् - | ರಾಮರುಗಳಿಗೆ | फलस्य - | ಹಣ್ಣಿನ , ಹಣ್ಣಿಗೆ | फलानाम् - | ಹಣ್ಣುಗಳ, ಹಣ್ಣುಗಳಿಗೆ |
| स - | रामे - | ರಾಮನಲ್ಲಿ | रामेषु - | ರಾಮರುಗಳಲ್ಲಿ | फले - | ಹಣ್ಣಿನಲ್ಲಿ | फलेषु - | ಹಣ್ಣುಗಳಲ್ಲಿ |
| सं. प्र.- | हे राम!- | ಎಲೈ ರಾಮನೇ | रामाः- | ಎಲೈ ರಾಮರುಗಳೇ | हे फल! - | ಎಲೈ ಹಣ್ಣೇ | हे फलानि! - | ಎಲೈ ಹಣ್ಣುಗಳೇ |

### अम्बा शब्दः - स्त्रीलिङ्गः (ಸ್ತ್ರೀಲಿಂಗವು ) (ಅಮ್ಮ)

| | | ए | | ब |
|---|---|---|---|---|
| प्र - | अम्बा - | ಅಮ್ಮ | अम्बाः - | ಅಮ್ಮಂದಿರು |
| द्वि - | अम्बाम् - | ಅಮ್ಮನನ್ನು | अम्बाः - | ಅಮ್ಮಂದಿರನ್ನು |
| त्रु - | अम्बया - | ಅಮ್ಮನಿಂದ | अम्बाभिः - | ಅಮ್ಮಂದಿರಿಂದ |
| च- | अम्बायै- | ಅಮ್ಮನಿಗೋಸ್ಕರ | अम्बाभ्यः - | ಅಮ್ಮಂದಿರಿಗೋಸ್ಕರ |
| प - | अम्बायाः- | ಅಮ್ಮನ ದೆಸೆಯಿಂದ | अम्बाभ्यः - | ಅಮ್ಮಂದಿರ ದೆಸೆಯಿಂದ |
| ष- | अम्बायाः- | ಅಮ್ಮನ, ಅಮ್ಮನಿಗೆ | अम्बानाम् - | ಅಮ್ಮಂದಿರ, ಅಮ್ಮಂದಿರಿಗೆ |
| सं - | अम्बायाम्- | ಅಮ್ಮನಲ್ಲಿ | अम्बासु - | ಅಮ್ಮಂದಿರಲ್ಲಿ |
| सं प्र.- | हे अम्ब!- | ಎಲೈ ಅಮ್ಮನೇ | हे अम्बाः!- | ಎಲೈ ಅಮ್ಮಂದಿರೇ |

**ಅಕಾರಾಂತ ಪುಂಲಿಂಗ ಶಬ್ದಗಳೆಲ್ಲವು राम ಶಬ್ಧದಂತೆ. ಅಕಾರಾಂತ ನಪುಂಸಕಲಿಂಗ ಶಬ್ದಗಳೆಲ್ಲವು फल ಶಬ್ದದಂತೆ. ಆಕಾರಾಂತ ಸ್ತ್ರೀಲಿಂಗ ಶಬ್ದಗಳೆಲ್ಲವು ಸಂಬೋಧನ ಏಕವಚನವನ್ನು ಬಿಟ್ಟು अम्बा ಶಬ್ದದಂತೆ ಸಾಧಾರಣವಾಗಿ ಹೇಳಲ್ಪಡುತ್ತವೆ.**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

– ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

– ಅನುವಾದ : ಶ್ರೀಮತಿ



**ಕಳೆದ ಸಂಚಿಕೆಯಿಂದ**

ತರುವಾಯ ಆ ಗಾಯಕರನ್ನು ನಿಮ್ಮ ನಿಮಿತ್ತದಿಂದಾಗಿ ಶ್ರೀನಿವಾಸನು ನನ್ನ ಮೇಲೆ ತೋರಿದ ಅನುಗ್ರಹವನ್ನು ನಾನು ಬಣ್ಣಿಸಲಾರೆ ಎಂದು ಹೇಳಿ ಹಿಂದೆಲೇ ಶ್ರೀಶೈಲನಾಥ ಸ್ವಾಮಿ ತೋರಿಸಿದ ಅನುಗ್ರಹಾತಿಶಯವನ್ನೂ ವಿಧಿಸಿದ ನಿಯಮವನ್ನು ಶ್ರೀಶೈಲಪೂರ್ಣರು, ,ಶ್ರೀಅನಂತಾಚಾರ್ಯರು ಆಣತಿ ಮಾಡಿದ ನಿಯಮಗಳನ್ನೂ ನಡೆಸುವಂತೆ ಶ್ರೀಭಗವದ್ರಾಮಾನುಜಾಚಾರ್ಯರು ಕೇಳಿ, ಆನಂದಿಸಿ, ಮನಸ್ಸಿನಲ್ಲಿ ಆಲೋಚಿಸಿ ಮೊದಲಾಳ್ವಾರ ಮೂವರನ್ನು ತಮ್ಮ ತಮ್ಮ ಪ್ರಬಂಧಗಳಲ್ಲಿ "ಎಳವಾರ್‌ವಿಡೈಕೊಳ್ವಾರ್, ವೇದಿಯರ್ಗಳ್‌ಶೇನಿ ವುಂಜಮ್‌ವೇಂಗಡಂ" (ಐಶ್ವರ್ಯ ಕಾಮಗಳು, ಕೈವಲ್ಯ ಕಾಮಗಳನ್ನು ಬಿಟ್ಟು ವೇದವಿದರು ಸೇರಿ ನಡೆಯಲು ಶ್ರೀವೆಂಕಟಾದ್ರಿ) ಪೆಳುದೊನ್ನುಂ ವಾರಾದವಣ್ಣಂವಿಣ್ ಕೊಡುಕ್ಕುಂ ಮಣ್ಣಳಂದ ಶ್ರೀರಾನ್ ತಿರುವೆಂಗಡಂ (ನಿರ್ದೋಷದಿಂದ ಮೋಕ್ಷ ನೀಡುವ ಗುಣಾಢ್ಯನಾದ ತ್ರಿವಿಕ್ರಮ ರೂಪನಾದ (ಶ್ರೀನಿವಾಸನನ್ನು) ಶ್ರೀವೇಂಕಟಾದ್ರಿಯ ಮೇಲೆ ಸ್ಥಿತನಾಗಿದ್ದು ನಮ್ಮಂತಿರುವವರೆಲ್ಲರಿಗೆ ತಿಳಿಸುವುದು) ನಿನತುವುವಂ ವೇಯಾಂಗು ತಣ್‌ಶಾರಲ್ ವೇಂಗಡಮೇ' (ವೇಂಕಟಾದ್ರಿಯ ಮೇಲೆ ನೆಲೆಸಿರುವ ಬಾನೆತ್ತರಕ್ಕೆ ಬೆಳೆದ ತಂಪು ಸಸ್ಯಗಳು)'ವಾಯ್ ತಿರಂಗಳ್ ಶೊಲ್ಲುಂವಗ್ಯೆ' (ನಾವಾಕ್ಕು ವೇಂಕಟೇಶ್ವರನ ಗುಣಗಳನ್ನು ಕೀರ್ತಿಸುವುದು ದೊರಕುವುದು) ವೇಂಗಡಮೇಯಾಮ್ ವಿರುಂಬುಮ್ ವೆಳ್ತು (ವೇಂಕಟಾಚಲವೇ ನಾವು ಆಶಿಸಿದ ಬೆಟ್ಟ), ತಿರುವೇಂಗಡಮ್ ಕಂಡಿರ್ ವಾನ್‌ಕಲಂದ ವೆಣ್ಣನ್ ವರ್ರೈ (ನೋಡಿರಿ ಮೇಘವರ್ಣ ಸಮಾನವಾದ ಈ ವೇಂಕಟಾದ್ರಿ ಬೆಟ್ಟವನ್ನು),'ಪಿರೈವಾವಾಯೇಂದ ವೆಳ್ಳತ್ತರುನಿ ವಿಳಂಗಾಲಿ ನಿರ್ ವೇಂಗಡತ್ತಾನ್ ಉಳ್ಳೈತ್ತಿ ಮಳ್ಳೈಯಳನ್ (ಚಂದ್ರನನ್ನು ಸ್ಪರ್ಶಿಸುವ ನದಿ, ದೊಡ್ಡದಾಗಿ ಪ್ರವಹಿಸುವ ಘೋರ್ಗರೆವ ದನಿಯಿಂದ, ಜಲಗಳಿಂದ ತುಂಬಿ ಹರಿಯುವ ನದಿಗಳಲ್ಲಿ ವೇಂಕಟಾಚಲ ಪ್ರಭುವು ಮಿನುಗುವವನು)ವೆಣ್ಣಿನ್ನು ವೇಂಗಡಂಪಾಡುಂ (ಬೆಟ್ಟದಲ್ಲಿಯೇ ತಿರುಮಲೆ ಬೆಟ್ಟವನ್ನು ನೆಲೆಯಾಗಿಸಿರುವವನು) ಎನ್ನುವ ರೀತಿಯಲ್ಲಿ ಉಪಸ್ಥಳವಾದ ಶ್ರೀಶೇಷ ಶೈಲದಲ್ಲಿ ಅಂದು ಸರ್ವಸುಲಭನಾಗಿದ್ದ ಭಗವಂತನು ತಮಗೆಲ್ಲರಿಗೂ ಮಿಗಿಲಾದ ಅನುಭಾವ್ಯ ವಿಷಯದಲ್ಲಿ ವರ್ಣಿಸುವಂತೆಯಲ್ಲದೇ ಶ್ರೀವೇಂಕಟಾದ್ರಿಗೆ

ಯಾತ್ರೆಗೆಂದು ಬಂದು ತಿರುಮಲೆ ಮಹಾದ್ವಾರದಲ್ಲಿ ಹಲವು ಕಾಲ ಮಂಗಳ ಶಾಸನ ಪರರಾಗಿ ಭಗವದನುಭವವನ್ನು ಪಡೆದು ಕೊಂಡಿದ್ದರೆಂಬ ಅರ್ಥವನ್ನು ನಂತರ ತಿರುವಂಗೈಯಾಳ್ವಾರರ ಹೃದಯ ಸ್ಥಿತವಾದ ಸಾರ ಹೇಳುವಂತೆ ಅಂದವಾದ ಗಾಯನವನ್ನು ಮಾಡಿದ ಸರಸಿ ದೇವನು ಎಂದು ಮೊದಆಳ್ವಾರರೇ ಮೊದಲಾದ ಮೂವರಿಗೆ ಶ್ರೀವೇಂಕಟಾಚಲಪತಿಯೇ ಆವಿರ್ಭವಿಸಿದ ವಿಷಯವನ್ನು ತಮ್ಮ ಶ್ರೀಸೂಕ್ತದಲ್ಲಿ ಪ್ರಕಾಶಪಡಿಸಿರುವ ಅರ್ಥದಂತೆ ಶ್ರೀರಂಗನಾಥರ ಶಿಷ್ಯ ಸಂಪ್ರದಾಯವನ್ನು ಕೇಳಿದ್ದನ್ನೇ ಹೇಳಿದರೆಂದು ತಿಳಿದು ಶ್ರೀನಾಥರಾಯರ ವಂಶಸ್ಥರಾದ ಒಬ್ಬ ಗಾಯಕನನ್ನು 'ಮಲೈಕುನಿಯನಿನ್ವಾರರಯರ್' ಎಂಬ ನಾಮಧೇಯವನ್ನು ನೀಡಿ ಶೇಷಾಚಲದ ಮೇಲೆ ನಿತ್ಯವಾಸರಾಗಿ ಜಯವಿತ್ತು, ದಿವ್ಯ ಸೂರರ ದಿವ್ಯ ಪ್ರಬಂಧಗಳನ್ನು ಅನುದಿನವೂ ದೇವಗಾನದೊಂದಿಗೆ ಸ್ವಾಮಿ ಸನ್ನಿಧಿಯಲ್ಲಿ ಅನುಸಂಧಾನ ಮಾಡಲು, ಅಂದು ಶ್ರೀವೇಂಕಟರಮಣನು ಗಾಯಕರ ಮೇಲೆ ಕೃಪೆ ತೋರಿ ಅವರ ಮುಖಕಮಲಗಳಿಂದ ಮುದಲಾಳ್ವಾರರ ಶ್ರೀಸೂಕ್ತವನ್ನು ಸ್ವೀಕರಿಸಿ ಹೃದಯದಲ್ಲಿ ಆನಂದ ಹೊಂದಿದ ದೆಸೆಯಿಂದಲೇ ಇನ್ನು ಮುಂದೆ ಭವಿಷ್ಯತ್ಕಾಲದಲ್ಲೆಲ್ಲಾ ಅಧ್ಯಯ ನೋತ್ಸವಕ್ಕೂ ಮೊದಲು ಮುದಲಾಳ್ವಾರರ ಶ್ರೀಸೂಕ್ತದವರಾದ ತಿರುಮಂತಾದರೇ ಮೊದಲಾದುವುಗಳನ್ನು ಮೂರರಿಂದ ಆರಂಭಿಸಿ ಇಯಚ್ಚಾ ದಿವ್ಯ ಪ್ರಬಂಧವನ್ನು ಅನುಸಂಧಿಸುವಂತೆ ಮರುದಿನ ಆರಂಭಿಸಿ ಶ್ರೀರಂಗದಲ್ಲಿರುವಂತೆ ತಿರುಪ್ಪಾವೈ ಮೊದಲಾದ ತಿಕ್ಕುಂಗಲ ಪ್ರಬಂಧಗಳನ್ನು ಅನುಸಂಧಾನ ಮಾಡಿ, ನಂತರ ಏಕಾದಶಿಯ ಗಾನ ಆರಂಭಿಸಿ ಶ್ರೀಮುಖಸೂಕ್ತಿಗೆ (ತಿರುವಾಯ್‌ಮುಳಿ) ಅನುಸಂಧಾನವನ್ನು ಪೂರ್ತಿಗೊಳಿಸಿ ಮಾರನೇ ದಿನದಂದು ಅನಂತಾರ್ಯರು ವೇಂಕಟಾಚಲದ ಮೇಲೆ ಶ್ರೀವೇಂಕಟಾಚಲಪತಿ ಶ್ರೀಪಾದಗಳಲ್ಲಿ ನಿರ್ದಿಷ್ಟವಾದ ಕೈಂಕರ್ಯವನ್ನು ತಾವು ಮಾಡಬೇಕೆಂದು ಪ್ರಾರ್ಥಿಸಿದ ಕೈಂಕರ್ಯವು ಪ್ರತಿದಿನವೂ ಮಾಡಿಕೊಳ್ಳಲು ಮೋಕ್ಷವುಂಟೆಂದು ಶ್ರೀವೈಷ್ಣವರಿಗೆ ನಿತ್ಯಾನುಸಂಧಾನ ಮಾಡುವಂತೆ ದಿವ್ಯಸೂರಿ ಶ್ರೀಸೂಕ್ತದ ಕುರಿತಾಗಿ ಪ್ರವಚನ ಮಾಡುತ್ತಾ ಮಧುರಕವಿಯಾದ ನಮ್ಮಾಳ್ವಾರರ ಶ್ರೀಪಾದಗಳ ಮೇಲೆ ಪ್ರೇಮಾತಿಶಯದಿಂದ ಚರಮ ಪುರುಷಾರ್ಥ(ಆಚಾರ್ಯನಿಷ್ಠೆ) ಪ್ರತಿಪಾದಕವಾದ "ಕಣ್ಣಿ ನುಣ್ ಶಿರುತ್ತಾಂಬು"ಎಂಬ ಪ್ರಬಂಧವನ್ನು ಅನುಷ್ಠಾನ ಪರ್ಯಂತವಾಗಿ ಅನುಸಂಧಾನ ಮಾಡುವುದರೊಂದಿಗೆ ಚರಮ ಪರ್ವದಲ್ಲಿನ (ಆಚಾರ್ಯನಿಷ್ಠೆ) ನಿಂತು ಮಧುರಕವಿದಾಸನೆಂಬ ನಾಮಧೇಯವನ್ನು ಹೊಂದಿದರಿಂದಲೇ ಅವರು ಪ್ರೇಮದಿಂದ ಅನುಭವಿಸಿದ "ಕಣ್ಣಿನುಣ್ ಶಿರತ್ತಾಂಬು" ಎಂಬ ಪ್ರಬಂಧವನ್ನು ಸನ್ನಿಧಿಯಲ್ಲಿ ಅನುಸಂಧಾನ ಮಾಡಿ, ಅನಂತಾರ್ಯರಿಗೆ ಈ ಪ್ರಕಾರವಾಗಿ ಒಂದು ಶ್ರೀ ಮುಖಶಾಸನವನ್ನು ಅನುಗ್ರಹಿಸುವಂತೆ ನಿಯಮಿಸಿ ಅನುಗ್ರಹಿಸಿ "ಮಲೈಕುನಿಯನಿನ್ವಾರ್" ಎಂಬ ಪ್ರಬಂಧ ಗಾಯಕರಿಗಳಿಗೆ ವೇಂಕಟಾಚಲವನ್ನೇ ವಾಸಸ್ಥಾನವಾಗಿ ಮಾಡಿಕೊಂಡಿರುವುದು ಎಂದು ನಿಯಮಿಸಿ ತಿರುಮಲಕ್ಕೆ ಕಳಿಸಿಕೊಟ್ಟಿದ್ದಾರೆ.

ಪ್ರಬಂಧಗಾಯಕರು ಶ್ರೀಮುಖ ಶಾಸನವನ್ನು ಶಿರಸಾ ವಹಿಸಿ ಸಹಕುಟುಂಬದವರ ಮೇಲೆ ತಿರುಮಲೆಯ ಮೇಲೆ ಜಯಗೊಂಡು ಮೊದಲು ಶ್ರೀಶೈಲಾನಂತಾರ್ಯರ ಭವನಕ್ಕೆ ಹೋಗಿ ಪರಸ್ಪರಾ ಭೃತ್ಯಾಧನಾಭಿನಂದನಾಲಯದಲ್ಲಿ, ನಂತರ ಶಾಸನ ಶ್ರೀಮುಖವನ್ನು ಕೊಡಲು ಅನಂತಾರ್ಯರು ಅದನ್ನು ಕೈಗೊಂಡು ಆದ ಮೇಲೆ ಸಂತೋಷಿಸಿ ಗಾಯಕರಿಂದ ಶ್ರೀಶೈಲಪೂರ್ಣರ ಭವನಕ್ಕೆ ಕರೆತರಲು ಅತಿಪ್ರೀತಿ ಪಾತ್ರರಾಗಿ ಪರಸ್ಪರ ಅಭಿನಂದನೆಗಳನ್ನು ಸಲ್ಲಿಸಿಕೊಂಡರು. ನಂತರ ಗಾಯಕರು ಅವರಿಂದ ಆ ವೃತ್ತಾಂತವನ್ನೆಲ್ಲಾ ಕೇಳಿಸಿಕೊಂಡ ಶ್ರೀಪೂರ್ಣರು ಅದನ್ನು ಕೇಳಿ ಮನಸ್ಸಿನಲ್ಲಿ ಮುದಗೊಂಡು ಅನಂತಾರ್ಯರೊಡನೆಯೂ,ಗಾಯಕರೊಡನೆಯೂ ಸೇರಿ ಶ್ರೀವೇಂಕ ಟೇಶ್ವರಸ್ವಾಮಿ ಸನ್ನಿಧಿಗೆ ತೆರಳಿ "ದೇವರ ದೂತರಾದ ಶ್ರೀಭಗವದ್ರಾಮಾನುಜರ ನಿಯಮದ ಪ್ರಕಾರವೇ ಸ್ವೀಕರಿಸಲಾಗುವುದು"ಎಂದು ಮನವಿಯನ್ನು ಮಾಡಲು ಶ್ರೀ ವೇಂಕಟಪತಿ ಇದನ್ನು ಕೇಳಿ ಆನಂದದಿಂದ ನಮ್ಮ ಭಗವದ್ರಾಮಾನುಜರ ನಿಯಮವನ್ನೇ ಪಾಲಿಸತಕ್ಕದ್ದು ಎಂದು ಹೇಳಿ ಆನಂದಭರಿತನಾಗಿ ಅರ್ಚಕರ ಮುಖೇನ ಶ್ರೀಶೈಲಪೂರ್ಣರಿಗೂ, ಅನಂತಾರ್ಯರಿಗೂ, ಗಾಯಕರಿಗೂ ಭಗವದನುಗ್ರಹಕ್ಕೆ ಪಾತ್ರರಾಗ ಬೇಕೆಂದು ಹೇಳಲು ಮಂಗಳಶಾಸನವನ್ನು ಪ್ರಸಾದಿಸಿದರು.

ನಂತರ ಅನಂತಾರ್ಯರು ಪ್ರತಿವರ್ಷವೂ ಅಧ್ಯಯನೋತ್ಸವಕ್ಕೆ ಮೊದಲೇ ಇಯಚ್ಚಾಗೂ ಮುಂಚಿತವಾಗಿ ದಿವ್ಯ ಪ್ರಬಂಧವನ್ನು ಅನುಸಂಧಾನ ಮಾಡಲು ಅನುವಾಗಲು, ತದನಂತರ ಅಧ್ಯಯನೋತ್ಸವದಲ್ಲಿ ಶ್ರೀಮುಖಸೂಕ್ತಿಯನ್ನು ಅನುಸಂಧಾನ ಮಾಡಿ ಪೂರ್ಣಗೊಳಿಸಿ,ಮಾರನೇ ದಿನ ಕಣ್ಣಿನುಣ್ ಶಿರುತ್ತಾಂಬು ಪ್ರಬಂಧವನ್ನು ಶ್ರೀ ಸನ್ನಿಧಿಯಲ್ಲಿ ಅನುಸಂಧಾನ ಮಾಡಬೇಕೆಂದು ಕಟ್ಟಳೆಯನ್ನು ಹಾಕಿದರು.

- ಮುಂದುವರೆಯುತ್ತದೆ.

# ಆಳ್ವಾರುಗಳು ಕಂಡ ತಿರುವೇಂಗಡ



- ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಸುತ್ತುವರಿದ ಸಮೃದ್ಧ ಜಲದ ಕಾಲುವೆಗಳಿಂದ ನಳನಳಿಸುವ ತಿರುವೇಂಗಡದ ಸ್ವಾಮಿಯಲ್ಲಿ ಕೆಳಗೆ ಕಟ್ಟಿದ ಜಟೆ, ನೀಳವಾದ ಕಿರೀಟ, ಸುಂದರವಾದ ಶೂಲ, ಚಕ್ರ, ಸೊಂಟದಲ್ಲಿ ಸುತ್ತಿದ ನಾಗಾಭರಣ, ಸ್ವರ್ಣ ಉಡಿದಾರ ಇವುಗಳೆಲ್ಲವೂ ರಂಜನೀಯ. ಹರಿಹರ ಇವರಿಬ್ಬರ ರೂಪವೂ ಒಂದಾಗಿಯೇ ಸೇರಿದಂತಿದೆ ಈತನ ಶ್ರೀಮೂರ್ತಿ(63) ಕಾಲುವೆಯ ನೀರಿನಲ್ಲಿ ಬಗ್ಗಿ ನೋಡಿದ ಗಂಡುಕಪಿಯು ತನ್ನ ಪ್ರತಿಬಿಂಬವನ್ನೇ ತನ್ನ ಪ್ರತಿದ್ವಂದ್ವಿ ಎಂಬುದಾಗಿ ಭಾವಿಸಿ ಹೋಗಿ ಮರದ ಮೇಲಿನ ಹಣ್ಣನ್ನು ಕಿತ್ತು ತರಬೇಕೆಂದು ಅದಕ್ಕೆ ಆಜ್ಞಾಪಿಸಿ ಅದಕ್ಕಾಗಿ ಕೈನೀಡಿ ಕಾದು ಕುಳಿತು ಕೊಂಡಿರುವ ಸೊಬಗನ್ನು ವೇಂಗಡದಲ್ಲಿ ಕಾಣಬಹುದು. ಹಿಂದೆ ಕರುವಿನ ರೂಪ ಧರಿಸಿ ಬಂದ ವತ್ಸಾಸುರನನ್ನು ಕೋಪದಿಂದ ಕವಣೆ ಬೀಸಿದಂತೆ ಮೇಲೆಸೆದು ಮರದಿಂದ ಹಣ್ಣುಗಳನ್ನು ಕೆಳಕ್ಕೆ ಉದುರಿಸಿ ಕರುವನ್ನು ಸಾಯಿಸಿದ ಸರ್ವೇಶ್ವರನು ಅಭಿಮಾನಿಸಿ ನೆಲಸಿದೆ ಪರ್ವತ ಇದು! (68) ನನ್ನ ಮಗಳು ಪರ್ವತ! ಪರ್ವತ ! ಎಂದು ಕನವರಿಸಿ ಹಂಬಲಿಸುತ್ತಾ ಹಾಡುವ ಪರ್ವತ ಇದು. ತನ್ನ ಕಪ್ಪಾದ ಕೂದಲಿಗೆ ಕುಲ ಮರ್ಯಾದೆಗೆ ಲಕ್ಷಣವೆಂದು ಕೊಂಡು ದೇವರು ಧರಿಸಿ ಕೆಳದ ತುಳಸಿಯನ್ನೇ ಧಾರಣ ಮಾಡುವುದು. ಮಲ್ಲರನ್ನು ಕೊಂದ ದೀರ್ಘಬಾಹುಗಳನ್ನುಳ್ಳ ಸರ್ವೇಶ್ವರನು ಪವಡಿಸಿರುವ ಕ್ಷೀರಾಬ್ಧಿಯಲ್ಲಿಯೇ ಸ್ನಾನ ಮಾಡಬೇಕೆಂದು ಹಟ ಹಿಡಿಯುತ್ತಿದ್ದಾಳೆ ಹಾಗೆ ಮಾಡುವುದರಿಂದ ಅವಳಿಗೆ ನೆಮ್ಮದಿ ಏರ್ಪಡುವುದಂತೆ! ಪರಮಾತ್ಮನ ಸಂಪರ್ಕವಿರುವ ವಸ್ತುಗಳನ್ನು ಸೋಕಿಸಿಕೊಂಡು ತನ್ನ ವಿರಹ ತಾಪವನ್ನು ಕೊರೆಗೈಯಲು ಆಶಿಸುತ್ತಾಳೆ ಹೀಗೆ ಉನ್ಮತ್ತೆಯಾಗಿ ವೇಂಗಡದೊಡೆಯನನ್ನೇ ಸರ್ವಕಾಲದಲ್ಲೂ ನೆನೆದು ಹಲುಬುತ್ತಾಳಲ್ಲಾ, ನಾನೇನು ಮಾಡಲಿ" (69) ಗಂಡ ಸ್ಥಳದಿಂದ ಮದ ಜಲದಧಾರೆಯು ಸ್ತೋತ್ರವಾಗಿ ಹರಿದಿಳಿಯಲು ಅದನ್ನೇ ತೀರ್ಥವೆಂದು ತಿಳಿದು ಅದರಿಂದ ಬಾಯಿ ಮುಕ್ಕಳಿಸಿಕೊಂಡು ಪರ್ವತದ ಝರಿಯಂತೆ ಅದು ಪ್ರವಹಿಸಿ ಬರಲು ಅದರಿಂದ ಕಾಲು ತೊಳೆದುಕೊಂಡು ಅಧಿಕ ಮದವನ್ನುಂಟು ಮಾಡುವ ಮಕರಂದದಿಂದ ರಂಜಿಸುವ ಅರಳಿದ ಸುಮಗಳನ್ನು ಆನೆಯು ತನ್ನ ಸೊಂಡಲಿನಲ್ಲಿ ಕಿತ್ತು ಮಹಾಬಲಶಾಲಿ ಎಂದೆನಿಸಿದ ವೇಂಗಡದೊಡೆಯನಿಗೆ ಅರ್ಪಿಸಿ ನಮಿಸಿ ಕೃತಾರ್ಥಗೊಳ್ಳುತ್ತದೆ. ಎಂತಹ ಧನ್ಯ ಜೀವಿ ಅದು!(70)ಆನೆಯು ಸೊಂಡಿಲನ್ನೆತ್ತಿ ಸಾಗುತ್ತಿರುವಾಗ ಅಗಸದಲ್ಲಿ ಅತಿ ಕೆಳಗೆ ಸಾಗುವ ಕಾರ್ಮೇಘವನ್ನು ನಿರುಕಿಸಿ ಅದು ತನ್ನ ಶತ್ರುವಾದ ಆನೆಯೆಂದು ಬಗೆದು ಅದನ್ನೇ ತನ್ನ ಗಂಡಸ್ಥಳದಿಂದ ಗುದ್ದುಲು, ಮೋಡವು ಚದುರಿದಾಗ ಎದುರಾಳಿಯು ಕೆಳಗೆ ಬಿದ್ದನೆಂಬುದಾಗಿ ಅಟ್ಟಹಾಸ

ದಿಂದ ಜೋರಾಗಿ ಘೀಳಿಡಲು ಆನೆಯ ದಂತವು ಪ್ರಕಾಶದಿಂದ ಹೊಳೆಯುತ್ತಿದೆ. ಅದನ್ನು ಕಂಡು ಮೇಲೆ ಹೋಗುವ ಶರಭವು (ವ್ಯಾಳಿಯು) ಮೇಲಿಂದ ಎರಗಿಬಂದು ಆ ದಂತವನ್ನು ತಿರುಚಿ ಆನೆಯನ್ನು ಸಾಯಿಸಿ ಅಟ್ಟಹಾಸ ಮಾಡುವುದಂತೆ! ಇಂತಹ ಸೊಬಗಿನ ವೇಂಗಡದಲ್ಲಿ ಹಿಂದೆ ವತ್ಸಾಸುರನನ್ನು ಬೇಲದ ಮರಕ್ಕೆ ಎಸೆದು ಸಾಯಿಸಿದ ಕೃಷ್ಣ ಪರಮಾತ್ಮನ ಬೇರೊಂದು ರೂಪವಾದ ಸ್ವಾಮಿಯು ನೆಲೆಸಿರುವನು. 71 ವೇಂಗಡವೇ ಗತಿ ಎಂದು ಭಕ್ತಿ ಭಾವದಿಂದ ಅಲ್ಲಿಗೆ ಸಾಗುವ ಕುರವ ಸ್ತ್ರೀಯರ ಅಂದವಾದ ಬಳೆಗಳ ಅಲಂಕೃತ ಕರಗಳಲ್ಲಿ ಹಿಡಿಯಲ್ಪಟ್ಟ ಬಿದಿರು ಕೋಲುಗಳು ಆಗಸಕ್ಕೆ ಸೋಕುವುದಂತೆ ಅಲ್ಲಿ ಚಂದ್ರನನ್ನು ಹಿಡಿಯಲು ಬಂದ ರಾಹುವನ್ನು ಆ ಕೋಲುಗಳು ಚುಚ್ಚಲು ಆತ ಹೆದರಿ ಓಡಿಹೋಗುವನಂತೆ! ಚಂದ್ರನು ಅತಿಶಯ ವಿಜಯಕಾಂತಿಯಿಂದ ನಲಿಯುವನಂತೆ! ಇಂತಹ ಸೊಗಸಾದ ವೇಂಗಡವೇ ಸರ್ವೋತ್ತಮರೂ ಚಿರಯೌವ್ವನ ಭಾಗ್ಯಶಾಲಿಗಳಾದ ನಿತ್ಯ ಸೂರಿಗಳನ್ನು ಆಳುವ ಪರಮಾತ್ಮನ ನೆಲೆ (72) ಏಳು ಕುದುರೆಗಳನ್ನು ರಥಕ್ಕೆ ಮಾಡಿ ಓಡಿಸುತ್ತಾ ಬರುವ ಸೂರ್ಯನು ಎದುರಿಗೆ ವೇಂಗಡದ ಶಿಖರವೂ, ಅದರ ಮೇಲೆ ನಿಂತಿರುವ ಸ್ವಾಮಿಯೂ ಕಂಡು ಬರಲು ಸ್ವಾಮಿಯ ಬಲವೆಂದು ಪಕ್ಕದಿಂದ ರಥವನ್ನು ಓಡಿಸಿಕೊಂಡು ಮುಂದುರಿಯುವನಂತೆ! ಇಂತಹ ಸ್ವಾಮಿಯೇ ಒಮ್ಮೆ ಗೋಕುಲದಲ್ಲಿ ಕುಂಭ ನರ್ತನ ಮಾಡಿ ಜನರ ಮನಸ್ಸನ್ನು ಅಪಹರಿಸಿದುದು ಈ ಸರ್ವೇಶ್ವರನ ನಾಮಸ್ಮರಣೆಯನ್ನು ಆಭರಣಯುಕ್ತವಾದ ಶ್ರೀಪಾದಗಳನ್ನೂ ಕೀರ್ತಿಸುತ್ತ ನಾಲಿಗೆಯು ತನ್ನ ಸಂಪತ್ತನ್ನು ಕಂಡುಕೊಂಡಲ್ಲಿ ಅದಕ್ಕಿಂತ ಹೆಚ್ಚಿಗೆ ಏನು ಬೇಕಾಗಿದೆ? (73) ತಿರುಮಲೆಯ ವಿಶಾಲವಾದ ಕೋಡಿನ ಮೇಲ್ಭಾಗಕ್ಕೆ ಆಕಾಶದಿಂದ ಚಂದ್ರನು ಸರಿದು ಬಂದು ಸೋಕಿದಾಗ ಸಾಣೆಯ ಚಕ್ರಕ್ಕೆ ಕಬ್ಬಿಣವು ಸೋಕಿದಾಗ ಅದು ಸವೆಯುತ್ತಾ ಬರುವಂತೆ ಚಂದ್ರಮನು ಸವೆಯುವನಂತೆ. ಆ ದೊಡ್ಡದಾದ ಬಿಳಿದಾದ ಚಂದ್ರನ ಮೈಯಲ್ಲಿ ಕುಳಿತ ಮನೋಜ್ಞವಾದ ಜಿಂಕೆಯನ್ನು ಕಂಡು ಕೋಡಿನ ಮೇಲೆ ಹಸಿದು ಕುಳಿತ ಹುಲಿಯು ತನ್ನ ಆಹಾರವೊಂದು ಸಮೀಪ ವರ್ತಿಯಾಗುತ್ತಿರುವುದನ್ನು ಕಂಡು ಕೋಪದಿಂದ ಘರ್ಜಿಸಿ ಎದ್ದು ಎಗರಲು ಸಿದ್ಧವಾಗುವುದಂತೆ! ಇಂತಹ ಸುಂದರವಾದ ವೇಂಗಡವು ಶ್ರೀಕೃಷ್ಣನ ವಾಸಸ್ಥಳ. ಇಲ್ಲಿ ವೇಂಗೈ ಪುಷ್ಪಗಳ ಸುಗಂಧ ಎಲ್ಲೆಡೆಯನ್ನು ಆವರಿಸಿಕೊಂಡಿದೆ. (75) ವೃದ್ಧರಾದ ಕುರವರು ಓಡಾಡಲು ಶಕ್ತಿಯಿಲ್ಲದೆ ಕಾಡು ಹಂದಿಗಳು ಸುಳಿಯುವುದನ್ನೇ ಕಾದು ಕುಳಿತಿರುವರಂತೆ. ಕಾಡುಹಂದಿಗಳು ತಮ್ಮ ಆಹಾರಕ್ಕಾಗಿ ನೆಲವನ್ನು ಕೋರೆಯ ದಾಡೆಗಳಿಂದ ಅಗೆದಾಗ ನೆಲವು ಉತ್ತಂತಾಗುತ್ತದೆಯಲ್ಲವೆ? ನೆಲದಲ್ಲಿರುವ ಬಿದಿರುಚೂರುಗಳು ಬೇರಿನೊಡನೆ ಮೇಲೆ ಕಿತ್ತು ಎರಚಲ್ಪಡುತ್ತದೆ. ಈ ಕುರುಬರೂ ಸಹ ಆ ಉತ್ತರ ಪ್ರದೇಶದಲ್ಲಿ ಧಾನ್ಯಗಳನ್ನು ಎರಚುತ್ತಾರೆ. ಹೀಗೆ ಅವರು ಧಾನ್ಯದ ಗಿಡಗಳನ್ನು ಬೆಳೆಯುವಾಗ ಸಂಗಡ ಆ ಬಿದಿರುಗಳೂ ಗಿಡವಾಗಿ ಮರವಾಗಿ ಗಗನಕ್ಕೆ ಎದ್ದು ನಿಲ್ಲುತ್ತವೆ. ಕುರವರು ಬಿತ್ತಿದ್ದ ಪೈರುಗಳೂ ಫಲಭಾರದಿಂದ ಕಂಗೊಳಿಸುತ್ತವೆ. ಇಂತಹ ಮಧುರವಾದ ವೇಂಗಡದಲ್ಲಿ ಒಂದು ಕಾಲಕ್ಕೆ ತನ್ನ ವೇಣುನಾದದ ಇಂಪನ್ನು ಲೋಕಕ್ಕೆ ಉಣಬಡಿಸಿ ಮರುಳು ಮಾಡಿದ ಶ್ರೀಕೃಷ್ಣನು ಈಗ ವೇಂಗಡದೊಡೆಯನ ರೂಪದಿಂದ ನೆಲೆಸಿದ್ದಾನೆ. ಇಂತಹ ಪರ್ವತ ಶ್ರೇಷ್ಠವೇ ಇದು. (89)

ಈ ಮೂವರು ಆಳ್ವಾರ್‌ಗಳು ವರ್ಣಿಸಿರುವ ಶೈಲಿ ವಿಲಕ್ಷಣವಾದದ್ದು, ಹಲವಾರು ವಸ್ತು ವಿನ್ಯಾಸಗಳಿಂದ ಕೂಡಿದ್ದು. ಇವುಗಳಲ್ಲಿ ಕೇವಲ ವಿಷ್ಣು ಭಕ್ತಿ, ಶರಣಾಗತಿ ಪ್ರಪತ್ತಿ, ದೇವನ ಲೀಲಾ ವೈಭವ ಮುಂತಾದ ವಿಷಯಗಳನ್ನು ನಾವು ಕಾಣುವುದಕ್ಕಿಂತ ಮಿಗಿಲಾದ ಪ್ರಕೃತಿ ವರ್ಣನೆ, ವೇಂಗಡದ ಮೇಲಿನ ಅದ್ಭುತ ದೃಶ್ಯ, ಜನಜೀವನ, ಪ್ರಾಣಿ ವೈಭವ, ವನ್ಯ ಜೀವಿಗಳೊಡನೆ ಮಾನವನ ಸಹಬಾಳ್ವೆ, ಅವುಗಳಿಂದ ರಕ್ಷಣೆಯ ಉಪಾಯಗಳು, ಜನರ ನಾಗರೀಕತೆ ಮುಂತಾದ ಮಜಲುಗಳನ್ನು ಕಾಣ ಬಹುದಾಗಿದೆ. ಈ ಮೂರು ಆಳ್ವಾರುಗಳಲ್ಲಿ ವೇಂಗಡದ ನಿಸರ್ಗ ಸೌಂದರ್ಯವನ್ನು ನಮ್ಮ ಮುಂದೆ ತೆರೆದಿಡಲು ಮೂರನೆಯ ಆಳ್ವಾರೇ ಅತಿ ಸಮರ್ಥರು ಎಂದು ನಾವು ತೀರ್ಮಾನಿಸಬಹುದು. ಇವರ ಪಾಶುರಗಳು ಅಲಂಕಾರಿಕವಾಗಿದೆ. ಆದರೆ ಅಷ್ಟೊಂದು ಅಲಂಕಾರಗಳನ್ನು ಬಳಸದವರು ಮಧ್ಯದ ಪೂದತ್ತಾಳ್ವಾರ್ ಅವರು. ಮೊದಲನೆಯ ಆಳ್ವಾರ್ ಅವರ ವರ್ಣನೆ ಮೂರನೆಯವರಷ್ಟು ಅಬ್ಬರವಿಲ್ಲದಿದ್ದರೂ ಅವರೂ ರಸಿಕರೇ ಎಂದು ಹೇಳಲು ಸಾಕಷ್ಟು ಪರಿಕರಗಳು ಇವೆ.

ಎರಡನೆಯ ಆಳ್ವಾರ್ ಹಿಂದೆ ಬಿದ್ದಿಲ್ಲ. ಕಡೆಯ ಎರಡು ಪಾಶುರಗಳೇ ಸಾಕು ಅವರ ರಸಿಕತೆಯನ್ನು ಪ್ರಕಾಶ ಪಡಿಸಲು, ಅಂತೂ ಮೂರು ಆಳ್ವಾರಿಗೂ ಆನೆಗಳು, ಬಿದಿರು ಕಾಡುಗಳು ವರ್ಣನೆಗೆ ನಿಲುಕುವ ವಸ್ತುಗಳಾಗಿವೆ.

**- ಮುಂದುವರೆಯುತ್ತದೆ.**

**ಹಿಂದಿನ ಸಂಚಿಕೆಯ ನಂತರ.....**

## ವೆಂಕಟಾದ್ರಿಗೆ ದಶರಥನ ಆಗಮನ

ಅಯೋಧ್ಯಾಪತಿ ದಶರಥನು ಸಕಲ ಸಂಪತ್ತನ್ನು ಹೊಂದಿದ್ದರೂ ಸಂತಾನ ಭಾಗ್ಯವಿಲ್ಲದೆ ನರಳುತ್ತಿದ್ದಾಗ ಒಂದು ದಿನ ತನ್ನ ದುಃಖವನ್ನು ಕುಲ ಗುರುವಾದ ವಸಿಷ್ಠನೊಂದಿಗೆ ಹಂಚಿಕೊಂಡನು ಆಗ ಕುಲ ಗುರುಗಳು -

ರಾಜ! ನಿನ್ನ ನೋವು ನನಗೆ ಅರ್ಥ ವಾಗುತ್ತಿದೆ. ನೀನು ಪುಣ್ಯವಂತ. ಆದರೆ "ಕಲುಷ್ಕ ರ್ಮದ" ಫಲವಾಗಿ ನಿನಗೆ ಸಂತಾನ ಪ್ರಾಪ್ತಿಯಾಗಿಲ್ಲ. ಈ ಕಲುಷ್ಕರ್ಮದ ನಿವಾರಣೆಗೆ ವೆಂಕಟಾದ್ರಿಯ ಪುಷ್ಕರಿಣಿ ಕಡಲ ತೀರದಲ್ಲಿ ತಪ ಮಾಡುವುದೊಂದೇ ಇದಕ್ಕೆ ಇರುವ ಏಕೈಕ ಮಾರ್ಗವಾಗಿದೆ. ಆದರೆ ಅನುಮಾನವೇಕೆ? ವಂಶೋದ್ಧಾರಕ ಪುತ್ರರು ನಿನಗೆ ಜನಿಸುತ್ತಾರೆ. "ಆಲಸ್ಯಂ ಅಮೃತಂ ವಿಷಂ, ಶುಭಂ ಭವತು", ಈಗಲೇ ವೆಂಕಟಗಿರಿಗೆ ಹೊರಡು ಎಂದು ಹೇಳಿದರು. ದಶರಥನು ಸಂತೋಷದಿಂದ ಗುರುವರ್ಯಾ!! ನೀವು ತಿಳಿಸಿರುವಂತೆ ನನ್ನ ಪ್ರಯಾಣಕ್ಕೆ ಶುಭಲಗ್ನವನ್ನು ತಿಳಿಸಿರಿ ಎಂದು ಬೇಡಿಕೊಂಡನು. ಗುರುಗಳು ಸರಿ ಎಂದು-ಮಹಾರಾಜ ! ಇಂದೇ ಶುಭ ದಿನವಾಗಿರುವುದರಿಂದ ಈಗಲೇ ಹೊರಡುವುದು ಉತ್ತಮ. ನಿಮ್ಮ ಪ್ರಯಾಣದ ಹಾದಿಯನ್ನು ಮತ್ತೊಮ್ಮೆ ಹೇಳುತ್ತೇನೆ, ಕೇಳು -

ಗಂಗೆಯ ದಕ್ಷಿಣಕ್ಕೆ ಸುವರ್ಣಮುಖಿ ನದಿ ಇದೆ. ಆ ನದಿಯ ಉತ್ತರಕ್ಕೆ ಅನತಿ ದೂರದಲ್ಲಿ ಗಂಗೆಯ ದಕ್ಷಿಣಕ್ಕೆ ಇನ್ನೂರು ಯೋಜನ ದೂರದಲ್ಲಿ ವೆಂಕಟಗಿರಿ ಇದೆ. ಆ ಬೆಟ್ಟದಲ್ಲಿ ಗಂಗಾ ನದಿಗಳಿಗಿಂತ ಪವಿತ್ರವಾದ ಪುಣ್ಯಕ್ಷೇತ್ರಗಳಿವೆ. ಆ ತೀರ್ಥಗಳಲ್ಲಿ ಸರ್ವಶ್ರೇಷ್ಠವಾದದ್ದು ಸ್ವಾಮಿಪುಷ್ಕರಿಣಿ ತೀರ್ಥ.

ಅಲ್ಲಿಯೇ ವೆಂಕಟಾದ್ರಿ ಇದೆ. ಮೇರು ಪರ್ವತಗಳಷ್ಟು ದೊಡ್ಡದು. ಅಲಂಕೃತ ರಥದಂತೆ ಗೋಚರಿಸುತ್ತದೆ. ಮೇಲಾಗಿ ಇದು ಚೈತ್ರರಥದಂತೆ ಕಣ್ಣಿಗೆ ಹಬ್ಬವನ್ನುಂಟು ಮಾಡುವ ಪರ್ವತ. ಅಲ್ಲಿ ಕಿನ್ನರರು ನೃತ್ಯಗೀತೆಗಳೊಂದಿಗೆ ಕಾಲ ಕಳೆಯುತ್ತಾರೆ. ಆದರೆ ಕೆಲವರಿಗೆ ಇದು ಕೇವಲ ಬೆಟ್ಟದಂತೆ ಕಾಣಿಸಬಹುದು. ಆದರೆ ಆ ಪರ್ವತವು ವರ್ಣನಾತೀತವಾಗಿದೆ ಎಂದು ಹೇಳಲಾಗಿ ದಶರಥನು ತನ್ನ ಗುರುವಿನೊಂದಿಗೆ ಗಂಗಾನದಿಯನ್ನು ತಲುಪಿದನು.

ದಶರಥನು ಸಂಕಲ್ಪ ಪೂರ್ವಕವಾಗಿ ಗಂಗೆಯಲ್ಲಿ ಸ್ನಾನ ಮಾಡಿದನು. ನದಿಯ ತೀರದಲ್ಲಿ ಜಪತಪಾದಿಗಳನ್ನು ಮಾಡಿದನು. ಷೋಡಶ ಮಹಾದಾನ ಮಾಡಿದನು. ತದನಂತರ ಆ ಪ್ರದೇಶದಿಂದ ಗೋದಾವರಿ, ಕೃಷ್ಣವೇಣಿ, ಮಲಾಪಹಾರಿ, ತುಂಗಭದ್ರಾ ನದಿಗಳಲ್ಲಿ ಮುಳಿಗೆದ್ದು, ಕೊನೆಗೆ ವೆಂಕಟಾದ್ರಿ ತಲುಪಿದನು. ಸ್ವಾಮಿಪುಷ್ಕರಿಣಿ ತೀರದಲ್ಲಿ ಋಷಿಮುನಿಗಳಿಗೆ ನಮನ ಸಲ್ಲಿಸಿದನು. ಮೇಲಾಗಿ, ಆ ತೀರದಲ್ಲಿ ಯೋಗಿಗಳು, ವಿವಿಧ ಮಾಂತ್ರಿಕರು, ಹಾಗೆಯೇ ವಿವಿಧ ಯೋಗಾಸನದಲ್ಲಿರುವ ಸಾಮಾನ್ಯ ಜನರು ಮತ್ತು ಅಸಾಧ್ಯವಾದ ರೀತಿಯಲ್ಲಿ ತಪಸ್ಸು ಮಾಡುತ್ತಿರುವುದನ್ನು ಹಠಯೋಗಿಗಳ ದರ್ಶಿಸಿದನು.

ಸ್ವಾಮಿಪುಷ್ಕರಿಣಿ ದಡದಲ್ಲಿ ಮುನಿಗಣವೇ ಇತ್ತು. ಆ ಸನ್ಯಾಸ್ಯರ ಮಧ್ಯೆ ಚತುರ್ಮುಖನನ್ನು ಕಂಡನು. ಆ ಸತ್ಯಲೋಕಪಾಲನು ಧ್ಯಾನದಲ್ಲಿ ನಿರತನಾಗಿ ಅಷ್ಟಾಕ್ಷರಿ ಮಂತ್ರವನ್ನು ಜಪಿಸುತ್ತಿರುವುದು ಕಂಡು ವಶಿಷ್ಠನು ಆಶ್ಚರ್ಯಚಕಿತನಾದನು. ಕೂಡಲೇ ದಶರಥನೊಡನೆ-ಅವರು ಹೇಳಿದರು."ಅಧಿಪಾ! ನಾವು ತಲುಪಬೇಕಾದ ಸ್ಥಳಕ್ಕೆ ಬಂದಿದ್ದೇವೆ. ಚತುರ್ಮುಖ ಬ್ರಹ್ಮನೇ ಈ ಸ್ಥಳದಲ್ಲಿ ತಪಸ್ಸು ಮಾಡುತ್ತಿದ್ದಾನೆ. ಆದ್ದರಿಂದ ಸ್ವಾಮಿ ಇಲ್ಲಿ ವಾಣಿವಲ್ಲಭನಿಗೆ ಪ್ರತ್ಯಕ್ಷನಾಗುತ್ತಾನೆ. ಇದು ಸತ್ಯ ಆದ್ದರಿಂದ ದಶರಥ! ನೀನೂ ಇಲ್ಲಿ ಪವಿತ್ರನಾಗಿ ಧ್ಯಾನ ಮಾಡು" ಎಂದರು.



# ಶ್ರೀ ವೆಂಕಟಾಚಲ ಮಹಾತ್ಮ್ಯೆ

**ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್**
**ಅನುವಾದ – ಶ್ರೀಮತಿ. ಎನ್. ಪಾರ್ವತಿ**



'ಗುರುವರ್ಯಾ! ನಿಜ. ಹರಿ ಮೆಚ್ಚುವ ಜಪವಿಧಾನವನ್ನು ನೀವೇ ಸೂಚಿಸಿ ಎಂದು ಅಯೋಧ್ಯಾಪತಿ ತನ್ನ ಕೈಗಳನ್ನು ಜೋಡಿಸಿ ಬೇಡಿದನು.

ಕುಲಗುರು ವಸಿಷ್ಠನು ದಶರಥನಿಗೆ ಶ್ರೀಮನ್ನಾರಾಯಣ ಅಷ್ಟಾಕ್ಷರ ಮಂತ್ರವನ್ನು ಉಪದೇಶಿಸಿದನು. ದಶರಥನು ನಿಯಮಬದ್ಧವಾಗಿ ಜಪ ವನ್ನು ಮುಂದುವರೆಸಿದನು.

ಆ ಸಂದರ್ಭದಲ್ಲಿ ಭಾರಿ ಸದ್ದು ಕೇಳಿಸಿತು. ಆ ಶಬ್ದ ಕೇಳಿ ಬ್ರಹ್ಮಾದಿ ದೇವರು ಕಣ್ಣು ತೆರೆದರು. ದಶರಥನು ಅವರಿಗೆ ನಮಸ್ಕರಿಸಿದಾಗ 'ದಶರಥ! ವಂಶಾಭಿವೃದ್ಧಿರಸ್ತು' ಎಂದರು.

ಆದರೆ ಅಲ್ಲಿದ್ದವರಿಗೆಲ್ಲ ಆಶ್ಚರ್ಯ ಆ ದೊಡ್ಡ ಧ್ವನಿ ಯಾವುದು? ಎಂದು. ಸ್ವಲ್ಪ ಸಮಯದ ನಂತರ ತೇಜಸ್ಸು ಕಾಣಿಸಿತು. ದೇವತೆಗಳು ಆ ದಿವ್ಯತೇಜಸ್ಸನ್ನು ದರ್ಶಿಸಲಾರದೆ ಕಣ್ಣು ಮುಚ್ಚಿದರು. ಭಗವಾನ್ ಬ್ರಹ್ಮನಿಗೆ ಐದು ಬಣ್ಣಗಳಿಂದ ಹೊಳೆಯುತ್ತಿರುವ ನಗರವು ಗೋಚರಿಸಿತು. ಆ ಊರಿನ ಮಧ್ಯದಲ್ಲಿ ಕಲ್ಪಿತ ದಿವ್ಯ ವಿಮಾನವು ಕಣ್ಣಿಗೆ ತಾಕುತ್ತಿರುವಾಗ ಬ್ರಹ್ಮದೇವನು ಅಗಸ್ತ್ಯ ವಸಿಷ್ಠರನ್ನು ನೋಡಿ,

ಮುನಿ ಪುಂಗವರೇ! ನನ್ನ ತಂದೆಯ ವಾಸವು ಗೋಚರಿಸುತ್ತಿದೆ. ಬನ್ನಿ ಬನ್ನಿ, ಎನ್ನುತ್ತಾ ಸಂತೋಷ ಸಂಭ್ರಮದಿಂದ ಕರೆದನು. ಅವರೆಲ್ಲರೂ ವಿಮಾನವನ್ನು ಹಿಂಬಾಲಿಸುತ್ತಾ ಪೂರ್ವದಿಕ್ಕಿನಲ್ಲಿ ಹೋಗುತ್ತಿದ್ದಾಗ ದಶ ರಥನೂ ಅವರನ್ನು ಹಿಂಬಾಲಿಸಿದನು. ಅಲ್ಲಿ ಕ್ರೀಡಾದ್ರಿಯಲ್ಲಿ ನವರತ್ನ ಗಳಿಂದ ಅಲಂಕೃತವಾಗಿದ್ದ ಪದ್ಮಪೀಠದಲ್ಲಿ ಹರಿಯು ಶ್ರೀಭೂನೀಳಾ ಸಮೇತವಾಗಿ ದರ್ಶನ ನೀಡಿದ್ದರಿಂದ ತಮ್ಮ ಜನ್ಮ ಸಾರ್ಥಕವಾಗಲಿ ಎಂದು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದರು.

ಮುಂದುವರೆಯುತ್ತದೆ.

# ಗರುಡ ವಾಹನ



**ನೋಡು ನೋಡು ಗರುಡಗಮನನೆ**
**ಮಾಡು ದಯವನು ವೇಗದಿ**
**ಪಾಡುವೆ ಆನಂದದಲಿ**
**ಕೊಂಡಾಡುವೆನು ನಿನ್ನ ಮೂರ್ತಿಯ ||ಪ||**

**ಮಂಗಳಾಂಗನೆ ಮನ್ಮಥನ ಪಿತ**
**ಸಂಗೀತ ಸುರ ಲೋಲನೆ**
**ಕಂಗಳುಬ್ಬರ ತೀರುವಂತೆ ಚರ**
**ಣಂಗಳನೆ ತೋರೋ ಪ್ರೀತಿಯಲಿ ||೧||**

**ಪರಮಪುರುಷನೆ ಪುಣ್ಯ ಶ್ಲೋಕನೆ**
**ದುರುಳದೈತ್ಯರ ದಲ್ಲಣ**
**ಮರೆಯ ಲೀಯದೆ ನಿನ ಚರಣ**
**ಸ್ಮರಣೆ ಒದಗಿಸುವುದಕ್ಕೆ ||೨||**

**ವಂದನೆಯು ಗೋವಿಂದ ಗೋಪಾಲ**
**ಮಂದರಧರ ಮಾಧವಾ**
**ಇಂದು ವಿಜಯ ವಿಠಲ ನಿನ್ನ**
**ಸಂದರುಶನವ ತೋರುತ ||೩||**

**- ವಿಜಯದಾಸರು**



# ಸೆಪ್ಟೆಂಬರ್ ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಮಾಸಾರಂಭದಲ್ಲಿ ಸೋಮಾರಿತನವನ್ನು ಬಿಟ್ಟು ಕಾರ್ಯೋನ್ಮುಖರಾಗಬೇಕು. ಶರೀರದ ಆರೋಗ್ಯ ಚೆನ್ನಾಗಿರುತ್ತದೆ. ಮನೆಯಲ್ಲಿ ಆನಂದೋತ್ಸವ, ನಿಂತು ಹೋದ ಕಾರ್ಯಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಿರಿ.ಸಮಾಜದಲ್ಲಿ ಕೀರ್ತಿವೃದ್ಧಿ,ಗೌರವಾದರಗಳು ಬೆಳೆಯುತ್ತವೆ. ವ್ಯಾಪಾರದಲ್ಲಿ ವೃದ್ಧಿ ಅಪೇಕ್ಷಿಸಿದ ಫಲಿತಾಂಶಗಳಿರುತ್ತದೆ.

**ವೃಷಭ**

ಉದರ ಸಂಬಂಧಿ ಆರೋಗ್ಯ ಸಮಸ್ಯೆಗಳಿಗಾಗಿ ವೈದ್ಯರನ್ನು ಭೇಟಿ ಮಾಡುವ ಸಂದರ್ಭವಿರುತ್ತದೆ. ನಿಮ್ಮ ಮಾತುಗಳು ಇತರರಿಗೆ ತೊಂದರೆ ಕೊಡಬಹುದು. ಮಾತಿನಿಂದ ಗೌರವ, ಧನದಾಯ ವೃದ್ಧಿಸಲಿದೆ. ವಿದ್ಯಾರ್ಥಿಗಳು ಇತರ ಕೋರ್ಸುಗಳಲ್ಲಿ ಪ್ರಕಾಶಿಸಲ್ಪಡುವಿರಿ. ಸ್ಪರ್ಧೆಗಳಲ್ಲಿ ಪರೀಕ್ಷೆಗಳಲ್ಲಿ ವಿಜಯ ಸಾಧಿಸುವಿರಿ. ಕುಟುಂಬ ಸದಸ್ಯರೊಂದಿಗೆ ಆನಂದದಿಂದ ಕಳೆಯುವಿರಿ.

**ಮಿಥುನ**

ಮಾನಸಿಕ ಒತ್ತಡ ಹಾಗೂ ಆಂದೋಲನಗಳು ಹೆಚ್ಚಾಗುತ್ತವೆ. ನಿಮ್ಮ ಬಂಧುಗಳು ಹಾಗೂ ಸ್ನೇಹಿತರು ನಿಮ್ಮ ನಿಲುವನ್ನು ಗುರುತಿಸಿ ನಿಮಗೆ ಗೌರವವನ್ನು ಕೊಡುವರು. ಬಹಳ ಮಾನಸಿಕ ಶಾಂತಿ ಹಾಗೂ ಉಪಶಮನವನ್ನು ಅನುಭವಿಸುವಿರಿ.

**ಕರ್ಕಾಟಕ**

ನಿಮ್ಮ ಆದಾಯಕ್ಕು ಮೀರಿ ಪ್ರೋತ್ಸಾಹ ದೊರೆಯಲಿದೆ. ನಿಮ್ಮ ಬಡಹುಟ್ಟಿದವರಿಂದ ಸಹಾ ಹಲವು ಲಾಭಗಳು ಒದಗಿ ಬರುತ್ತವೆ. ಮಕ್ಕಳ ವಿಷಯದಲ್ಲಿ ಅಭಿವೃದ್ಧಿ. ಸಂತೋಷಕರವಾದ ಶುಭವಾರ್ತೆಯನ್ನು ಕೇಳಲಿರುವಿರಿ. ಸಮಾಜದಲ್ಲಿ ನಿಮ್ಮ ಸ್ಥಾನ ಮತ್ತು ಗೌರವಗಳು ಹೆಚ್ಚಲಿವೆ.

**ಸಿಂಹ**

ಶುಭವಾರ್ತೆ ಕೇಳುವಿರಿ. ಆರೋಗ್ಯ ಮತ್ತು ಆದಾಯಾವಕಾಶಗಳು ಲಭಿಸಲಿವೆ. ಸ್ನೇಹಿತರಿಂದ ನೆರವು ಸಿಗಲಿದೆ. ರಿಯಲ್ ಎಸ್ಟೇಟ್ ಲೇವಾದೇವಿಗಳಿಗೆ ಇದು ಸರಿಯಾದ ಸಮಯ. ವಿವಾಹ ಅವಕಾಶಗಳು. ವಿನೋದ ಹಾಗೂ ವ್ಯಾಪಾರದಲ್ಲಿ ವೃದ್ಧಿ ಉಂಟಾಗುತ್ತದೆ.

**ಕನ್ಯೆ**

ಸಂಪದ, ಆನಂದ, ವಿದ್ಯೆಯಲ್ಲಿ ವಿಜಯ,ವಿವಾಹ ಅವಕಾಶಗಳು, ವಿನೋದ ಮತ್ತು ವ್ಯಾಪಾರದಲ್ಲಿ ವೃದ್ಧಿಯನ್ನು ಪಡೆಯುವಿರಿ.ಇತರರನ್ನು ಆಳಬೇಕೆಂಬ ದುರ್ಬುದ್ಧಿ ಸಮಸ್ಯೆಗಳನ್ನು ಕಡಿಮೆ ಮಾಡಿಕೊಳ್ಳಬಹುದು.

**ತುಲಾ**

ನಿಮ್ಮ ಪ್ರಾಮುಖ್ಯತೆ ಹಾಗೂ ಅವಶ್ಯತೆಯನ್ನು ಎಲ್ಲರೂ ಗುರುತಿಸುವರು ರಾಜಕೀಯ ಪೈಪೋಟಿಗೆ ಸಕಾಲ. ಸ್ಥಳೀಯ ಸಮಸ್ಯೆಗಳಿಗಾಗಿ ನ್ಯಾಯಾಲಯಕ್ಕೆ ಮೊರೆ ಹೋಗುವಿರಿ. ವಸ್ತು ಆಭರಣಗಳ ಖರೀದಿ ಮಾಡುವಿರಿ.

**ವೃಶ್ಚಿಕ**

ಆಸೆ ಈಡೇರುವಿಕೆ, ಋಣಮುಕ್ತಿ, ಆರ್ಥಿಕ ಸ್ಥಿರತೆ, ಎಲ್ಲರಿಗೂ ಅನುಕೂಲವಾಗಿರುವಂತೆ ಆದರ್ಶಪ್ರಾಯರಾಗಿರುವಿರಿ. ವಸ್ತ್ರ ಆಭರಣಗಳನ್ನು ಕೊಳ್ಳುವಿರಿ. ವಾಹನ ಚಾಲಕರು ಜಾಗರೂಕರಾಗಿರಬೇಕು.

**ಧನಸ್ಸು**

ನೀವು ಹತ್ತು ಜನಕ್ಕೆ ತಗಿ ಬಗ್ಗಿ ಜಯ ಸಾಧಿಸುವಿರಿ. ಪತ್ನಿ, ತಂದೆ ತಾಯಿಯರ ಆರೋಗ್ಯದ ಮೇಲೆ ಗಮನ ಅಗತ್ಯ, ಕುಜ ಸಂಚಾರ ದೋಷ ನಿವಾರಣೆಗೆ ಸುಬ್ರಮಣ್ಯ ಆರಾಧನೆ, ಅಭಿಷೇಕ ಪ್ರದಕ್ಷಿಣೆಗಳನ್ನು ಮಾಡಬೇಕು.

ಉನ್ನತವಾದ ಮಹದಾಸೆಗಳೇ ನಿಮ್ಮನ್ನು ಮುಂದೆ ನಡೆಸುತ್ತವೆ. ಒಂದು ಆಹ್ಲಾದಕರವಾದ ಜೀವನ ಶೈಲಿಗೆ ಅಭ್ಯಾಸ ಮಾಡಿಕೊಳ್ಳುವಿರಿ. ಬಂಧು ಮಿತ್ರರಿಂದ ಪ್ರಶಂಸೆ, ಪರಿಚಯ, ಒಳ್ಳೆಯ ಮಿತ್ರರಿಂದ ಧನ ಸಹಾಯ ನಿಮಗಿರುತ್ತದೆ.

**ಕುಂಭ**

ಕೆಟ್ಟ ಅಭ್ಯಾಸ-ಸಹವಾಸಗಳಿಂದ ದೂರವಿರುವುದು. ಉತ್ತಮ ಸಹೋದ್ಯೋಗಿಗಳೊಂದಿಗಿನ ವಿವಾದಗಳಲ್ಲಿ ತಿಳುವಳಿಕೆಯಿಂದ ತಪ್ಪಿಸಿಕೊಳ್ಳುವಿರಿ. ವಿದ್ಯಾರ್ಥಿಗಳು ತೀವ್ರಗತಿಯಲ್ಲಿ ಪ್ರಯತ್ನ ಮಾಡುವರು. ಪ್ರಯತ್ನ ಹಾಗೂ ಪರಿಶ್ರಮದ ಅಗತ್ಯವನ್ನು ಅರಿಯುತ್ತಾರೆ.

**ಮೀನ**

ಪ್ರಯತ್ನಗಳೆಲ್ಲವೂ ವಿಜಯವನ್ನು ತರುತ್ತವೆ. ವ್ಯಾಜ್ಯಗಳಲ್ಲಿ ಉಪಶಮನ ದೊರಕಲಿದೆ. ಸಂಪಾದನೆ ಬೆಳವಣಿಗೆಯಾಗಲಿದೆ ವಾಹನ ಸಂಪದ ಹಾಗೂ ವಿಲಾಸಮಯವಾದ ಸೌಕರ್ಯ ಉಂಟಾಗುತ್ತದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

- ಡಾ. ಅನಸೂಯ ಎಸ್.ರಾಜೀವ್

**1. ಹದಿನಾರು ಸಂಖ್ಯೆಗೂ ಗೌರೀಪೂಜಾ ವಿಧಿಗೂ ಗಾಢವಾದ ಸಂಬಂಧವಿದೆ ಹೇಗೆ?**

**ಉತ್ತರ :** ಗೌರೀದೇವಿಯ ಅಂಗಪೂಜೆ ಮಾಡುವುದು ಹದಿನಾರು ಸ್ಥಾನಗಳಲ್ಲಿ ಗೌರೀಪೂಜೆಯ ಪುಷ್ಪ ಪತ್ರಗಳ ಸಂಖ್ಯೆ ಹದಿನಾರು. ದೋರ ಗ್ರಂಥಿಗಳು ಹದಿನಾರು. ಗೌರೀವ್ರತದ ಸಾಫಲ್ಯಕ್ಕೆ ಬೇಕಾಗುವ ವರ್ಷಗಳು ಹದಿನಾರು. ಬಾಗಿನಗಳು ಹದಿನಾರು. ಹದಿನಾರು ಕಲೆಯಿಂದ ಕೂಡಿದ ಪರಮಾತ್ಮಮಯಿಯಾದ ಪ್ರಕೃತಿಮಾತೆಯೇ ಗೌರೀದೇವಿ ಎಂಬ ತತ್ತ್ವವು ಇಲ್ಲಿ ಸೂಚಿತವಾಗಿದೆ.

**2. ಗಣಪತಿ 21 ಮೋದಕ, 21 ಗರಿಕೆ, 21 ಪತ್ರೆ, 21 ಎಕ್ಕದ ಹೂವು ಎನ್ನುತ್ತ 21 ನ್ನೇ ಏಕೆ ಸಮರ್ಪಿಸುತ್ತಾರೆ?**

**ಉತ್ತರ:** ಪ್ರಪಂಚವನ್ನು ತುಂಬಿರುವ ತತ್ತ್ವಗಳು ಒಟ್ಟು 25 ಅದರಲ್ಲಿ 21 ನೇ ತತ್ತ್ವವೇ ಆಕಾಶತತ್ತ್ವ. ಆಕಾಶದ ಅಭಿಮಾನಿ ದೇವತೆ ಗಣಪತಿ. ಹಾಗಾಗಿ ಅವನಿಗೆ 21 ಬಗೆಯ ಭಕ್ಷ್ಯ, ಭೋಜ್ಯ, ಫಲ, ಪುಷ್ಪ, ಪತ್ರೆ ಪ್ರಿಯವಾಯಿತು. ಆದರಿಂದ ಗಣಪತಿಯ ಸಂಖ್ಯೆ 21.

**3.ಅನಂತನ ಹಬ್ಬದ ವೈಶಿಷ್ಟ್ಯವೇನು?**

**ಉತ್ತರ:** ಕಲಶದಲ್ಲಿ ಯಮುನೆಯನ್ನು ಸ್ಥಾಪಿಸಿ, ಅದರ ಮೇಲೆ ಹೆಡೆಯ ಆಶ್ರಯದಲ್ಲಿರುವ ಸಾಲಿಗ್ರಾಮವನ್ನೂ ಹದಿನಾಲ್ಕು ಗಂಟುಗಳಿರುವ ಕೆಂಪು ದಾರವನ್ನು ಇಟ್ಟು ಪೂಜಿಸಿ ಆ ದಾರವನ್ನು ಕೈಗೆ ಕಟ್ಟಿಕೊಳ್ಳುವ ಅನಂತ ವ್ರತವು ಬಾಳಿನ ಕಷ್ಟನಷ್ಟಗಳಿಗೆ ಕಾರಣವಾಗುವ ಸಂಚಿತ ಕರ್ಮ ಹೆಡೆ ಬಿಚ್ಚಿದಾಗ ಅಂದು ಕೃಷ್ಣನಾಗಿ ಯಮುನೆಯಲ್ಲಿದ್ದ ಕಾಳಿಂಗನ ಹೆಡೆಯ ಮೇಲೆ ಕುಣಿದು ಮರ್ದಿಸಿದಂತೆ ಮರ್ದಿಸಿಯೋ, ಅನಂತಪದ್ಮನಾಭನಾಗಿ ಶೇಷನ ಹೆಡೆಯನ್ನೇ ತಂಪನ್ನು ಕೊಡುವ ಕೊಡೆಯಾಗಿಸಿದಂತೆ ಕೊಡೆ ಯಾಗಿಸಿಯೋ ಭೂಮಿಯ ಮೇಲ್ಗಡೆಯ ಹಾಗೂ ಕೆಳಗಡೆಯ ಏಳೇಳು ಲೋಕಗಳಿಂದ ಬರುವ ಕಷ್ಟನಷ್ಟಗಳ ಸಂಕುಲವನ್ನೆಲ್ಲ ಚಿಕ್ಕ ಗಂಟುಗಳ ಕೂಪದಲ್ಲಿ ಕರಗಿಸಿ ಕಾಪಾಡುವ ವಿಷ್ಣುವಿನ ಅನಂತಕೃಪೆಗಾಗಿ ಅಚಲ ಶ್ರದ್ಧಾ ಭಕ್ತಿ ನಿಷ್ಠೆಗಳನ್ನು ರಕ್ತಗತ ಮಾಡಿಕೊಳ್ಳಲು ಕಂಕಣಬದ್ಧವಾಗಿರುವೆ ಎಂಬುದರ ದ್ಯೋತಕ.

**4.ಪಿತೃಪಕ್ಷದ ಮಹತ್ವವೇನು?**

**ಉತ್ತರ :** ಪ್ರತಿ ವೈದಿಕ ಕ್ರಿಯೆಯಲ್ಲೂ ಗತಿಸಿದ ಪಿತೃಗಳನ್ನು ಸ್ಮರಿಸಿ ಪಿತೃ ದೇವತೆಗಳಿಗೆ ನಮಸ್ಕರಿಸಿ ಅವರ ಅನುಗ್ರಹ ಪಡೆದು ವೈದಿಕ ಕ್ರಿಯೆ ಮುಂದುವರಿಸುವುದು ಸಂಪ್ರದಾಯ. ಪಿತೃದೇವತೆಗಳ ಅನುಕೂಲಕ್ಕಾಗಿ ಋಣ ಸಂದಾಯದ ಮೂಲಕ ಕರ್ತವ್ಯ ಪಾಲನೆಗೆ ಭಾದ್ರಪದ ಬಹುಳ ಪಾಡ್ಯದಿಂದ ಅಮಾವಾಸ್ಯೆಯವರೆಗೆ ಬರುವ ಹದಿನೈದು ದಿನಗಳು ಪಿತೃ ಪಕ್ಷವೆನಿಸಿ ಶ್ರಾದ್ಧ ವಿಧಿಗಳಿಗೆ ಪ್ರಾಶಸ್ತ್ಯವೆಂದು ಹೇಳಿದೆ. ಪಿತೃಋಣವು ಮನುಷ್ಯ ತೀರಿಸಲೇ ಬೇಕಾದ ಬಹುಮುಖ್ಯ ಋಣಗಳಲ್ಲೊಂದು. ಏಕೆಂದರೆ ನಮಗೆ ಈ ದೇಹ ದೊರೆತಿರುವುದೇ ಪಿತೃಗಳಿಂದ. ಅವರು ಸಂತೃಪ್ತರಾಗಿ ಆಶೀರ್ವಾದ ಮಾಡಿದರೆ ಅದಕ್ಕಿಂತ ಹೆಚ್ಚಿನ ಬಲ ಇನ್ನೊಂದಿಲ್ಲ. ಹೀಗಾಗಿ ಪಿತೃಕಾರ್ಯಕ್ಕೆ ಅರ್ಹರಾದವರು ಅದನ್ನು ಮಾಡಲೇಬೇಕು. ಪಿತೃಪಕ್ಷದ ಪ್ರಾರಂಭದಲ್ಲಿ ಸೂರ್ಯನು ಕನ್ಯಾರಾಶಿ ಪ್ರವೇಶಿಸುವಲ್ಲಿಂದ ನಂತರ ತುಲಾ ರಾಶಿಗೆ ಹೋಗುವವರೆಗಿನ ಸಮಯದಲ್ಲಿ ಪಿತೃಗಳ ಆತ್ಮವು ಭೂಮಿಯಲ್ಲಿರುವ ತಮ್ಮ ವಂಶಜರ ಮನೆಗಳಿಗೆ ಬಂದು ಸಂಚರಿಸುತ್ತವೆ ಎಂಬ ನಂಬಿಕೆ. ಒಬ್ಬರ ಮೂರು ತಲೆಮಾರುವರೆಗಿನ ಪೂರ್ವಜರ ಆತ್ಮವು ಪಿತೃ ಲೋಕದಲ್ಲಿ ಅಂದರೆ ಭೂಮಿ ಮತ್ತು ಸ್ವರ್ಗದ ನಡುವಿನ ಪ್ರದೇಶದಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಶ್ರಾದ್ಧ ಮಾಡುವಾಗ ಈ ಲೋಕದಲ್ಲಿರುವ ಮೂರು ತಲೆಮಾರಿನ ಪೂರ್ವಜರಿಗೆ ಪಿಂಡ ಪ್ರದಾನ ಮತ್ತು ತರ್ಪಣ ಕೊಡುವ ಸಂಪ್ರದಾಯ.

**5. ಪಿತೃಗಳ ಹೆಸರಿನಿಂದ ಕೊಡಲಾದವುಗಳು ಅವರಿಗೆ ದೊರೆಯುತ್ತವೆಯೇ?**

**ಉತ್ತರ :** ಪಿತೃಗಳ ಹೆಸರಿನಲ್ಲಿ ಏನೆಲ್ಲ ಕೊಡಲಾಗುವುದೋ ಅದೆಲ್ಲವೂ ದೊರೆಯುತ್ತದೆ. ಅವರು ಯಾವ ಯೋನಿಯಲ್ಲಿಯೇ ಇರಲಿ. ಅವರ ಹೆಸರಿನಿಂದ ಕೊಡಲ್ಪಟ್ಟ ಪಿಂಡ ತರ್ಪಣವು ಅವರಿಗೆ ಅದೇ ಯೋನಿಗನು ಸಾರವಾಗಿ ಖಾದ್ಯ ಅಥವಾ ಪೇಯ ಪದಾರ್ಥಗಳ ರೂಪದಲ್ಲಿ ದೊರೆಯುತ್ತದೆ. ಹೇಗೆಂದರೆ ಪಿತೃವು ಪಶುಯೋನಿಯಲ್ಲಿದ್ದರೆ ಅವರ ಹೆಸರಿನಲ್ಲಿ ಕೊಡಲ್ಪಟ್ಟ ಅನ್ನವು ಅವರಿಗೆ ಹುಲ್ಲಾಗಿ ದೊರೆಯುವುದು. ದೇವಯೋನಿಯಲ್ಲಿದ್ದರೆ ಅಮೃತವಾಗಿ ದೊರೆಯುವುದು.



# ಪಾಪ ಕರ್ಮಗಳ ಲೆಕ್ಕ

-ಪ್ರಣವ

ಒಬ್ಬ ರಾಜನಿದ್ದ. ಆತ ಪ್ರತಿದಿನವೂ ವಿಪ್ರರಿಗೆ ಶ್ರದ್ಧೆಯಿಂದ ಅನ್ನಸಂತರ್ಪಣೆ ನಡೆಸುತ್ತಿದ್ದ. ಒಂದು ದಿನ, ಬಯಲು ಪ್ರದೇಶವೊಂದರಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಆಗ ಮೇಲೆ ಆಕಾಶದಲ್ಲಿ ಗಿಡುಗವೊಂದು ಸತ್ತ ಹಾವನ್ನು ಎತ್ತಿಕೊಂಡು ಹೋಗುತ್ತಿತ್ತು. ಆ ಸತ್ತ ಹಾವಿನ ಬಾಯಿಯಿಂದ ಒಂದು ಬಿಂದು ವಿಷ ರಾಜ ಹಂಚುತ್ತಿದ್ದ ಆಹಾರದ ಮೇಲೆ ಬಿದ್ದಿತು. ಹೀಗಾದದ್ದು ಯಾರಿಗೂ ಗೊತ್ತಾಗಲಿಲ್ಲ. ರಾಜ ಆಹಾರ ಹಂಚುವುದನ್ನು ಮುಂದುವರಿಸಿದ.

ರಾಜನಿಂದ ವಿಷದ ಆಹಾರವನ್ನು ಪಡೆದವನೊಬ್ಬ ಸತ್ತು ಹೋದ. ರಾಜ ಈ ಘಟನೆಯಿಂದ ತುಂಬಾ ನೊಂದುಕೊಂಡ ಈಗ. ಕರ್ಮಫಲದ ಹಂಚಿಕೆ ಮಾಡುವ ಚಿತ್ರಗುಪ್ತನಿಗೆ ಒಂದು ಸಂದಿಗ್ಧವುಂಟಾಯಿತು. ಈ ಘಟನೆಯಲ್ಲಿ ಸಾವಿನ ಪಾಪದ ಫಲವನ್ನು ಯಾರ ಲೆಕ್ಕಕ್ಕೆ ಬರೆಯುವುದೆಂದು ಅವನಿಗೆ ತಿಳಿಯಲಿಲ್ಲ. ಅದು ಗಿಡುಗನ ತಪ್ಪಲ್ಲ. ಯಾಕೆಂದರೆ ಅದು ತನ್ನ ಆಹಾರವನ್ನು ತೆಗೆದುಕೊಂಡು ಹೋಗುತ್ತಿತ್ತು, ಸತ್ತ ಹಾವಿನ ತಪ್ಪಂತೂ ಖಂಡಿತಾ ಅಲ್ಲ. ರಾಜನ ತಪ್ಪೂ ಆಗಿರಲು ಸಾಧ್ಯವಿಲ್ಲ. ರಾಜನಿಗೆ ಆಹಾರದ ಮೇಲೆ ವಿಷ ಬಿದ್ದಿದ್ದು ಗೊತ್ತೇ ಇರಲಿಲ್ಲ. ಚಿತ್ರಗುಪ್ತ ನೇರವಾಗಿ ಯಮಧರ್ಮನ ಬಳಿ ಹೋಗಿ ತನ್ನ ಸಮಸ್ಯೆಯನ್ನು ವಿವರಿಸಿದ. ಯಮಧರ್ಮ, ಅವನೊಡನೆ ತಾಳ್ಮೆಯಿಂದ ಕಾಯುವಂತೆ ಹಾಗೂ ಇನ್ನು ಕೆಲವೇ ದಿನಗಳಲ್ಲಿ ಆ ಸಮಸ್ಯೆಗೆ ಉತ್ತರ ಹೊಳೆಯುವುದಾಗಿಯೂ ತಿಳಿಸಿದ. ಆ ನಂತರ ಸ್ವಲ್ಪ ದಿನಗಳಲ್ಲಿ, ರಾಜನನ್ನು ಭೇಟಿಯಾಗಲು ಕೆಲವು ಮಂದಿ ವಿಪ್ರರು,ಆ ಊರನ್ನು ಪ್ರವೇಶಿಸಿದರು. ಅರಮನೆಯ ದಾರಿ ಅವರಿಗೆ ಗೊತ್ತಿರಲಿಲ್ಲ. ಅಲ್ಲಿಯೇ ಮಾರ್ಗದ ಬದಿಯಲ್ಲಿ ಕುಳಿತು ಹೂವು ಮಾರುತ್ತಿದ್ದ ಹೆಂಗಸಿನೊಡನೆ, 'ನಿನಗೆ ಅರಮನೆಯ ದಾರಿ ಗೊತ್ತಿದೆಯೇ? ನಾವು ಅಲ್ಲಿಗೆ ಹೇಗೆ ಹೋಗಬಹುದು? ಎಂದು ವಿಚಾರಿಸಿದರು. ಆಕೆ, ಒಪ್ಪಿ ಸರಿಯಾದ ದಾರಿಯನ್ನು ಅವರಿಗೆ ವಿವರಿಸಿ ಹೇಳಿದ ನಂತರ ಈ ಮಾತನ್ನು ಸೇರಿಸಿದಳು. ಆದರೆ ನೀವು ಜಾಗರೂಕರಾಗಿರಬೇಕು. ಏಕೆಂದರೆ ಆ ರಾಜ ಬ್ರಾಹ್ಮಣರನ್ನು ಕೊಲ್ಲುವನು. ಅವಳು ರಾಜನು ಮಾಡದ ಪಾಪದ ಬಗ್ಗೆ ಕೆಟ್ಟದಾಗಿ ವಿಮರ್ಶೆಮಾಡಿದ ಕ್ಷಣದಲ್ಲಿಯೇ ಚಿತ್ರಗುಪ್ತನ ಪ್ರಶ್ನೆಗೆ ಉತ್ತರ ದೊರಕಿತು.ಆತ ವಿಪ್ರ ಸತ್ತ ಪಾಪದ ಫಲವನ್ನು ಆಕೆಯ ಲೆಕ್ಕಕ್ಕೆ ಸೇರಿಸಿದ.

ಕಥೆಯ ನೀತಿ : ನಾವು ಯಾರಾದರೊಬ್ಬರ ಪಾಪದ ಬಗ್ಗೆ ಆಡಿಕೊಂಡರೆ, ಮತ್ತು ನಾವು ಆಡಿದ ಮಾತು ಸುಳ್ಳಾಗಿದ್ದರೆ, ಆ ಪಾಪದ ಫಲ ನಮ್ಮ ಲೆಕ್ಕಕ್ಕೇ ಸಂಪೂರ್ಣವಾಗಿ ಸೇರಿಸಲ್ಪಡುವುದು.ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ ವಿಚಾರವಿಲ್ಲದೆ ಪರರ ದೂಷಿಪುದಕ್ಕೆ ಚಾಚಿಕೊಂಡಿರುವಂಥ ನಾಲಿಗೆ. ಇದು ಅರೆಬರೆ ಮಾಹಿತಿ ಸಂಗ್ರಹಿಸಿ ಬೇಜವಾಬ್ದಾರಿಯುತವಾಗಿ ಮಾತನಾಡಬಾರದೆಂಬ ಪ್ರಬಲ ಸೂಚನೆ ನೀಡುತ್ತದೆ.

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ
ಹಾಗೂ ಬಣ್ಣವನ್ನು ತುಂಬಿರಿ.....



ಈ ಗೊಂಬೆಯನ್ನು ನೋಡಿ





1.ಗಣೇಶ ಚತುರ್ಥಿ

2.ವಾಮನ ಜಯಂತಿ

3. ಬಲರಾಮಜಯಂತಿ

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ



ಮಕ್ಕಳೇ ಇದರಲ್ಲಿರುವ ಯಾವುದೇ ಸಂಖ್ಯೆಯನ್ನು ಕೂಡಿದರೂ 9 ಬರಬೇಕು ಹಾಗೂ ವ್ಯವಕಲನ ಮಾಡಿದರೂ 9 ಬರಬೇಕು .
ಶಿಷ್ಯ ಯಾವ ದಾರಿಯಲ್ಲಿ ಹೋಗಿ ಗುರುವನ್ನು ಸೇರುತ್ತಾಳೆ.

| | | | | | | | |
|---|---|---|---|---|---|---|---|
| 5 +4 | 11 −2 | 10 −1 | 8 −2 | 13 +5 | 13 −6 | 12 +5 | 28 −3 |
| 10 −5 | 6 +3 | 19 −10 | 12 −15 | 14 +3 | 22 −10 | 48 −11 | 19 −2 |
| 5 +4 | 15 −6 | 18 −9 | 17 −8 | 25 −16 | 36 −27 | 1 +6 | 39 −2 |
| 7 +2 | 27 −18 | 8 +1 | 13 −4 | 13 −6 | 25 −16 | 49 −40 | 0 +9 |

ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | |
|---|---|---|---|---|---|
| ಮು | ಗಿ | ಇ | ಆ | ಮೇ | ಟೆ |
| ಚ | ಲೆ | ಯುಂ | ಳು | ಡೀ | ದ |

తిరుమల తిరుపతి దేవస్థానగళు

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01.ಕುರುಡು ಮಲೆ ಯಾವ ಜಿಲ್ಲೆಯಲ್ಲಿದೆ?..................................

02.ಅನಂತನ ವ್ರತವನ್ನು ಎಷ್ಟು ವರ್ಷಗಳ ಕಾಲ ಮಾಡಬೇಕು? ..................................

03.ಯಾವ ಮಾಸದಲ್ಲಿ ಬರುತ್ತದೆ? ..................................

04.ವರಾಹ ಎಂದರೇನು?..................................

05.ಕೋಲಾಸುರನನ್ನು ಸಂಹರಿಸಿದವರು ಯಾರು? ..................................

06.ಯಾರಿಂದ ಹರಿಕಥೆಯನ್ನು ಕೇಳಬೇಕು? ..................................

07.ಹನುಮನು ಯಾರನ್ನು ಕಿತ್ತಳೆ ಎಂದು ಭಾವಿಸಿದರು?..................................

08.ವಿಶ್ವಕರ್ಮನೆಂದರೇನು? ..................................

09.ಅಂಗಪ್ರದಕ್ಷಿಣೆ ಎಲ್ಲಿ ಮಾಡುವರು?..................................

10.ಅನಂತಪದ್ಮನಾಭ ಸ್ವಾಮಿಯು ಎಲ್ಲಿಗೆ ಹೋಗಿ ನೆಲಸಿದರು?.. ..................................

11.ಮೇಲುಕುಂಟೆಯಲ್ಲಿರುವ ದೇವಾಲಯ ಯಾವುದು?..................................

12. ಗೋವಿಂದದಾಸರ ಅಂಕಿತನಾಮ ಏನು? ..................................

13.ಚಂದ್ರನು ಯಾರ ಪುತ್ರಿಯರನ್ನು ವಿವಾಹವಾದನು?..................................

14 ದಶರಥನಿಗೆ ಯಾವ ಕರ್ಮದ ಫಲದಿಂದ ಸಂತಾನವುಂಟಾಗಲಿಲ್ಲ?..................................

15.ಪಾಪದ ಫಲವು ಯಾರಿಗೆ ಸೇರುತ್ತದೆ?..................................

## ಸೂಚನೆಗಳು

**26 ಕ್ವಿಜ್**

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್,**
**2 ನೇ ಅಂತಸ್ತು**
**ಕೆ.ಟಿ. ರಸ್ತೆ,**
**ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು** : | **ವಿಳಾಸ :** |
| **ಚಂದಾ ಸಂಖ್ಯೆ** : | |
| **ತಂದೆಯ ಹೆಸರು** : | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ:** |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ



- ಗಣೇಶನ ತಂದೆ ಯಾರು?
- ಹಿಂದೂಗಳಿಗೆ ಮೊದಲ ಆರಾಧ್ಯ ದೇವರು ಯಾರು?
- ಗಣೇಶನ ವಾಹನ ಯಾವುದು?
- ಗಣೇಶನಿಗೆ ಪ್ರಿಯವಾದ ನೈವೇದ್ಯ ಏನು?
- ಗಣೇಶನ ತಮ್ಮ ಯಾರು?
- ಗಣೇಶನನ್ನು ಯಾವ ತಿಥಿಯಲ್ಲಿ ಪೂಜಿಸುತ್ತಾರೆ?
- ಗಣೇಶನ ಮುಖ ಯಾರದು?
- ಗಣೇಶನ ಸೊಂಟದ ಆಭರಣ ಯಾವುದು?

1) ಶಿವ 2)ಗಣೇಶ 3)ಮೂಷಿಕ 4)ಕಡುಬು 5)ಸುಬ್ರಮಣ್ಯಸ್ವಾಮಿ 6)ಚೌತಿ 7) ಗಜಾಸುರ 8)ಹಾವು

## ಮಕ್ಕಳೇ ಈ ಕೆಳಗಿನ ಚಿತ್ರವನ್ನು ನೋಡಿ ಹೆಸರನ್ನು ಕಂಡು ಹಿಡಿಯಿರಿ







1. ಬಲರಾಮ
2. ಶೇಷಾಗಿರಿ

## ನೀತಿಯನ್ನು ತಿಳಿಯೋಣ!

ಚಿತ್ರಗಳನ್ನು ನೋಡಿಸಿ. ಕಥೆಯನ್ನು ಅರ್ಥ ಮಾಡಿಕೊಂಡು ನೀತಿಯನ್ನು ತಿಳಿದು ಕೊಳ್ಳಿ.



ಕಷ್ಟದಲ್ಲಿ ಸಹಾಯ ಮಾಡುವವನೇ ನಿಜವಾದ ಗೆಳೆಯ

# ಸ್ವಾಮಿಯವರೇ ಸಾಕ್ಷಿ

ಚಿತ್ರಕಥೆ

ಕಥೆ: ತೆಲುಗು ಮೂಲ : ಎಂ. ಗಂಗಾಧರಪ್ರಸಾದ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಕೆ. ದ್ವಾರಕನಾಥ್




ಹೀಗೆ ಎಷ್ಟು ದಿನ ತಪ್ಪಿಸಿಕೊಂಡು ಇರುತ್ತೀಯಾ ಕೋರ್ಟಿನಲ್ಲಿ ನೋಡಿ ಕೊಳ್ಳೋಣ ಎಂದು ಮನದಲ್ಲೇ ಅಂದು ಕೊಂಡನು.
ಒಂದು ದಿನ ನಾಗಭೂಷಣನ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾದ ಕೇಸಿಗಾಗಿ ರಾಮಯ್ಯ ವಿಚಾರಣೆಗೆ ಬಂದರು.
ನಾಗಭೂಷಣ ಮತ್ತು ರಾಮಯ್ಯ ಇಬ್ಬರೂ ನ್ಯಾಯಾಲಯಕ್ಕೆ ಹಾಜರಾದರು.
ನಿಮ್ಮ ಪರವಾಗಿ ವಕೀಲರು ಯಾರಾದರೂ ಇದ್ದಾರೆಯೇ ಎಂದು ನ್ಯಾಯಾಧೀಶರು ರಾಮಯ್ಯನನ್ನು ಕೇಳಿದರು. ಆಗ ರಾಮಯ್ಯ ನ್ಯಾಯ ನನ್ನ ಕಡೆ ಇದೆ. ವಕೀಲರು ಯಾಕೆ? ನಾನೇ ವಾದ ಮಾಡಿಕೊಳ್ಳುತ್ತೇನೆ ಎಂದು ರಾಮಯ್ಯ ಉತ್ತರಿಸಿದರು.
ನ್ಯಾಯಾಧೀಶರೊಡನೆ... ಅಯ್ಯಾ! ಈ ರಾಮಯ್ಯ... ನನ್ನಿಂದ ಹಣ ಪಡೆದು ಇಲ್ಲಿಯವರೆಗೆ ಅಸಲು ಮತ್ತು ಬಡ್ಡಿಯನ್ನು ಕಟ್ಟಿಲ್ಲ ನೀವೇ ನನಗೆ ನ್ಯಾಯ ಕೊಡಿಸಿ ಪ್ರಭು
ವೆಂಕಟೇಶ್ವರ ಈ ತಪ್ಪಾದ ಕೇಸ್‌ನಿಂದ ನನ್ನನ್ನು ನೀನೇ ಕಾಪಾಡು ತಂದೇ!
ಅಯ್ಯಾ, ಬಹಳ ಹಿಂದೆಯೇ ನಾನು ಬಾಕಿ ಹಣವನ್ನು ಕೊಟ್ಟಿದ್ದೇನೆ ಪ್ರಭು ಆದರೆ, ಅವರು ಒಂದು ವರ್ಷದಿಂದ ನನ್ನ ಪ್ರಾಮಿಸರಿ ನೋಟ್ ಅನ್ನು ನನಗೆ ಹಿಂತಿರುಗಿಸದೆ ತಿರುಗಿಸುತ್ತಿದ್ದಾರೆ. ಮೇಲಾಗಿ ಈಗ ನನ್ನ ವಿರುದ್ಧ ಅಕ್ರಮವಾಗಿ ಕೇಸನ್ನು ದಾಖಲಿಸಿದ್ದಾರೆ.
ರಾಮಯ್ಯ ನೀವು ಹಣವನ್ನು ಪಾವತಿಸಿದ್ದಕ್ಕೆ ಸಾಕ್ಷಿ ಏನು? ಎಂದು ಕೇಳಿದರು ನ್ಯಾಯಾಧೀಶಕರು.
ದೇವರನನ್ನು ನೆನದು ನಡೆದುದ್ದನ್ನು ನ್ಯಾಯಾಧೀಶರ ಬಳಿ ತಿಳಿಸಿದರು.
ತಬ್ಬಿಬ್ಬಿದ ರಾಮಯ್ಯ, ನ್ಯಾಯಾಧೀಶರೊಂದಿಗೆ ಏಳು ಬೆಟ್ಟದೊಡೆಯನ ಮೇಲೆ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಅರ್ಪಿಸಿದವನು ನಾನು ಕೆಲವು ದಿನಗಳ ಮುಂಚೆಯೇ ಹಣವನ್ನು ಹಿಂದಿರುಗಿಸಿದ್ದೇನೆ ನನ್ನನ್ನು ನಂಬಿ . ಆದರೆ ತನ್ನ ಗೆಳಯನಿಗೆ ಮೋಸ ಮಾಡುತ್ತಾನೆಂದು ನಾನು ತಿಳಿದಿರಲಿಲ್ಲ. ನೀವೇ ನನ್ನನ್ನು ಕಾಪಾಡಬೇಕು ಎಂದು ನಮಸ್ಕರಿಸಿದನು.
ಕೂಡಲೇ ಪ್ರಾಮಿಸರಿ ನೋಟ್ ಅನ್ನು ಕೂಲಂಕುಷವಾಗಿ ಪರಿಶೀಲಿಸಿದ ನ್ಯಾಯಾಧೀಶರು ಈ ಕೆಳಗಿನಂತೆ ತೀರ್ಪು ನೀಡಿದರು.
ಈ ಪ್ರಾಮಿಸರಿ ನೋಟ್‌ನಲ್ಲಿ ರೆವಿನ್ಯೂ ಸ್ಟ್ಯಾಂಪ್ ಅನ್ನು ಅಂಟಿಸಿಲ್ಲ ಆದ್ದರಿಂದ ಈ ಪ್ರಾಮಿಸರಿ ನೋಟ್‌ಗೆ ಬೆಲೆ ಇಲ್ಲ. ಅದಕ್ಕಾಗಿ ಈ ಕೇಸನ್ನು ರದ್ದು ಮಾಡಲಾಗಿದೆ ಎಂದರು.
ತಿರುಮಲೆ ಶ್ರೀವೆಂಕಟೇಶ್ವರ ಸ್ವಾಮಿಯು ತನ್ನ ಭಕ್ತರನ್ನು ತಾನೇ ರಕ್ಷಿಸುತ್ತಾನೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./
ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಅನ್‌ಲೈನ್‌ಗಾಗಿ ( https://ttdevasthanams.ap.gov.in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ ಪ್ರೆಸ್. ಎರಡನೇ ಅಂತಸ್ತು,ಕೆ. ಟಿ.ರೋಡ್ಡು,ತಿರುಪತಿ - 517 507.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.





16-07-2024 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ ಆಣಿವಾರ ಆಸ್ಥಾನದಲ್ಲಿ ಪಾಲ್ಗೊಂಡ ತಿರುಮಲೆ ಶ್ರೀ ಶ್ರೀ ಶ್ರೀ ಪೆದ್ದ ಜೀಯರ್ ಸ್ವಾಮಿಯವರು, ಶ್ರೀ ಶ್ರೀ ಶ್ರೀ ಚಿನ್ನ ಜೀಯರ್ ಸ್ವಾಮಿಯವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಯವರು ಪಾಲ್ಗೊಂಡರು.

22-07-2024 ರಂದು ಅಪ್ಪಲಾಯಗುಂಟ ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ ದೃಶ್ಯ





29-07-2024 ರಂದು ಆಡಿಕೃತ್ತಿಕ ಸಂದರ್ಭವಾಗಿ ತಿರುತ್ತಣಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯವರಿಗೆ ತಿ.ತಿ.ದೇ., ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ದಂಪತಿಗಳು

23-07-2024 ರಂದು ತಿರುಮಲೆ ಕಲ್ಯಾಣಕಟ್ಟೆಯಲ್ಲಿ ಭಕ್ತರೊಂದಿಗೆ ಮಾತನಾಡುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ.ಶ್ಯಾಮಲರಾವ್, ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಣಾಹಧಿಕಾರಿ ಶ್ರೀಮತಿ ಎಂ. ಗೌತಮಿ, ಐ.ಎ.ಎಸ್., ರವರು ಮತ್ತು ಪ್ರಧಾನ ಪಿ.ಆರ್.ಓ. ಡಾ॥ ಟಿ. ರವಿ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡ ದೃಶ್ಯ





27-07-2024 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ., ನೂತನ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿಯಾಗಿ ಪ್ರಮಾಣ ಸ್ವೀಕರಿಸಿದ ಶ್ರೀ ಸಿ. ಹೆಚ್.ವೆಂಕಯ್ಯ ಚೌದರಿ, ಐ.ಆರ್.ಎಸ್., ದಂಪತಿಗಳು. ಇವರಿಗೆ ಸ್ವಾಮಿಯವರ ತೀರ್ಥಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ರವರು

07-08-2024 ರಂದು ತಿ.ತಿ.ದೇ., ನೂತನ ಮುಖ್ಯ ವಿಜಿಲೆನ್ಸ್ ಮತ್ತು ಭದ್ರತಾಧಿಕಾರಿಯಾಗಿ ಶ್ರೀ ಎಸ್. ಶ್ರೀಧರ್, ಐ.ಪಿ.ಎಸ್., ರವರು ಪ್ರಮಾಣ ಸ್ವೀಕರಿಸಿ ನಂತರ ಕುಟುಂಬ ಸಮೇತವಾಗಿ ಸ್ವಾಮಿಯವರ ದರ್ಶನ ಪಡೆದರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-08-2024 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/ 2024-2026" Posting on 5th of Every Month.

